ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 'ಸಿಂಗಾಪುರ ಕೆಲವು ಟಿಪ್ಪಣಿಗಳು', ಡಾ.ಡಿ.ವಿ.ಗುರುಪ್ರಸಾದ್ ಅವರ 'ಪಾಕಿಸ್ತಾನದ ಐ.ಎಸ್.ಐ', ಎಚ್.ಡುಂಡಿರಾಜ್ ಅವರ 'ಒಲವಿನ ಒಲಂಪಿಕ್ಸ್' ಕೃತಿಗಳು ಸಪ್ನ ಬುಕ್‌ಹೌಸ್‌ನಲ್ಲಿ ಬುಧವಾರ ಲೋಕಾರ್ಪಣೆಗೊಂಡವು. ಮೂರೂ ಕೃತಿಗಳ ಲೇಖಕರು, ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಜಗದೀಶ ಶರ್ಮಾ ಸಂಪ ಹಾಗೂ ಸಪ್ನ ಬುಕ್‌ಹೌಸ್ ಮುಖ್ಯಸ್ಥ ನಿತಿನ್ ಷಾ ಉಪಸ್ಥಿತರಿದ್ದರು.

ಗವರ್ನರ್‌ಗೆ ಝಡ್ ಶ್ರೇಣಿ ಭದ್ರತೆ | ಬುಲೆಟ್ ಪ್ರೂಫ್ ವಾಹನ

ರಾಜಭವನಕ್ಕೆ ಸರ್ಪಗಾವಲು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬೆನ್ನಲ್ಲೇ, ರಾಜ್ಯಾದ್ಯಂತ ರಾಜ್ಯಪಾಲರ ವಿರುದ್ಧ ತೀವ್ರ ವಿರೋಧ ವ್ಯಕ್ತವಾಗುತ್ತಿರುವುದರಿಂದ, ಭದ್ರತೆಯನ್ನು ಸರಕಾರ ಒದಗಿಸಿದೆ.

ರಾಜ್ಯಪಾಲರ ನಿರ್ಧಾರ ಖಂಡಿಸಿ ಕಾಂಗ್ರೆಸ್ ಸೇರಿ ವಿವಿಧ ಸಂಘಟನೆಳು ಪ್ರತಿಭಟನೆ ನಡೆಸುತ್ತಿದ್ದು, ಪ್ರಾಸಿಕ್ಯೂಷನ್ ಹಿಂಪಡೆಬೇಕು ಎನ್ನುವ ಒತ್ತಡ ರಾಜ್ಯಾದ್ಯಂತ ಕೇಳಿಬಂದಿದೆ. ಈ ನಡುವೆ ರಾಜ್ಯಪಾಲರ ಮೇಲೆ ದಾಳಿಯಾಗುವ ಸಾಧ್ಯತೆಯಿದೆ ಎನ್ನುವ ಎಚ್ಚರಿಕೆಯ ಸಂದೇಶ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿಗೆ ಕೇಂದ್ರ ಗುಪ್ತಚರ ವಿಭಾಗದ ಮುಖ್ಯಸ್ಥರು ಪತ್ರ ಬರೆದಿದ್ದು, ರಾಜ್ಯಪಾಲರ ಮೇಲೆ ಕೆಲವು ಕಾರಣಗಳನ್ನಿಟ್ಟುಕೊಂಡು ಸಮಾಜಘಾತುಕ ಶಕ್ತಿಗಳು ದಾಳಿ ನಡೆಸುವ ಸಾಧ್ಯತೆಯಿದೆ ಎನ್ನುವ ಎಚ್ಚರಿಕೆ ನೀಡಿದ ಬೆನ್ನಲ್ಲೇ ಬುಲೆಟ್ ಪ್ರೂಫ್ ವಾಹನವನ್ನು ಒದಗಿಸಿದೆ.

ಆ.20ರಂದು ಅವರು ಇಂದೋರ್‌ಗೆ ಕಾರ್ಯನಿಮಿತ್ತ ಹೋಗಿದ್ದರು. ಆ.21ರಂದು ಅಲ್ಲಿಂದ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಅಲ್ಲಿಂದ ಬರುತ್ತಲೇ ಅವರು ಬುಲೆಟ್ ಪ್ರೂಫ್ ಕಾರನ್ನು ತರಿಸಿಕೊಂಡು ಅದರಲ್ಲಿ ಪ್ರಯಾಣ ಬೆಳೆಸಿದ್ದಾರೆ. ಕರ್ನಾಟಕ ಪೊಲೀಸ್‌ನ ಗುಪ್ತಚರ ಇಲಾಖೆಯಿಂದ ಅವರಿಗೆ ಬುಲೆಟ್ ಕಾರನ್ನು ನೀಡಲಾಗಿದೆ.

ಸಾಮಾನ್ಯವಾಗಿ ರಾಜ್ಯಪಾಲರಿಗೆ ಝಡ್ ಭದ್ರತೆಯನ್ನೇ ನೀಡಲಾಗುತ್ತದೆ. ಆದರೆ ಗೆಹ್ಲೋಥ್ ಅವರು ಬಳಸುತ್ತಿರಲಿಲ್ಲ. ಆದರೀಗ ಕೇಂದ್ರ ಗುಪ್ತಚರ ಇಲಾಖೆಯ ಮಾಹಿತಿ ಬೆನ್ನಲ್ಲೇ, ಬುಧವಾರದಿಂದ ಬುಲೆಟ್ ಪ್ರೂಫ್ ಕಾರಿನ ಬಳಕೆ ಆರಂಭಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

→ 4

ನನ್ನನ್ನು ಬಂಧಿಸಲು 100 ಸಿದ್ದರಾಮಯ್ಯರು ಬೇಕು

ಏನಾದರೂ ಮಾಡಿ ಕುಮಾರಸ್ವಾಮಿಯನ್ನು ಜೈಲಿಗೆ ಕಳುಹಿಸಲೇಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರು ಕುತಂತ್ರ ಹೆಣೆದಿದ್ದಾರೆ. ನಾನು ಒಂದು ದಿನವಾ ದರೂ ಜೈಲಿನಲ್ಲಿರಬೇಕು ಎಂಬುದು ಅವರ ಆಸೆ. ನನ್ನನ್ನು ಬಂಧಿಸಲು ನೂರು ಸಿದ್ದರಾಮಯ್ಯ ಹುಟ್ಟಿ ಬರಬೇಕು. ಎಸ್‌ಐಟಿ ತನಿಖೆ ಪೂರ್ಣಗೊಂಡಿದ್ದರೆ ಸುಪ್ರೀಂ ಕೋರ್ಟ್ ಮುಂದೆ ಯಾಕೆ ಇನ್ನೂ ಸಲ್ಲಿಸಿಲ್ಲ? ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಬಂಧಿಸುವುದಕ್ಕೆ ಒಬ್ಬ ಪೊಲೀಸ್ ಪೇದೆ ಸಾಕು

ಕುಮಾರಸ್ವಾಮಿಯನ್ನು ಬಂಧಿಸೋಕೆ ನೂರು ಸಿದ್ದರಾಮಯ್ಯ ಬೇಕಾಗಿಲ್ಲ. ಒಬ್ಬ ಪೊಲೀಸ್ ಪೇದೆ ಸಾಕು. ಯಾರನ್ನಾದರೂ ಬಂಧಿಸುವುದು ಪೊಲೀಸ್ ಇಲಾಖೆಯವರೇ ಹೊರತು ನಾನಲ್ಲ. ಬಂಧಿಸುವ ಅಗತ್ಯಬಿದ್ದರೆ ಮುಲಾಜಿಲ್ಲದೆ ಬಂಧಿಸು ತ್ತೇವೆ. ಕುಮಾರ ಸ್ವಾಮಿ ಮೇಲೆ ಈಗಾಗಲೇ ಲೋಕಾಯುಕ್ತ, ಎಸಿಬಿ ತನಿಖೆ ಮಾಡಿವೆ. ಸಾಕಷ್ಟು ದಾಖಲೆ ಸಿಕ್ಕಿವೆ. ಕುಮಾರಸ್ವಾಮಿಗೆ ಭಯ ಬಂದಿದೆ. ಅದಕ್ಕೆ ಹೀಗೆಲ್ಲ ಮಾತನಾಡುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಇಂದು ಬಿಜೆಪಿ ಪ್ರತಿಭಟನೆ

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ಗುರುವಾರ ರಾಜ್ಯಾದ್ಯಂತ ಹೋರಾಟ ನಡೆಸಲು ಮುಂದಾಗಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಬೇಕು ಎಂದು ಬಿಜೆಪಿಯ ಎಲ್ಲಾ ಮೋರ್ಚಗಳಿಗೆ ಸೂಚನೆ ನೀಡಲಾಗಿದೆ. ಬೆಂಗಳೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದ್ದು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು ಸೇರಿದಂತೆ ಬೃಹತ್ ಪ್ರಮಾಣದಲ್ಲಿ ಸೇರಬೇಕೆಂದು ಸೂಚಿಸಲಾಗಿದೆ.

ಪುಟ ತೆರೆದಂತೆ...

ಬದುಕು ನಾವು ಅಂದುಕೊಂಡಿದ್ದಕ್ಕಿಂತ ಸರಳ, ಸುಲಭ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಇವರ ಮನ ಬಾಂಗ್ಲಾ ಹಿಂದೂಗಳಿಗೆ ಮಿಡಿಯಲಿಲ್ಲ

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
ಸಂ.ಗಮ | 7

ದಾರಿದೀಪೋಕ್ತಿ

ನಾವು ಕೇಳುವುದೆಲ್ಲವೂ ಬೇರೆಯವರ ಅಭಿಪ್ರಾಯವೇ ಹೊರತು, ವಾಸ್ತವ ಅಲ್ಲ. ನಾವು ನೋಡುವುದೆಲ್ಲವೂ ನಮ್ಮ ದೃಷ್ಟಿಗೆ ನಿಲುಕಿದ್ದೇ ಹೊರತು, ಸತ್ಯವಲ್ಲ. ಹೀಗಾಗಿ ನಾವು ಕೇಳಿದ್ದು ಮತ್ತು ನೋಡಿದ್ದನ್ನೇ ನಿಜ ಎಂಬ ಭಾವನೆಯಲ್ಲಿ ಇರಬಾರದು.

ವಕ್ರತುಂಡೋಕ್ತಿ

ಗಣಿತದಲ್ಲಿ ಪದೇ ಪದೆ ಫೇಲಾಗುವ ಒಂದು ಸಮಸ್ಯೆ ಅಂದ್ರೆ ನಿಖರವಾಗಿ ಎಷ್ಟು ಸಲ ಫೇಲಾಗಿದ್ದೇವೆ ಎಂಬುದು ಗೊತ್ತಾಗದಿರುವುದು.

ಮಹದಾಯಿ ನ್ಯಾಯಮಂಡಳಿ ಅವಧಿ ವಿಸ್ತರಣೆ

ದೆಹಲಿ: ಮಹದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವರದಿ ಸಲ್ಲಿಸುವ ಸಂಬಂಧ ನ್ಯಾಯಮಂಡಳಿಯ ಅವಧಿಯನ್ನು ಆಗಸ್ಟ್ 20ರಿಂದ ಅನ್ವಯವಾಗುವಂತೆ ಆರು ತಿಂಗಳು ವಿಸ್ತರಿಸಲಾಗಿದೆ.

ನಗರಸಭೆ ಚುನಾವಣೆ ಪ್ರೀತಂ ಗೌಡಗೆ ಜೆಡಿಎಸ್ ಟಕ್ಕರ್

ಹಾಸನ: ಜೆಡಿಎಸ್ ಸದಸ್ಯ ಎಂ ಚಂದ್ರೇಗೌಡ ನಗರಸಭೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಿಜೆಪಿ ಶಿಲ್ಪಾವಿಕ್ರಂಗೆ ಸೋಲಾಗಿದೆ. ಬಿಜೆಪಿಯ ಬಂಡಾಯ ಅಭ್ಯರ್ಥಿ ಲತಾದೇವಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಭರ್ತಿಯಾಗಿರುವ ಆಲಮಟ್ಟಿ ಜಲಾಶಯಕ್ಕೆ ಬುಧವಾರ ಭೇಟಿ ನೀಡಿರುವ ಸಿಎಂ ಸಿದ್ದರಾಮಯ್ಯ ಅವರು ಕೃಷ್ಣಾ ನದಿಗೆ ಬಾಗಿನ ಅರ್ಪಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತಿತರ ಸಚಿವರು, ಶಾಸಕರು ಇದ್ದರು.

ನಟ ದರ್ಶನ್ ಎ 1 ಆರೋಪಿ?

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ಮುಕ್ತಾಯದ ಹಂತಕ್ಕೆ ತಲುಪಿದ್ದು, ಚಾರ್ಜ್‌ಶೀಟ್‌ನಲ್ಲಿ ನಟ ದರ್ಶನ್ ಅವರನ್ನು ಆರೋಪಿ ನಂ.1 ಸ್ಥಾನ ನೀಡಲಾಗಿದೆ ಎಂದು ತಿಳಿದು ಬಂದಿದೆ.

ಪೋಲೆಂಡ್‌ನಿಂದ ಉಕ್ರೇನ್‌ಗೆ ಮೋದಿ ರೈಲು ಪ್ರಯಾಣ

ದೆಹಲಿ: ಬುಧವಾರ ಪೋಲೆಂಡ್‌ಗೆ ತೆರಳಿರುವ ಪ್ರಧಾನಿ ಮೋದಿ ಅಲ್ಲಿಂದ ಆ.23ಕ್ಕೆ ಯುದ್ಧ ಪೀಡಿತ ಉಕ್ರೇನ್‌ಗೆ ಭೇಟಿ ನೀಡಲಿದ್ದಾರೆ.ಪೋಲೆಂಡ್‌ನಿಂದ ಉಕ್ರೇನ್‌ಗೆ ತೆರಳಲು ಮತ್ತು ಅಲ್ಲಿಂದ ಪೋಲೆಂಡ್‌ಗೆ ವಾಪಸ್ಸಾಗಲು ಮೋದಿ ರೈಲಿನಲ್ಲಿ ಪ್ರಯಾಣ ಮಾಡಲಿದ್ದಾರೆ.

ಗಜಪಡೆಗೆ ಚಾಲನೆ ನಾಡಹಬ್ಬ ದಸರಾ ಸಂಭ್ರಮಕ್ಕೆ ಮುನ್ನುಡಿ

ಮೈಸೂರು: ಹುಣಸೂರು ತಾಲೂಕಿನ ವೀರನಹೊಸಹಳ್ಳಿಯಲ್ಲಿ ಬುಧವಾರ ದಸರಾ ಸಂಭ್ರಮಕ್ಕೆ ಗಜ ಪಯಣವು ಮುನ್ನುಡಿ ಬರೆಯಿತು. ಅಭಿಮನ್ಯು ಸೇರಿ 9 ಆನೆಗಳಿಗೆ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಈಶ್ವರ ಖಂಡ್ರೆ ಪೂಜೆ ಸಲ್ಲಿಸಿದರು.

ಐಟಿ, ಇಡಿ, ಸಿಬಿಐ,ರಾಜ್ಯಪಾಲರನ್ನು ಬಳಸಿಕೊಂಡು ಬಿಜೆಪಿಯೇತರ ಸರ್ಕಾರ ಅಸ್ಥಿರಗೊಳಿಸಲು ಯತ್ನ

ಕನ್ನಡಿಗರು ಸಂವಿಧಾನ ಉಳಿಸಿ, ಪ್ರಜಾಸತ್ತೆಯನ್ನು ಗಟ್ಟಿಗೊಳಿಸಬೇಕಿದೆ

ಪ್ರಚಲಿತ ರಾಜಕೀಯ ವಿದ್ಯಮಾನಗಳ ಬಗ್ಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ವಿಶ್ಲೇಷಣೆ ಇಲ್ಲಿದೆ.

ಎನ್. ಚಲುವರಾಯಸ್ವಾಮಿ
ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು

ಬಿಜೆಪಿಯ ದುರಾಡಳಿತ, ಸ್ವಜನಪಕ್ಷಪಾತದಿಂದ ಬೇಸತ್ತ ಕರ್ನಾಟಕ ರಾಜ್ಯದ ಜನತೆ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿ ಉತ್ತಮ ಆಡಳಿತ ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಸಂವಿಧಾನದ ಉಳಿವು, ಬಡವರ, ದೀನದಲಿತರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಪಂಚ ಗ್ಯಾರಂಟಿಗಳನ್ನು ನೀಡಿದ್ದು ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಜನರ ವಿಶ್ವಾಸ ಗೆದ್ದಿದೆ. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿರುವ ಬಿಜೆಪಿ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಮತ್ತು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಗಳನ್ನು ಘೋಷಣೆ ಮಾಡುವ ಮೂಲಕ ಕಾಂಗ್ರೆಸ್ ಹಾದಿಯನ್ನು ಅನುಕರಿಸಲಾರಂಭಿಸಿದೆ.

ಕಾಂಗ್ರೆಸ್ ನ ಪಂಚ ಗ್ಯಾರಂಟಿ ಯೋಜನೆಗಳು ಹಾಗೂ ಜನಪರ ಕಾರ್ಯಕ್ರಮಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ ಜನಪ್ರಿಯತೆ ರಾಜ್ಯದಲ್ಲಿ ದಿನೇದಿನೇ ಹೆಚ್ಚಾಗತೊಡಗಿದೆ. ಕಾಂಗ್ರೆಸ್ ಪಕ್ಷದ ಯೋಜನೆಗಳು ಮನೆಮಾತಾಗುತ್ತಿದ್ದು ಪಕ್ಷದ ಪ್ರಖರತೆ ಹೆಚ್ಚಾಗುತ್ತಿರುವುದನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಪಕ್ಷಗಳು ಹೇಗಾದರೂ ಮಾಡಿ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಹುನ್ನಾರಕ್ಕೆ ಯತ್ನಿಸಲಾರಂಭಿಸಿವೆ. ಬಡವರ ಕಾರ್ಯಕ್ರಮಗಳಿಗೆ ಎಳ್ಳುನೀರು ಬಿಡುವುದರ ಜೊತೆಗೆ ಜನಾದೇಶವನ್ನು ಧಿಕ್ಕರಿಸುವ ಕಾರ್ಯಕ್ಕೆ ಮೈತ್ರಿ ಪಕ್ಷಗಳು ಮುಂದಾಗುತ್ತಿರುವುದು ನಿಜಕ್ಕೂ ದುರದೃಷ್ಟಕರ. ಇದೀಗ ಕನ್ನಡಿಗರು ಸಂವಿಧಾನವನ್ನು ಉಳಿಸಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕಿದೆ.

ಸಂವಿಧಾನಬಾಹಿರ ಕೃತ್ಯ: ಪ್ರಾಮಾಣಿಕ ಮತ್ತು ಜನಪರ ಸರ್ಕಾರವನ್ನು ಮುನ್ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನೀಡಿರುವ ಸುಳ್ಳು ದೂರನ್ನು ಆಧರಿಸಿ ರಾಜ್ಯಪಾಲರು ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು 136 ಜನ ಶಾಸಕರನ್ನು ಆಯ್ಕೆ ಮಾಡಿದ 1 ಕೋಟಿ 67 ಲಕ್ಷ 89 ಸಾವಿರದ 305 ಮತದಾರರಿಗೆ ಮಾಡುತ್ತಿರುವ ಅವಮಾನ ಮಾತ್ರವಲ್ಲದೆ ಸಂವಿಧಾನಬಾಹಿರ ಕೃತ್ಯವಾಗಿದೆ. ರಾಜ್ಯದ ಜನತೆ 42.88% ಮತಗಳ ಬೆಂಬಲದೊಂದಿಗೆ ಪೂರ್ಣ ಬಹುಮತದೊಂದಿಗೆ ಕಾಂಗ್ರೆಸ್ ಸರ್ಕಾರವನ್ನು ವಿಧಾನಸೌಧದಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ.

ಹಾಗೆಯೇ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ 45.43% ಮತಗಳನ್ನು ನೀಡುವ ಮೂಲಕ 9 ಸ್ಥಾನಗಳನ್ನು ನೀಡಿ 1 ಕೋಟಿ 75 ಲಕ್ಷ 54 ಸಾವಿರದ 381 ಮತಗಳನ್ನು ನೀಡುವ ಮೂಲಕ ವಿಧಾನಸಭೆ ಚುನಾವಣೆಗಿಂತ 3% ಹೆಚ್ಚಿನ ಬೆಂಬಲವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಿದ್ದಾರೆ. ಇದು ಕಾಂಗ್ರೆಸ್ ಯೋಜನೆಗಳಿಗೆ ಸಿಕ್ಕಿರುವ ಜನಮನ್ನಣೆಗೆ ಸಾಕ್ಷಿಯಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದ ಜನತೆಗೆ ನೀಡಿದ್ದ ವಾಗ್ದಾನದಂತೆ ಜಾರಿಗೊಳಿಸಿರುವ 5 ಗ್ಯಾರಂಟಿ ಯೋಜನೆಗಳಿಗೆ ರಾಜ್ಯದಲ್ಲಿ 4 ಕೋಟಿ 40 ಲಕ್ಷ ಫಲಾನುಭವಿಗಳಿದ್ದಾರೆ. ಇವರಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನ ಕಾರ್ಯಕರ್ತರೂ ಸೇರಿದ್ದಾರೆ. ಈ ಯೋಜನೆಗಳ ವಿವರಕ್ಕೆ ಬರೋಣ.

→ 4

ಸಮಾಚಾರ ಸಣ್ಣದಲ್ಲ

ಡೆಲಿವರಿ ಬಾಯ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

ಬೆಂಗಳೂರು: ಫುಡ್ ಡೆಲಿವರಿ ಮಾಡಲು ಬಂದಿದ್ದ ವೇಳೆ ಜೊಮ್ಯಾಟೊ ಡೆಲಿವರಿ ಬಾಯ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ನಗರದ ವಿನಾಯಕ ನಗರ ಲೇಔಟ್‌ನಲ್ಲಿ ನಡೆದಿದೆ. ಮಂಗಳವಾರ ಮಧ್ಯರಾತ್ರಿ ಡೆಲಿವರಿ ಬಾಯ್ ಮೇಲೆ ನಡೆದ ಹಲ್ಲೆಯ ವಿಡಿಯೊ, ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವಿನಾಯಕ ನಗರ ಲೇಔಟ್‌ನಲ್ಲಿ ಮನೆಯೊಂದರಿಂದ ಹೊರಬರುತ್ತಿದ್ದಾಗ ಡಿಯೋ ಸ್ಕೂಟರ್‌ನಲ್ಲಿ ಬಂದ ಮೂವರು ಯುವಕರು, ಡೆಲಿವರಿ ಬಾಯ್ ಮೇಲೆ ಏಕಾಏಕಿ ಹಲ್ಲೆ ಮಾಡಲು ಮುಂದಾಗಿದ್ದಾರೆ. ಯುವಕರು ಮಾರಕಾಸ್ತ್ರ ತೆಗೆಯುತ್ತಿದ್ದಂತೆ ಡೆಲಿವರಿ ಬಾಯ್ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಆತನನ್ನು ಅಟ್ಟಾಡಿಸಿಕೊಂಡು ಹೋಗಿರುವ ಯುವಕರು, ಮೊಬೈಲ್ ಹಾಗೂ ಹಣ ದೋಚಿ ಪರಾರಿಯಾಗಿದ್ದಾರೆ. ಡೆಲಿವರಿ ಬಾಯ್ ಮೇಲೆ ನಡೆದ ದಾಳಿ ದೃಶ್ಯ ಮನೆಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಸಂಚಾರ ನಿಯಮ ಉಲ್ಲಂಘನೆ: 870 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಸವಾರರ ವಿರುದ್ಧ ಮಂಗಳವಾರ ವಿಶೇಷ ಕಾರ್ಯಾಚರಣೆ ನಡೆಸಿದ ಪೂರ್ವ ಸಂಚಾರ ವಿಭಾಗದ ಪೊಲೀಸರು 870 ಪ್ರಕರಣ ದಾಖಲಿಸಿ 4.35 ಲಕ್ಷ ರು. ದಂಡ ಸಂಗ್ರಹಿಸಿದ್ದಾರೆ. ವಾಹನ ಸವಾರರು ಜವಾಬ್ದಾರಿ ಮರೆತು ಸಂಚಾರ ನಿಯಮ ಉಲ್ಲಂಘಿಸಿ ಇತರ ವಾಹನ ಸವಾರರಿಗೆ ಸಮಸ್ಯೆ ಮಾಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಬಂದಿದ್ದವು. ಹೀಗಾಗಿ, ದಿಢೀರ್ ಕಾರ್ಯಾಚರಣೆ ನಡೆಸಿದ ಪೊಲೀಸರು ಹಲವೆಡೆ ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಸವಾರರನ್ನು ತಡೆದು ಶಿಸ್ತುಕ್ರಮದ ಬಿಸಿ ಮುಟ್ಟಿಸಿದ್ದಾರೆ.

ಸಾಯಿ ಮಿನರಲ್ಸ್‌ನ ಅನುಮತಿ ಪತ್ರದಲ್ಲಿರೋದು ನನ್ನ ಹಸ್ತಾಕ್ಷರವಲ್ಲ | ನನ್ನ ವಿರುದ್ಧ ಕಾಂಗ್ರೆಸ್ ಸೇಡಿನ ರಾಜಕಾರಣ-ಕುಮಾರಸ್ವಾಮಿ ಟೀಕೆ | ಕಾಂಗ್ರೆಸ್ ವಿರುದ್ಧ ದೊಡ್ಡ ಧ್ವನಿಯಲ್ಲಿ ಮಾತನಾಡಿದ್ದಕ್ಕೆ ನನ್ನ ವಿರುದ್ಧ ಪ್ರಕರಣ

ಅಕ್ರಮ ಗಣಿಯಲ್ಲಿ ನನ್ನ ಪಾತ್ರವಿಲ್ಲ: ಎಚ್‌ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗಣಿ ಪ್ರಕರಣದಲ್ಲಿ ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳುವ ಮೂಲಕ ಹೆದರಿಸುವ ಪ್ರಯತ್ನವನ್ನು ಸರಕಾರ ಮಾಡುತ್ತಿದೆ. ಸರಕಾರದ ಈ ತಂತ್ರ ಫಲಿಸಲ್ಲ. ಈ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಎಲ್ಲದರ ಬಗ್ಗೆಯೂ ಕಾನೂನು ಹೋರಾಟ ನಡೆಸುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕುಮಾರಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದ ಬೆನ್ನಲ್ಲೆ ತುರ್ತು ಸುದ್ದಿಗೋಷ್ಠಿ ನಡೆಸಿ, ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ಸತ್ತಿರುವ ಪ್ರಕರಣವನ್ನು ಹಿಡಿದುಕೊಂಡು ನನ್ನನ್ನು ಹೆದುರಿಸುವುದು ಬೇಡ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರೇ ಜೀವವಿರುವ ಪ್ರಕರಣವಿದ್ದರೆ ತನ್ನಿ. ಸುಮ್ಮನೆ ಯಾವುದೋ ಪ್ರಕರಣಕ್ಕೆ ನನ್ನನ್ನು ತಳಕು ಹಾಕಬೇಡಿ ಎಂದರು.

ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ನಾನು ಯಾವುದೇ ಭೂಮಿಯನ್ನು ಮಂಜೂರು ಮಾಡಿಲ್ಲ. ಈ ಸಂಬಂಧ ನಾನು ಸಹಿಹಾಕಿದ್ದೇನೆ ಎಂಬ ಕಡತಗಳು ಫೋರ್ಜರಿ. ಕಡತದಲ್ಲಿ ನಾನು ಬರೆದಿಲ್ಲ, ಸಹಿಯನ್ನೂ ಹಾಕಿಲ್ಲ. ಇದನ್ನು ಎಸ್‌ಐಟಿ ತನಿಖೆ ಮಾಡಿದೆಯೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಹೆದರುವುದಿಲ್ಲ; ಹೋರಾಟ ಮಾಡುತ್ತೇನೆ

ರಾಜ್ಯ ಸರಕಾರದ ಭ್ರಷ್ಟಾಚಾರ, ಹಗರಣದ ವಿರುದ್ಧ ನಾನು ಧ್ವನಿ ಎತ್ತಿದ್ದಕ್ಕೆ ನನ್ನನ್ನು ಹೆದರಿಸಲು ಪ್ರಾಸಿಕ್ಯೂಷನ್ ಬಗ್ಗೆ ಕಾಂಗ್ರೆಸ್ ನಾಯಕರು ಮಾತನಾಡಲು ಆರಂಭಿಸಿದ್ದಾರೆ. ಇದಕ್ಕೆಲ್ಲಾ ಹೆದರಲ್ಲ. ಕಾನೂನು ಹೋರಾಟ ಮಾಡುತ್ತೇನೆ. ವರ್ಗಾವಣೆ ದಂಧೆ ಬಗ್ಗೆ ನಾನು ವಾಗ್ದಾಳಿ ನಡೆಸಿದ ಸಂದರ್ಭದಲ್ಲಿಯೇ ನನ್ನ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದಾರೆ. ಗಣಿ ಅಕ್ರಮದ ತನಿಖೆ ಬಗ್ಗೆ 2011ರಲ್ಲಿ ಲೋಕಾಯುಕ್ತದವರು ವರದಿ ನೀಡಿದ್ದರು. ಆ ವರದಿಯಲ್ಲಿ ಅಂದಿನ ಸಿಎಂ ಪ್ರಕರಣದಲ್ಲಿ ಮಿಸ್ ಕಂಡೆಕ್ಟ್ ರಿಪೋರ್ಟ್ ಇತ್ತು. ಅವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡಲ್ಲ ಎಂದು ಲೋಕಾಯುಕ್ತ ವರದಿ ನೀಡಿದ್ದರು ನಾನು ಆಗಿನ ಸರಕಾರದ ಅಕ್ರಮಗಳ ಬಗ್ಗೆ ಜನತೆಯ ಮುಂದೆ ದಾಖಲೆಗಳನ್ನು ಇಟ್ಟಿದ್ದೆ ಎಂದು ವಿವರಿಸಿದರು.

ಇದಾದ ಬಳಿಕ ಸಾಯಿ ವೆಂಕಟೇಶ್ವರ ಮಿನರಲ್ಸ್ ಹಾಗೂ ಜಂತ್ಕಲ್ ಪ್ರಕರಣ ತಂದರು. ಈಗ ಮುಖ್ಯಮಂತ್ರಿಗಳ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಕೋರಿರುವ ಅಬ್ರಾಹಂ ಅವರನ್ನು ಬ್ಲಾಕ್‌ಮೇಲ್ ಎನ್ನುತ್ತಿರುವ ಸಿದ್ಧರಾಮಯ್ಯ ಅವರಿಗೆ ನಾನು ಪ್ರಶ್ನೆ ಮಾಡುತ್ತೇನೆ. ಆಗ ಇದೇ ಅಬ್ರಾಹಂ 2011 ರಲ್ಲಿ ಕೋರ್ಟ್‌ಗೆ ಹೋಗಿ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ, ಧರ್ಮಸಿಂಗ್ ನನ್ನ ಮೇಲೆ ಖಾಸಗಿ ದೂರು ದಾಖಲು ಮಾಡುತ್ತಾರೆ. ಆಗ ನ್ಯಾಯಾಲಯ ಲೋಕಾಯುಕ್ತ ತನಿಖೆ ಮಾಡಿದೆ ಅಲ್ಲೇ ಪ್ರಕರಣ ದಾಖಲಿಸಿ ಎಂದು ಹೇಳುತ್ತೆ. ಇದನ್ನು ಪ್ರಶ್ನಿಸಿ ನಾನು ಹೈಕೋರ್ಟ್‌ನಲ್ಲಿ 2011 ರಲ್ಲಿ ದೂರು ಸಲ್ಲಿಸಿದೆ. ಆಗ ಹೈಕೋರ್ಟ್ ಉಳಿದ ಎಲ್ಲ ಪ್ರಕರಣಗಳನ್ನು ರದ್ದ ಮಾಡಿ ಸಾಯಿ ವೆಂಕಟೇಶ್ವರ ತನಿಖೆಗೆ ಆದೇಶ ಮಾಡಿತ್ತು. ಈ ಪ್ರಕರಣದಲ್ಲಿ ಧರ್ಮಸಿಂಗ್ ಎಸ್.ಎಂ. ಕೃಷ್ಣ ಅವರು ಹೆಸರು ಉಲ್ಲೇಖವಾಗಿದೆ. ಕೃಷ್ಣ ಅವರಿಗೆ ಸುಪ್ರೀಂಕೋರ್ಟ್‌ನಲ್ಲಿ ರಿಲೀಫ್ ಸಿಕ್ಕಿದೆ ಎಂದು ವಿವರಿಸಿದರು.

ಮನಸ್ಸು ಮಾಡಿದ್ದರೆ ಪ್ರಕರಣ ಮುಚ್ಚಿಹಾಕಬಹುದಿತ್ತು

ನಾನು ಮನಸ್ಸು ಮಾಡಿದರೆ ಈ ಪ್ರಕರಣವನ್ನು ಹಿಂದೆಯೇ ಮುಚ್ಚಿ ಹಾಕಿಕೊಳ್ಳಬಹುದಿತ್ತು. ನಾನು ಅದನ್ನೆಲ್ಲಾ ಮಾಡಿಲ್ಲ. ಈಗ ಹೊಸದಾಗಿ ಡಿವೈಎಸ್‌ಪಿ ಮುಕುದಂ ಮುಖ್ಯಮಂತ್ರಿಗಳಿಗೆ 'ನನಗೆ ಬಿಡಿ ಸಾರ್ ಕುಮಾರಸ್ವಾಮಿಯವರಿಗೆ ನೋಟಿಸ್ ಕೊಟ್ಟು ಕಳುಹಿಸುತ್ತೇನೆ' ಎಂದೆಲ್ಲಾ ಹೇಳಿದ್ದಾನೆ. ಮುಖ್ಯಮಂತ್ರಿಗಳ ಮನೆಯಲ್ಲಿ ರಾತ್ರೋ ರಾತ್ರಿ ಏನೆಲ್ಲಾ ಸಭೆಗಳಾಗಿವೆ ಎಂಬ ಮಾಹಿತಿಯಿದೆ. ಎಸ್‌ಐಟಿಯವರು ಇದುವರೆಗೂ ಸುಪ್ರೀಂಕೋರ್ಟ್ ಮುಂದೆ ಹೋಗಿ ತನಿಖಾ ವರದಿಯನ್ನು ಯಾಕೆ ಸಲ್ಲಿಸಿಲ್ಲ ಎಂದು ಕೇಂದ್ರ ಸಚಿವ ಎಚ್‌ಡಿಕೆ ವಾಗ್ದಾಳಿ ನಡೆಸಿದರು.

ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಪ್ರಕರಣದಲ್ಲಿ ನನ್ನ ಪಾತ್ರವೇ ಇಲ್ಲ. ನನ್ನ ಬಳಿ ಆ ಕಡತ ಬಂದಿದೆಯೋ ಇಲ್ಲವೋ ಎಂಬುದು ಸಾಬೀತಾಗಬೇಕು. ಅದರಲ್ಲಿ ಏನೇನು ಬರೆದುಕೊಂಡಿದ್ದಾರೆ, ಯಾರು ಬರೆದಿದ್ದಾರೆ ದಾಖಲೆಗಳನ್ನು ತಿದ್ದಿದ್ದಾರೆಯೋ ಇಲ್ಲವೋ ಎಲ್ಲವೂ ಗೊತ್ತಾಗಬೇಕಲ್ಲವೆ. ನನ್ನ ಬರವಣಿಗೆ, ಸಹಿಯನ್ನು ಎಸ್‌ಐಟಿಯವರು ತೆಗೆದುಕೊಂಡಿದ್ದಾರೆ.
-ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವ

ಎಸಿಬಿಯನ್ನು ಮಾಡಿದ್ದೇಕೆ?

ಲೋಕಾಯುಕ್ತದಲ್ಲಿ ಸಿದ್ದರಾಮಯ್ಯ ವಿರುದ್ಧ 61 ಪ್ರಕರಣಗಳಿವೆ ಎಂದು ಪತ್ರಿಕೆಯಲ್ಲಿ ವರದಿ ನೋಡಿದ್ದೇನೆ. ಆ ಪೈಕಿ 50 ಪ್ರಕರಣಗಳಲ್ಲಿ ತನಿಖೆಯೇ ಆರಂಭವಾಗಿಲ್ಲ. ಕಪ್ಪುಚುಕ್ಕೆಯಿಲ್ಲದ ನಾಯಕ ಎಂದು ಹೇಳಿಕೊಳ್ಳುವವರು ಲೋಕಾಯುಕ್ತವನ್ನು ಮುಚ್ಚಿ ಎಸಿಬಿಯನ್ನು ಮಾಡಿ ಏನೇನೋ ಮಾಡಿದರೂ ಎಂಬುದು ನನಗೂ ಗೊತ್ತಿದೆ ಎಂದು ವಾಗ್ದಾಳಿ ನಡೆಸಿದರು. ಯಾರೋ ಒಬ್ಬ ಕಾನೂನು ಸಲಹೆಗಾರನ ಮಾತು ಕೇಳಿ, ಏನೋ ಮಾಡಲು ಹೊರಟ್ಟಿದ್ದಾರೆ. ಪೊನ್ನಣ್ಣ ನೀನು ಮಾತ್ರ ಬುದ್ಧಿವಂತನಲ್ಲ. ಎಲ್ಲರೂ ಬುದ್ಧಿವಂತರಿದ್ದಾರೆ ಏನು ಮಾಡುತ್ತೀಯೋ ನೋಡೋಣ ಎಂದು ಕುಮಾರಸ್ವಾಮಿ ಮುಖ್ಯಮಂತ್ರಿ ಕಾನೂನು ಸಲಹೆಗಾರ ಪೊನ್ನಣ್ಣ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದರು.

ವಿಚ್ಛೇದನ ಪ್ರಕರಣ: ತಿಂಗಳಿಗೆ 6 ಲಕ್ಷ ಜೀವನಾಂಶ; ಕೋರ್ಟ್ ಛೀಮಾರಿ

ಬೆಂಗಳೂರು: ವಿಚ್ಛೇದಿತ ಮಹಿಳೆ ಪತಿಯಿಂದ ಜೀವನಾಂಶ ಕೇಳುವುದು ತಪ್ಪೇನಲ್ಲ. ಸಿಆರ್‌ಪಿಸಿಯ ಸೆಕ್ಷನ್ 125ರ ಅಡಿಯಲ್ಲಿ ಮಹಿಳೆ ತನ್ನ ಪತಿಯಿಂದ ಜೀವನಾಂಶವನ್ನು ಕೇಳಬಹುದು ಎಂದು ಈ ಹಿಂದೆಯೇ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಆದರೆ, ಈ ಕಾನೂನನ್ನೇ ದುರ್ಬಳಕೆ ಮಾಡಿಕೊಂಡ ಮಹಿಳೆ ಒಬ್ಬರು ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ.

ಗಂಡನಿಂದ ತಿಂಗಳಿಗೆ ಬರೋಬ್ಬರಿ 6,16,300 ರು. ಜೀವನಾಂಶ ಕೇಳಿದ ಮಹಿಳೆಗೆ ಕೋರ್ಟ್ ಛೀಮಾರಿ ಹಾಕಿದೆ. ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗುತ್ತಿದೆ. ಜನರಲ್ಲಿ ಕಾನೂನಿನ ಅರಿವು ಮೂಡಿಸಲು ಕೋರ್ಟ್‌ನಿಂದಲೇ ಈ ವಿಡಿಯೋ ರಿಲೀಸ್ ಮಾಡಲಾಗಿದೆ.

ವಿಡಿಯೊದಲ್ಲೇನಿದೆ?: ವಕೀಲರೊಬ್ಬರು ಮಹಿಳೆಗೆ ಗಂಡ ತಿಂಗಳಿಗೆ 6,16,300 ರು. ಜೀವನಾಂಶ ನೀಡಬೇಕು ಎಂದು ಕೋರ್ಟ್‌ನಲ್ಲಿ ವಾದ ಮಾಡಿದರು. ಈ ಕೂಡಲೇ ಸಿಟ್ಟಿಗೆದ್ದ ಹೈಕೋರ್ಟ್ ಮಹಿಳಾ ನ್ಯಾಯಮೂರ್ತಿಗಳು, ಈ ರೀತಿಯ ಬೇಡಿಕೆ ಇಡುವುದು ಎಷ್ಟು ಸರಿ? ಇದು ಕಾನೂನಿಕ ದುರ್ಬಳಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗಂಡ ಹೆಂಡತಿಗೆ ಜೀವನಾಂಶ ನೀಡಬೇಕು ನಿಜ. ಆದರೆ, ಮಹಿಳೆ ತಿಂಗಳಿಗೆ ಇಷ್ಟು ದುಡ್ಡು ಹೇಗೆ ಖರ್ಚು ಮಾಡುತ್ತಾರೆ. ಯಾರಾದರೂ ತಿಂಗಳಿಗೆ ಇಷ್ಟು ಜೀವನಾಂಶ ನೀಡಲು ಸಾಧ್ಯವೇ? ಕಾನೂನು ಇರುವುದು ಸಹಾಯ ಮಾಡಲು. ಅದನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಒಂದು ವೇಳೆ ಆಕೆಗೆ ಅಷ್ಟು ದುಡ್ಡು ಬೇಕಿದ್ದರೆ ಮೈ ಬಗ್ಗಿಸಿ ದುಡಿಯಲಿ. ಹೀಗೆ ಬೇಕಾಬಿಟ್ಟಿ ಜೀವನಾಂಶ ಕೇಳುವುದಲ್ಲ ಎಂದು ಮಹಿಳಾ ನ್ಯಾಯಮೂರ್ತಿಗಳು ಛೀಮಾರಿ ಹಾಕಿದ್ದಲ್ಲದೆ, ವಕೀಲರನ್ನು ತರಾಟೆಗೆ ತೆಗೆದುಕೊಂಡರು.

ದಂಪತಿ ನಡುವೆ ಮೂಗು ತೂರಿಸಿದವನಿಗೆ ಚಾಕು ಇರಿತ

ಬೆಂಗಳೂರು: ಗಂಡ ಹೆಂಡತಿ ನಡುವೆ ಮೂಗು ತೂರಿಸಿದವನೊಬ್ಬ ಚಾಕು ಇರಿತಕ್ಕೊಳಗಾಗಿ ಆಸ್ಪತ್ರೆ ಸೇರಿದ ಘಟನೆ ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯ ಪಂತರಪಾಳ್ಯದಲ್ಲಿ ಘಟನೆ ನಡೆದಿದೆ.

ಕಾರ್ತಿಕ್ ಚಾಕು ಇರಿತಕ್ಕೆ ಒಳಗಾಗಿರುವ ಯುವಕ. ಈತ ಆಟೋಚಾಲಕನಾಗಿ ಕೆಲಸ ಮಾಡುತ್ತಿದ್ದ. ಆಟೋ ಓಡಿಸಿಕೊಂಡು ಇರುತ್ತಿದ್ದವನು ಮಹಿಳೆಯೊಬ್ಬಳ ಹಿಂದೆ ಬಿದ್ದಿದ್ದ. ಈಕೆಗೆ ಮದುವೆಯಾಗಿತ್ತು. ಮದುವೆಯಾಗಿರು ವುದು ತಿಳಿದಿದ್ದರೂ ಮಹಿಳೆ ಜತೆ ಮಾತನಾಡಲು ಹಾತೊರೆಯುತ್ತಿದ್ದ. ಬೇಡ ಅಂದರೂ ಮಹಿಳೆಯ ಹಿಂದೆ ಬಿದ್ದಿದ್ದ ಯುವಕನಿಗೆ ಮಹಿಳೆಯ ಗಂಡ ಹಾಗೂ ಅಣ್ಣ ಹಲವು ಬಾರಿ ಎಚ್ಚರಿಕೆ ಮಾಡಲಾಗಿದೆ. ತಂಗಿ- ಭಾವನ ಮಧ್ಯೆ ಬರಬೇಡ ಎಂದು ಆಕೆಯ ಅಣ್ಣ ವಿನೋದ್ ಎಚ್ಚರಿಸಿದ್ದ. ಆದರೆ ಕಾರ್ತಿಕ್ ತನ್ನ ಚಾಳಿ ಬಿಟ್ಟಿರಲಿಲ್ಲ. ಸೋಮವಾರ ರಾತ್ರಿ ಪಂತರಪಾಳ್ಯಕ್ಕೆ ಆಕೆಯ ಮನೆ ಕಡೆಗೆ ಕಾರ್ತಿಕ್ ಹೋಗಿದ್ದ.

ಈ ವೇಳೆ, ಮಹಿಳೆಯ ಅಣ್ಣ ವಿನೋದ್, ತನ್ನ ಭಾವ ಸತೀಶ್ ಹಾಗೂ ಗೆಳೆಯ ಸೂರ್ಯನ ಜತೆ ಬಂದು ವಿನೋದ್‌ನನ್ನು ಚಾಕುವಿನಿಂದ ಇರಿದಿದ್ದಾನೆ. ನಾಯಂಡಹಳ್ಳಿಯ ಪಂತರಪಾಳ್ಯದಲ್ಲಿ ಕಾರ್ತಿಕ್‌ನನ್ನು ಲಾಕ್‌ಮಾಡಿ ತಲೆ ಮತ್ತು ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಸದ್ಯ ಘಟನೆ ಸಂಬಂಧ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಸಿಎಸ್‌ಬಿ ರಚನೆಗೆ ಕೋರಿ ಅರ್ಜಿ

ಬೆಂಗಳೂರು: ಭಾರತೀಯ ಆಡಳಿತ ಸೇವೆ (ಐಎಎಸ್) ಅಧಿಕಾರಿಗಳ ವರ್ಗಾವಣೆ ಸೇರಿದಂತೆ ಅವರು ಒಂದು ನಿರ್ದಿಷ್ಟ ಸ್ಥಳ ಮತ್ತು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವ ಕನಿಷ್ಠ ಸೇವಾವಧಿ ನಿಗದಿಪಡಿಸುವ ಹಾಗೂ ಕರ್ತವ್ಯ ನಿರ್ವಹಣೆ ವೇಳೆ ಅವರ ಹಿತಕಾಯುವ ಉದ್ದೇಶ ಹೊಂದಿರುವ ನಾಗರಿಕ ಸೇವಾ ಮಂಡಳಿ' (ಸಿಎಸ್‌ಬಿ) ರಚನೆ ಮಾಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸಂಬಂಧ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಕರ್ನಾಟಕದಲ್ಲಿ ನಾಗರಿಕ ಸೇವಾ ಮಂಡಳಿ ರಚಿಸಬೇಕು ಮತ್ತು ನಾಗರಿಕ ಸೇವಕ ಅಧಿಕಾರಿಗಳ ಕನಿಷ್ಠ ಸೇವಾವಧಿ ನಿಗದಿಪಡಿಸಲು ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ರಿಷಭ್ ಟಾಕೂರ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಶೀಘ್ರದಲ್ಲಿಯೇ ದೋಷಾರೋಪ ಪಟ್ಟಿ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸೇರಿ 17 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿಯನ್ನು ಈ ತಿಂಗಳ ಅಂತ್ಯದಲ್ಲಿ ಅಥವಾ ಮುಂದಿನ ತಿಂಗಳ ಮೊದಲ ವಾರದಲ್ಲಿ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಸಲ್ಲಿಸಲಿದ್ದಾರೆ.

ವಿಜಯನಗರದ ಉಪ ವಿಭಾಗದ ಪೊಲೀಸರು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ಮಾರ್ಗದರ್ಶನದಲ್ಲಿ ಚಾರ್ಜ್‌ಶೀಟ್ ಸಲ್ಲಿಕೆಗೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ಅಂತಿಮ ಹಂತಕ್ಕೆ ತಲುಪಿದ್ದು, ಈಗಾಗಲೇ ಶೇ.70ರಷ್ಟು ಸಾಂದರ್ಭಿಕ ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ.

ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದ ಸಾಕ್ಷ್ಯಗಳ ಪೈಕಿ ಶೇ.90ರಷ್ಟು ವರದಿ ಬಂದಿದೆ. ಅಲ್ಲದೆ, ಹೈದರಾಬಾದ್‌ಗೆ ಕಳುಹಿಸಿದ್ದ ವಸ್ತುಗಳಲ್ಲಿ ಶೇ.70ರಷ್ಟು ವರದಿ ಪೊಲೀಸರ ಕೈಸೇರಿದೆ. ಉಳಿದ ವರದಿಗಾಗಿ ಪೊಲೀಸರು ಕಾಯುತ್ತಿದ್ದಾರೆ. ಈಗಾಗಲೇ ಈ ಪ್ರಕರಣದ ವೈದ್ಯಕೀಯ ವರದಿ ಹಾಗೂ ಅದಕ್ಕೆ ಸಂಬಂಧಿಸಿದ ಕೆಲವು ಪೂರಕ ದಾಖಲೆಗಳನ್ನು ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ. ಅಲ್ಲದೆ, ಬಹಳಷ್ಟು ಸಾಕ್ಷಿಗಳಿಂದ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಶೀಘ್ರದಲ್ಲೆ ಚಾರ್ಜ್‌ಶೀಟ್ ಸಲ್ಲಿಸಲಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾಗೌಡ ಸೇರಿ 17 ಮಂದಿಯನ್ನು ಬಂಧಿಸಲಾಗಿತ್ತು.

ಜೈಲುಹಕ್ಕಿಯಾಗಿ ಎರಡು ತಿಂಗಳು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಜೈಲು ಪಾಲಾಗಿ ಎರಡು ತಿಂಗಳು ಕಳೆದಿದ್ದು, ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ ನಂತರ ಜಾಮೀನಿಗೆ ಅರ್ಜಿ ಸಲ್ಲಿಸಲಿದ್ದಾರೆ. ಈಗಾಗಲೇ ಆರೋಪಿಗಳಾದ ಪವಿತ್ರಾ ಗೌಡ ಮತ್ತು ವಿನಯ್ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡ
ರಾಜರಾಜೇಶ್ವರಿ ನಗರ ಶಾಖೆ,
ನಂ. 874, 2ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ, ಬಿಇಎಂಎಲ್ ಲೇಔಟ್, 4ನೇ ಹಂತ, ಬೆಂಗಳೂರು – 560 098
Ph No.: 080-28612221,
Email: rajban@bankofbaroda.com

ಸ್ವಾಧೀನ ಸೂಚನೆ ಅಪೆಂಡಿಕ್ಸ್ IV ಆಕ್ಟ್‌ನ ನಿಯಮ 8 (1) (ಸ್ಥಿರಾಸ್ತಿ)

ಕೆಳಸಹಿದಾರರು, **ಬ್ಯಾಂಕ್ ಆಫ್ ಬರೋಡ, ರಾಜರಾಜೇಶ್ವರಿ ನಗರ ಶಾಖೆ, ಬೆಂಗಳೂರು** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು 2002 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(2) ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ **60 ದಿನಗಳ** 60 ದಿನಗಳ ಒಳಗೆ ಕೆಳಗೆ ಸೂಚಿಸಿರುವ ಸಾಲಗಾರರಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ಮೊತ್ತ ಮತ್ತು ಮುಂದಿನ ಬಡ್ಡಿ ಹಾಗೂ ವೆಚ್ಚವನ್ನು ಮರುಪಾವತಿ ಮಾಡಲು ಸೂಚಿಸಲಾಗಿತ್ತು.

ಕೆಳಗೆ ತಿಳಿಸಿರುವ ಸಾಲಗಾರರು/ಜಾಮೀನುದಾರರು/ ಅಡಮಾನುದಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಗಳನ್ನು ಈ ಕೆಳಗೆ ಸೂಚಿಸಿದ ಕಾಯಿದೆಯ ಕಲಂ 13 (4) ರೊಂದಿಗೆ ನಿಯಮ 8 ಮತ್ತು 9ರಲ್ಲಿ ಪ್ರದತ್ತ ಅಧಿಕಾರದನ್ವಯ **ಕೆಳಗೆ ಸೂಚಿಸಿರುವ ದಿನಾಂಕದಂದು** ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಈ ಕೆಳಕಂಡ ಸಾಲಗಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಕೆಳಗೆ ತಿಳಿಸಿರುವ ಭದ್ರತೆಯಾಗಿರುವ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಬ್ಯಾಂಕ್ ಆಫ್ ಬರೋಡ, ರಾಜರಾಜೇಶ್ವರಿ ನಗರ ಶಾಖೆ** ಇವರಿಗೆ ಬಾಕಿ ಇರುವ ಮೊಬಲಗು ಹಾಗೂ ಅದರ ಮೇಲಿನ ಬಡ್ಡಿ ಇವುಗಳಿಗೆ ಋಣಬಾಧ್ಯವಾಗಿರುತ್ತದೆ.

1) **ಸಾಲಗಾರರ ಹೆಸರು : 1) ಶ್ರೀ ಸಾಗರ್ ಎಸ್.,** ನಂ. 55, 2ನೇ ಅಡ್ಡರಸ್ತೆ, ಮೂಕಾಂಬಿಕಾ ಲೇಔಟ್, ಆರ್. ವಿ. ವಿದ್ಯಾನಿಕೇತನ್, ಮಲ್ಲಸಂದ್ರ ಬೆಂಗಳೂರು ದಕ್ಷಿಣ, ಬೆಂಗಳೂರು – 560 062. **2) ಶ್ರೀ ಸಾಗರ್ ಎಸ್.,** ನಿವೇಶನ ನಂ. 7 (ಉತ್ತರದ ಭಾಗ), ಬಿಬಿಎಂಪಿ ಖಾತಾ ನಂ. 1425/2009/07, ಸರ್ವೆ ನಂ. 209, ಕೆಂಗೇರಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು – 560 060,
ಡಿಮ್ಯಾಂಡ್ ನೋಟೀಸಿನ ದಿನಾಂಕ :30.05.2024 **ಸ್ವಾಧೀನ ನೋಟೀಸಿನ ದಿನಾಂಕ :17.08.2024**
ನೋಟೀಸು ಜಾರಿ ಮಾಡಿದ ಸಮಯದಲ್ಲಿರುವ ಬಾಕಿ ಮೊತ್ತ : ರೂ.43,97,963.00 (ರೂಪಾಯಿ ನಲವತ್ತಮೂರು ಲಕ್ಷ ತೊಂಬತ್ತೇಳು ಸಾವಿರದ ಒಂಬೈನೂರ ಅರವತ್ತ ಮೂರು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು, ಇತರೆ ವೆಚ್ಚ.
ಸ್ಥಿರಾಸ್ತಿಗಳ ವಿವರ: ಷೆಡ್ಯೂಲ್ ಎ ಆಸ್ತಿ : ಬೆಂಗಳೂರು ದಕ್ಷಿಣ ತಾಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮ, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಾತ್ಮಕ ಕಾನೂನುವ್ಯಾಪ್ತಿ, ಇಲ್ಲಿ ಸರ್ವೆ ನಂ.209, ಇಲ್ಲಿ ದಿನಾಂಕ 18.11.1995ರ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಜಿಲ್ಲೆ ಇವರ ಆದೇಶ ನಂ. ALN.SR(S)54/1995-96ರಂತೆ ಪರಿವರ್ತಿತವಾದ 1 ಎಕರೆ 10 ಗುಂಟೆ ಅಳತೆಯ ಜಮೀನಿನಲ್ಲಿನ 0.05 ಗುಂಟೆ ಜಮೀನಿನಲ್ಲಿರುವ ನಿವೇಶನ ನಂ. 7ರ **ಉತ್ತರದ ಭಾಗ** ಬಿಬಿಎಂಪಿ ಖಾತಾ ನಂ. 1425/2009/07, ವಾರ್ಡ್ ನಂ. 159, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಒಟ್ಟು 600 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ನಿವೇಶನ ನಂ. 6, ದಕ್ಷಿಣಕ್ಕೆ : ನಿವೇಶನ ನಂ. 8.

1) **ಸಾಲಗಾರರ ಹೆಸರು : 1. ಮೆ. ಸಾಗರ್ ಎಂಟರ್‌ಪ್ರೈಸಸ್,** ನಂ. 55, 2ನೇ ಅಡ್ಡರಸ್ತೆ, ಆರ್. ವಿ. ಕಾಲೇಜ್ ಅಂಚೆ, ಮೈಲಸಂದ್ರ, ಬೆಂಗಳೂರು – 560 059. **2) ಶ್ರೀ ಸಾಗರ್ ಎಸ್.,** ನಿವೇಶನ ನಂ. 7, ಬಿಬಿಎಂಪಿ ಖಾತಾ ನಂ. 1425/2009/07, ಸರ್ವೆ ನಂ. 209, ಕೆಂಗೇರಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು – 560 060,
ಡಿಮ್ಯಾಂಡ್ ನೋಟೀಸಿನ ದಿನಾಂಕ :30.05.2024 **ಸ್ವಾಧೀನ ನೋಟೀಸಿನ ದಿನಾಂಕ :17.08.2024**
ನೋಟೀಸು ಜಾರಿ ಮಾಡಿದ ಸಮಯದಲ್ಲಿರುವ ಬಾಕಿ ಮೊತ್ತ : ರೂ.35,38,803.00 (ರೂಪಾಯಿ ಮೂವತ್ತೈದು ಲಕ್ಷ ಮೂವತ್ತೆಂಟು ಸಾವಿರದ ಎಂಟು ನೂರ ಮೂರು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು, ಇತರೆ ವೆಚ್ಚ.
ಸ್ಥಿರಾಸ್ತಿಗಳ ವಿವರ: ಷೆಡ್ಯೂಲ್ ಎ ಆಸ್ತಿ : ಬೆಂಗಳೂರು ದಕ್ಷಿಣ ತಾಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮ, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಾತ್ಮಕ ಕಾನೂನುವ್ಯಾಪ್ತಿ, ಇಲ್ಲಿ ಸರ್ವೆ ನಂ.209, ಇಲ್ಲಿ ದಿನಾಂಕ 18.11.1995ರ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಜಿಲ್ಲೆ ಇವರ ಆದೇಶ ನಂ. ALN.SR(S)54/1995-96ರಂತೆ ಪರಿವರ್ತಿತವಾದ 1 ಎಕರೆ 10 ಗುಂಟೆ ಅಳತೆಯ ಜಮೀನಿನಲ್ಲಿನ 0.05 ಗುಂಟೆ ಜಮೀನಿನಲ್ಲಿರುವ ನಿವೇಶನ ನಂ. 7ರ **ದಕ್ಷಿಣದ ಭಾಗ** ಬಿಬಿಎಂಪಿ ಖಾತಾ ನಂ. 1425/2009/07, ವಾರ್ಡ್ ನಂ. 159, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 15 ಅಡಿ, ಒಟ್ಟು 600 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ನಿವೇಶನ ನಂ.7ರ ಉತ್ತರದ ಭಾಗ, ದಕ್ಷಿಣಕ್ಕೆ : ನಿವೇಶನ ನಂ. 8.

ಸ್ಥಳ : ಬೆಂಗಳೂರು,
ದಿನಾಂಕ : 17.08.2024
ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ , ರಾಜರಾಜೇಶ್ವರಿ ನಗರ ಶಾಖೆ

ಅನುಬಂಧ IV-ಎ
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಗಳೊಂದಿಗೆ ಓದಲಾಗುವ ಸೆಕ್ಯೂರಿಟೈಸೇಶನ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡಲಾಗುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN : L65922DL2005PLC136029)** ("ಸೆಕ್ಯೂರ್ಡ್ ಕ್ರೆಡಿಟರ್") ... **ಶ್ರೀ. ಸುಭಾಷ್ ಮತ್ತು ಶ್ರೀಮತಿ. ಹೇಮಲತಾ ಲಕ್ಷ್ಮೀನಾರಾಯಣ (ಗ್ಯಾರಂಟರ್)** ... ಲೋನ್ ಅಕೌಂಟ್ ನಂ. **HHLBGM00447426** ... **ರೂ. 1,34,24,460/-** ... **27.07.2024** ... **24.09.2024** ... **05.00** ... "ಇದ್ದಲ್ಲಿಯೇ ಹಾಗೆ", "ಇದ್ದಿರುವ ಹಾಗೆ" ಮತ್ತು "ಯಾವುದೇ ರೆಕೋರ್ಸ್ ಇಲ್ಲದ" ಆಧಾರದ ಮೇಲೆ ...

ಸ್ಥಿರಾಸ್ತಿ(ಗಳ) ರಿಸರ್ವ್ ಬೆಲೆಯು **ರೂ. 1,81,88,000/-** (ರೂಪಾಯಿ ಒಂದು ಕೋಟಿ ಎಂಬತ್ತ ಒಂದು ಲಕ್ಷ ಎಂಬತ್ತೆಂಟು ಸಾವಿರ ಮಾತ್ರ) ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ ("ಇಎಮ್‌ಡಿ") **ರೂ. 18,18,800/-** (ರೂಪಾಯಿ ಹದಿನೆಂಟು ಲಕ್ಷ ಹದಿನೆಂಟು ಸಾವಿರದ ಎಂಟು ನೂರು ಮಾತ್ರ) ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಫ್ಲ್ಯಾಟ್ ನಂ.-ಎಫ್-401, 1659 ಚದರ ಅಡಿಯ ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿದೆ (ಅಂದರೆ, 1276 ಚದರ ಅಡಿ ನಿರ್ಮಿಸಿದ ಪ್ರದೇಶವು ...) ... 0.153% ... 581.48 ಚದರ ಅಡಿ ... "ಪೂರ್ವ ಸೀಸನ್ಸ್" ... ಸರ್ವೆ ನಂ. 98, 99/1, 99/2, 100, 101/1, 101/2, 101/3, 101/4, 101/5, 101/6, 101/7, 101/8, 102, 103, 104, 126 ... ಸರ್ವೆ ನಂ. 92 ಬಿಬಿಎಂಪಿ ವಾರ್ಡ್ ನಂ. 83, ಸಿವಿ ರಾಮನ್ ನಗರ, ಬೆನ್ನಿಗಾನಹಳ್ಳಿ, ಕೃಷ್ಣರಾಜಪುರಂ, ಹೊಬಳಿ, ಬೆಂಗಳೂರು - 500093, ಕರ್ನಾಟಕ ...

ಪೂರ್ವ : ಬೆನ್ನಿಗಾನಹಳ್ಳಿಯ ಸರ್ವೆ ನಂ. 97 ಮತ್ತು 113ರ ಜಮೀನುಗಳು
ಪಶ್ಚಿಮ : ಕಗ್ಗದಾಸಪುರ ಮುಖ್ಯ ರಸ್ತೆ ಮತ್ತು ಸರ್ವೆ ನಂ. 125 ರಲ್ಲಿರುವ ಜಮೀನುಗಳು
ಉತ್ತರ : ಡೀಆರ್‌ಡಿಒ ಕ್ವಾರ್ಟರ್ಸ್
ದಕ್ಷಿಣ : ಸರ್ವೆ ನಂ. 106, 105/2, 105/1, 107/4, 107/3, 107/2, 107/1, 112 ಮತ್ತು 113 ...

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲದಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ : 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗ್ ಮಾಡಿ.

ದಿನಾಂಕ : 14.08.2024
ಸ್ಥಳ : ಬೆಂಗಳೂರು
ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

TATA ELXSI LTD.
Regd.Office: ITPB Road, Whitefield, Bengaluru, Karnataka - 560048

NOTICE is hereby given that the certificates for the under mentioned securities of the Company have been lost/misplaced and the holders of the said securities have applied to the Company to release new certificate.The company has informed the holders/applicants that the said securities have been transferred to IEPF as per IEPF rules. Any person who has a claim in respect of the said securities should lodge such claim with the Company at its Registered Office within 15 days from this date, else the Company will proceed to release new certificate to the holders/applicants without further intimation.

Name of holder and Jt. holder	Folio No.	Kind of securities & Face value	Start Dist. No.	End Dist. No.	No. Of Securities
Irfan Khan **Jt.** Shakoor Khan	EXI0000036	Face value Rs 10/-	6268381	6268480	100
			6268481	6268580	100
			18246341	18246440	100
			18246441	18246540	100
			18246541	18246640	100

Place: Bangalore
Date: 22/08/2024
Sd/-
Irfan Khan

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
ACRE MAKING ASSETS WORK
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ–110019
ಇ–ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ–66, ಜಿ–ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.08.2021** ರಂದು ಕರೆದು ಸಾಲಗಾರ **ತೋಟ ರಾಜಶೇಖರ್ ಮತ್ತು ಪದ್ಮಿನಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 5,06,792.47 (ಐದು ಲಕ್ಷ ಆರು ಸಾವಿರದ ಏಳು ನೂರಾ ತೊಂಬತ್ತೆರಡು ರೂಪಾಯಿ ಮತ್ತು ನಲವತ್ತೇಳು ಪೈಸೆ ಮಾತ್ರ)** ಲೋನ್ ಅಕೌಂಟ್ ನಂ. **T003OXXIII-03** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAN00261164**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **28.06.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.12.2021** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**–ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 29.06.2022 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.–ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **T003OXXIII-03** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **20.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.–ನ ಬಾಕಿ ಇರುವ ಮೊತ್ತ ರೂ. 5,06,792.47 (ಐದು ಲಕ್ಷ ಆರು ಸಾವಿರದ ಏಳು ನೂರಾ ತೊಂಬತ್ತೆರಡು ರೂಪಾಯಿ ಮತ್ತು ನಲವತ್ತೇಳು ಪೈಸೆ ಮಾತ್ರ) 28.06.2021**ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ–406, 4ನೇ ಮಹಡಿ, ಎಸ್.ವಿ. ಆಶ್ರಿತ, ಸರ್ವೆ ನಂ. 82 ಮತ್ತು 83, ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು, ಕರ್ನಾಟಕ – 560080

ದಿನಾಂಕ: 20.08.2024
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.
(102–ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011–66115609, ಇಮೇಲ್: complaint@acreindia.in ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
ACRE MAKING ASSETS WORK
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ–110019
ಇ–ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ–66, ಜಿ–ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ("ಐಎಚ್‌ಎಫ್‌ಎಲ್") ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **22.11.2021** ರಂದು ಕರೆದು ಸಾಲಗಾರ **ಕೋಟ ರಾಜಶೇಖರ್ ಮತ್ತು ಪದ್ಮಿನಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 6,37,302.28** (ರೂಪಾಯಿ ಆರು ಲಕ್ಷ ಮೂವತ್ತೇಳು ಸಾವಿರದ ಮುನ್ನೂರ ಎರಡು ಮತ್ತು ಪೈಸೆ ಇಪ್ಪತ್ತ ಎಂಟು ಮಾತ್ರ) ಲೋನ್ ಅಕೌಂಟ್ ನಂ. **T003OXXIII-04** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHEBAN00424101**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **19.11.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.12.2021** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**–ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ- XXIII, ಟ್ರಸ್ಟ್‌ನ ಟ್ರಸ್ಟಿಯಾಗಿ ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 29.06.2022 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.–ನ ('ಎಸಿಆರ್‌ಇ')** ಹೆಸರಿಗೆ ನಿಯುಕ್ತಿಪಡಿಸಿದೆ. ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು **ಎಸಿಆರ್‌ಇ** ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **T003OXXIII-04** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **20.08.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.–ನ ಬಾಕಿ ಇರುವ ಮೊತ್ತ ರೂ. 6,37,302.28** (ರೂಪಾಯಿ ಆರು ಲಕ್ಷ ಮೂವತ್ತೇಳು ಸಾವಿರದ ಮುನ್ನೂರ ಎರಡು ಮತ್ತು ಪೈಸೆ ಇಪ್ಪತ್ತ ಎಂಟು ಮಾತ್ರ) **19.11.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ.406, 4ನೇ ಮಹಡಿ, ಆಶ್ರಿತಾ, ಸರ್ವೆ ಖಾತಾ ನಂ.934 ಮತ್ತು 935, ಹೌಸ್ ಲಿಸ್ಟ್ ನಂ.18 ಮತ್ತು 19, ಈಗ ಬಿಬಿಎಂಪಿ ಖಾತಾ ನಂ.3388 ಮತ್ತು 3389, ಸರ್ವೆ ನಂ. 83 ಮತ್ತು 82, ಜ್ಯೋತಿ ನಗರ, ಬೊಮ್ಮನಹಳ್ಳಿ, ಬೆಂಗಳೂರು ಗ್ರಾಮಾಂತರ, ಕರ್ನಾಟಕ-560083

ದಿನಾಂಕ: 20.08.2024
ಸ್ಥಳ : ಬೆಂಗಳೂರು ಗ್ರಾಮಾಂತರ
ಅಧಿಕಾರವಿರುವ ಅಧಿಕಾರಿ
ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.
(102–ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011–66115609, ಇಮೇಲ್: complaint@acreindia.in ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ವಿರಾಮ
ಪ್ರತಿ ಭಾನುವಾರ

CHANGE OF NAME
WE, RAGHUNANDAN and Suma H S, R/a No.46, Bluemoon Garden, Vidyaranyapura, Benglauru-560097 have changed our Minor son's name from PUNARVA R KANDADE to PUNARVA RAGHUNANDAN KANDADE vide affidavit dt: 08.08.2023 sworn before Notary Smt.A.Manjula, Bengaluru

PUBLIC NOTICE
The general public are hereby informed that our client Mr. K Subramani and Mr. Shyam Sunder S, both are residing at 102/1 10th Cross Greenwoods Layout Varanasi Bangalore — 560036, intends to purchase immovable property described in the schedule hereunder from by its owner Karmesh Vohra. Any persons having any claim/rights/ interest in the below said or any objections for the said sale of the property may file their objections in writing along with supporting documents, addressed to the undersigned within 7 days from the date of publication of this notice, failing which, it shall be construed that there are no claims of any sort over the below said property and our client shall be advised to proceed with the purchase.

SCHEDULE PROPERTY
All that piece and parcel of property comprising empty land, Site # 5 Katha No. 3722/5 Property no. 56/P1 situated at Maragondanahalli Village Bidarahalli Hobli, Bangalore East Taluk, Bangalore; measuring on the:
Eastern side: 38 Feet
Western side: 35 Feet
Northern side: 40 Feet
Southern side: 40 Feet
In all totally measuring 1460 Sq.ft. and bounded on:
East by: Site No. 2
West by: 25ft wide road
North by: site No. 6
South by: site No. 4
Sd/-
Supreme Law Associates
M.N. Leelaraju, Advocate, GV Complex, No. 1668/A, 14th Main, 7th Sector, HSR Layout, Bangalore -560102.
Ph-9986755031, 9620750878

ಸಮಾಚಾರ ಸಣ್ಣದಲ್ಲ

ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ನಾಳೆ

ಬೆಂಗಳೂರು: ಜವಾಹರ್ ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ಆ.23 ರಂದು ಬೆಂಗಳೂರು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಾಗುವುದು. ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಬೆಳ್ಳಗೆ 10 ಗಂಟೆಗೆ ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವ ಎನ್.ಎಸ್.ಬೋಸರಾಜು ನೆರವೇರಿಸುವರು ಎಂದು ಜವಾಹರ್‌ಲಾಲ್ ನೆಹರು ತಾರಾಲಯ ಪ ತಿಳಿಸಿದೆ. ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಬಾಹ್ಯಾಕಾಶ ಕುರಿತು ಹಲವಾರು ರೋಮಾಂಚನಕಾರಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಚಿತ್ರ, ಕಲೆ, ಪಿಕ್ ಮತ್ತು ಸ್ಪೀಕ್ ಹಾಗೂ 4, 5 ಮತ್ತು 6ನೇ ತರಗತಿ ವಿದ್ಯಾರ್ಥಿಗಳಿಗೆ ಜಿಗ್ ಸಾ ಫಜಲ್ ಚಟುವಟಿಕೆ ಹಾಗೂ 12 ವರ್ಷ ಮೇಲ್ಪಟ್ಟವರಿಗೆ ವಾಕ್ ಇನ್ ಕ್ವಿಜ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜಾಲತಾಣ https://forms.gle/io2ywsCeqt2KNyd88ರಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಚಂದ್ರಯಾನ-3 ಬಾಹ್ಯಾಕಾಶ ನೌಕೆ ಎಲ್ವಿಎಂ-3 ಉಡಾವಣಾ ಮಾದರಿಗಳು, ಬಾಹ್ಯಾಕಾಶ ನೌಕೆಯ ಆಸಕ್ತಿದಾಯಕ ಮಾರ್ಗ ಮತ್ತು ವರ್ಣರಂಜಿತ ಫಲಕಗಳನ್ನು ಆಚರಣೆಯಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ಹೇಳಿದೆ. ಹೆಚ್ಚಿನ ಮಾಹಿತಿಗೆ: 080-22379725, 080-2266084 ನ್ನು ಸಂಪರ್ಕಿಸಬಹುದು.

ಕೊಲೆ ಪ್ರಕರಣ: ದರ್ಶನ್ ಎ.1 ಆರೋಪಿ?

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ಮುಕ್ತಾಯದ ಹಂತಕ್ಕೆ ತಲುಪಿದ್ದು, ಚಾರ್ಜ್‌ಶೀಟ್‌ನಲ್ಲಿ ನಟ ದರ್ಶನ್ ಅವರನ್ನು ಆರೋಪಿ ನಂ.1 ಸ್ಥಾನ ನೀಡಲಾಗಿದೆ ಎಂದು ತಿಳಿದು ಬಂದಿದೆ. ಕೊಲೆ ಪ್ರಕರಣದ ತನಿಖೆ ವೇಳೆ ದರ್ಶನ್ ಎ2 ಆರೋಪಿಯನ್ನಾಗಿ ಮಾಡಲಾಗಿತ್ತು. ಎ1 ಆರೋಪಿಯನ್ನಾಗಿ ಪವಿತ್ರಾಗೌಡ ಅವರನ್ನು ಹೆಸರಿಸಲಾಗಿತ್ತು. ತನಿಖೆ ಮುಗಿದು ಚಾರ್ಜ್‌ಶೀಟ್ ಸಲ್ಲಿಕೆಯ ಸಿದ್ಧತೆಯಲ್ಲಿ ಎ2ಯಿಂದ ಎ1ಗೆ ಬಡ್ತಿ ನೀಡಲು ಸಿದ್ಧತೆ ಆರಂಭವಾಗಿದ್ದು, ಇದು ದರ್ಶನ್‌ಗೆ ಮತ್ತಷ್ಟು ಸಂಕಷ್ಟ ತಂದೊಡ್ಡಲಿದೆ. ರೇಣುಕಾಸ್ವಾಮಿ ಅಪಹರಣದ ಮಾಸ್ಟರ್‌ಪ್ಲಾನ್ ನೀಡಿದ್ದು ದರ್ಶನ್ ಎಂದು ಬೆಳಕಿಗೆ ಬಂದಿದೆ. ಚಿತ್ರದುರ್ಗದ ದರ್ಶನ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರನಿಗೆ ಕೊಲೆ ಮಾಡಲು ಡೀಲ್ ಒಪ್ಪಿದ್ದರು. ಬಳಿಕ ರೇಣುಕಾಸ್ವಾಮಿಯನ್ನು ಅಪಹರಣ ಮಾಡಿ ಆರ್.ಆರ್ ನಗರದ ಪಟ್ಟಣಗೆರೆಯ ಶೆಡ್‌ಗೆ ಕರೆತರಲಾಗಿತ್ತು. ಶೆಡ್‌ನಲ್ಲಿ ದರ್ಶನ್‌ನಿಂದ ಬೆಲ್ಟ್ ಲಾಠಿ ಹಾಗೂ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆದಿತ್ತು. ರೇಣುಕಾಸ್ವಾಮಿಯ ಮೇಲೆ ಸಿಕ್ಕ ಸಿಕ್ಕ ಕಡೆ ಒದೆಯಲಾಗಿತ್ತು. ಆತನ ಸಾವನ್ನಪ್ಪಿದ್ದ ಬಳಿಕ ಶವ ವಿಲೇವಾರಿಗೆ ಪ್ಲ್ಯಾನ್ ರೂಪಿಸಲಾಗಿತ್ತು. ಶವ ವಿಲೇವಾರಿ ಮಾಡುವಂತೆ ಪ್ರದೋಷ್ ಗೆ 30 ಲಕ್ಷ ಹಣ ದರ್ಶನ್ ಕೊಟ್ಟಿದ್ದರು. ಕೊಲೆ ಮಾಡಿದ ಜಾಗದಲ್ಲಿ ಸಿಸಿಟಿವಿ ಡಿವಿಆರ್‌ನಲ್ಲಿನ ವೀಡಿಯೊ ಅಳಿಸಿಹಾಕಿ ಸಾಕ್ಷ್ಯನಾಶದ ಯತ್ನ ನಡೆದಿದೆ. ಪ್ರಮುಖ ಸೂತ್ರಧಾರನೇ ದರ್ಶನ್ ಆದ್ದರಿಂದ ಎ1 ಆರೋಪಿ ಮಾಡಲು ಪೊಲೀಸರು ತಯಾರಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೈದ್ಯರ ಸುರಕ್ಷತೆ; ವರದಿಗೆ ಕಾರ್ಯಪಡೆ

ಬೆಂಗಳೂರು: ರಾಜ್ಯದ ವೈದ್ಯರ ಸುರಕ್ಷತೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿ ನೀಡಲು ಕಾರ್ಯಪಡೆ ರಚಿಸಲು ತೀರ್ಮಾನಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಕೋಲ್ಕತ್ತಾದ ಟ್ರೈನಿ ವೈದ್ಯೆಯ ಮೇಲಿನ ಅತ್ಯಾಚಾರ ಕೊಲೆ ಪ್ರಕರಣ ಸಂಬಂಧ ರಾಜ್ಯದಲ್ಲೂ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಮುಂದಾದ ಆರೋಗ್ಯ ಇಲಾಖೆ, ವಿಧಾನಸೌಧದಲ್ಲಿ ಅಧಿಕಾರಿಗಳು, ವಿವಿಧ ವೈದ್ಯ ಸಂಘಟನೆಗಳ ಜತೆ ಸಭೆ ನಡೆಸಿ ಬಳಿಕ ಮಾತನಾಡಿದ ಅವರು, ಕರ್ತವ್ಯನಿರತ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಗೆ ಭದ್ರತೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ. ಸಭೆಯಲ್ಲಿ ಉನ್ನತ ಮಟ್ಟದ ಕಾರ್ಯಪಡೆ ರಚಿಸಿ ಎಲ್ಲ ವಿಷಯ ಕ್ರೋಢೀಕರಿಸಿ ವರದಿ ನೀಡಲು ತೀರ್ಮಾನಿಸಿದ್ದೇವೆ. ಈ ಕಾರ್ಯಪಡೆ ವೈದ್ಯರ ಸುರಕ್ಷತೆ ಬಗ್ಗೆ ಕೈಗೊಳ್ಳಬೇಕಾದ ಕ್ರಮ, ಕಾನೂನುಗಳ ಅನುಷ್ಠಾನ ಸೇರಿ ಎಲ್ಲಾ ಆಯಾಮಗಳಲ್ಲಿ ವೈದ್ಯರ ಭದ್ರತೆಗೆ ತೆಗೆದುಕೊಳ್ಳಬೇಕಾದ ಕ್ರಮ ಗಳ ಬಗ್ಗೆ ಒಂದು ತಿಂಗಳಲ್ಲಿ ವರದಿ ನೀಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

{ಡಾ.ಜಿ.ಪರಮೇಶ್ವರ್} ಗೃಹ ಸಚಿವ

ಮುಖ್ಯಮಂತ್ರಿ ಬದಲಾವಣೆ ಕುರಿತು ಪಕ್ಷದಲ್ಲಿ ಯಾವುದೇ ಚರ್ಚೆ ನಡೆಯುತ್ತಿಲ್ಲ. ಸಿಎಂ ಬದಲಾವಣೆಯ ಸಂದರ್ಭ ಬಂದರೆ ಯಾರಿಗೆ ಅವಕಾಶ ಎಂಬ ಚರ್ಚೆಗಳಾಗುತ್ತವೆ. ಆದರೆ ಸದ್ಯಕ್ಕೆ ಎಲ್ಲಿಯೂ ಅಂತಹ ಚರ್ಚೆ ನಡೆಯುತ್ತಿಲ್ಲ. ಸಿಎಂ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ದೆಹಲಿಗೆ ಭೇಟಿ ನೀಡಿ ಪ್ರಸ್ತುತ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ನೀಡಲಿದ್ದಾರೆ. ಅದನ್ನು ಹೊರತುಪಡಿಸಿದರೆ ವಿಶೇಷವೇನೂ ಇಲ್ಲ.

ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿಕೆ

ಗಣೇಶೋತ್ಸವಕ್ಕೆ ಏಕಗವಾಕ್ಷಿ ಪದ್ಧತಿಯಲ್ಲಿ ಅನುಮತಿ ಪತ್ರ

ಬೆಂಗಳೂರು: ನಗರದಲ್ಲಿ ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುವಾಗುವಂತೆ ಪಾಲಿಕೆಯ 63 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಪದ್ಧತಿಯಲ್ಲಿ ಒಂದೇ ಸೂರಿನಲ್ಲಿ ಅನುಮತಿ ಪತ್ರವನ್ನು ಪಡೆಯಬಹುದು ಎಂದು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ನಗರದ ಪುರಭವನದಲ್ಲಿ ಬಿಬಿಎಂಪಿ ಹಾಗೂ ನಗರ ಪೊಲೀಸ್ ಇಲಾಖೆ ವತಿಯಿಂದ ಗಣೇಶ ಚತುರ್ಥಿ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವಿಕೆ ಹಿನ್ನೆಲೆ ಆಯೋಜಿಸಲಾದ ಶಾಂತಿ ಸೌಹಾರ್ದ ಸಭೆಯಲ್ಲಿ ಮಾತನಾಡಿ, ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುವಾಗುವಂತೆ ಪಾಲಿಕೆಯ 63 ಉಪ ವಿಭಾಗ ಕಚೇರಿಗಳಲ್ಲಿ ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗುವುದು. 63 ಏಕಗವಾಕ್ಷಿ ಕೇಂದ್ರಗಳ ವಿಳಾಸ ಹಾಗೂ ಏಕಗವಾಕ್ಷಿ ಕೇಂದ್ರಗಳಲ್ಲಿರುವ ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಇಲಾಖೆಯ ನೋಡಲ್ ಅಧಿಕಾರಿಗಳ ವಿವರವಾದ ಮಾಹಿತಿಯನ್ನು ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ. ಅದರನುಸಾರ ಗಣೇಶ ಮೂರ್ತಿಗಳನ್ನಿಡುವವರು ಏಕಗವಾಕ್ಷಿ ಸ್ಥಳಕ್ಕೆ ಭೇಟಿ ನೀಡಿ ಒಂದೇ ಸ್ಥಳದಲ್ಲಿ ಅನುಮತಿ ಪಡೆಯಬಹುದು ಎಂದರು.

ಕೆರೆಗಳ ಬಳಿಯಿರುವ ಕಲ್ಯಾಣಿಗಳಲ್ಲಿ ಗಣೇಶ ವಿಸರ್ಜನೆಗಾಗಿ ಅಗತ್ಯ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುತ್ತದೆ. ಪಿಒಪಿ ಗಣೇಶ ಮೂರ್ತಿಗಳನ್ನು ನಿಷೇಧಿಸಲಾಗಿದ್ದು, ಯಾರೂ ಕೂಡಾ ಪಿಒಪಿ ಗಣೇಶ ಮೂರ್ತಿಗಳನ್ನು ಖರೀದಿಸದೆ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನಿಟ್ಟು ಪೂಜಿಸಲು ತಿಳಿಸಿದರು.

ಪಾಲಿಕೆ ವತಿಯಿಂದ ಗಣೇಶ ವಿಸರ್ಜನೆಗೆ ಹಲಸೂರು ಕೆರೆ ಸೇರಿದಂತೆ ಇನ್ನಿತರೆ ಪ್ರಮುಖ ಕೆರೆಗಳ ಕಲ್ಯಾಣಿಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಂಡು ಸರಿಯಾಗಿ ವಿಸರ್ಜನೆ ಮಾಡಲು ಅವಕಾಶ ಮಾಡಿಕೊಡಲಾಗುವುದು. ಪ್ರಮುಖ ಸ್ಥಳ, ಜಂಕ್ಷನ್ ಮತ್ತು ಅವಶ್ಯಕತೆ ಇರುವ ಕಡೆ ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕಗಳನ್ನು ಪ್ರತಿ ವರ್ಷದಂತೆ ವ್ಯವಸ್ಥೆ ಮಾಡಲಾಗುತ್ತದೆ. ಗಣೇಶ ಮೂರ್ತಿಗಳ ವಿಸರ್ಜನೆಗೆ ಗುರುತಿಸಿರುವ ಕೆರೆಗಳ ಕಲ್ಯಾಣಿಗಳ ಬಳಿ ಭದ್ರತೆಯ ದೃಷ್ಟಿಯಿಂದ ಪೊಲೀಸ್ ವ್ಯವಸ್ಥೆಯ ಜತೆಗೆ ಬ್ಯಾರಿಕೇಡ್, ಸಿಸಿಟಿವಿ, ವಿದ್ಯುತ್ ದ್ವೀಪ, ನುರಿತ ಈಜುಗಾರರ ವ್ಯವಸ್ಥೆ, ಕ್ರೇನ್‌ಗಳ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಎಂದರು.

ಪಿಒಪಿ ಗಣೇಶ ಮೂರ್ತಿಗಳನ್ನು ಬ್ಯಾನ್ ಮಾಡಿದರೆ ಎಲ್ಲಾ ಪ್ರದೇಶಗಳಲ್ಲಿಯೂ ಮಾಡಬೇಕು. ಒಂದು ಏರಿಯಾದಲ್ಲಿ ಮಾಡಿ ವ್ಯಾಪಾರಸ್ಥರ ಹೊಟ್ಟೆ ಮೇಲೆ ಹೊಡೆಯಬೇಡಿ. ನಗರದ ಅತ್ತಿಬೆಲೆ, ನಾಗಸಂದ್ರ, ಟ್ಯಾನರಿ ರೋಡ್, ದೊಡ್ಡ ಬಳ್ಳಾಪುರ ಸೇರಿದಂತೆ ಎಲ್ಲಾ ಕಡೆ ಪಿಒಪಿ ಗಣೇಶ ಮೂರ್ತಿಗಳೇ ಇದೆ. ಆದರೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಈ ಬಾರಿ ವ್ಯಾಪಾರ ವಹಿವಾಟು ಕೂಡ ನಡೆಯುತ್ತಿಲ್ಲ. ಮಣ್ಣಿನ ಗಣೇಶ ಮೂರ್ತಿಗಳನ್ನು ತೆಗೆದುಕೊಳ್ಳುತ್ತಿಲ್ಲ.

– **ಶಂಕರಪ್ಪ** ವ್ಯಾಪಾರಿ

ಸಭೆಯಲ್ಲಿನ ಸಲಹೆಗಳು

- ಗಣಪತಿ ವಿಸರ್ಜನೆ ಮಾಡಲು ಸೂಕ್ತವಾದ ಸ್ಥಳ ನಿಗದಿಪಡಿಸಿ, ವಿಸರ್ಜನೆಗೆ ಅವಕಾಶಕ್ಕೆ ಮನವಿ
- ಸೂಕ್ಷ್ಮ ಪ್ರದೇಶಗಳಲ್ಲಿ ಸರಿಯಾದ ಪೊಲೀಸ್ ಭದ್ರತೆ ನೀಡಲು ಮನವಿ.
- ಧಾರ್ಮಿಕ ಆಚರಣೆಗಳು ನಡೆಸುವಾಗ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಿ
- ಪಿಒಪಿ ಗಣೇಶ ಮೂರ್ತಿಗಳನ್ನು ಕಡ್ಡಾಯವಾಗಿ ನಿಷೇಧಿಸಬೇಕು.
- ಏಕ ಗವಾಕ್ಷಿ ಪದ್ಧತಿಯನ್ನು ಸರಿಯಾಗಿ ಜಾರಿಗೊಳಿಸಬೇಕು.
- ವಿಸರ್ಜನೆಯ ಮೆರವಣಿಗೆ ವೇಳೆ ಸಂಚಾರದಟ್ಟಣೆ ಯಾಗದಂತೆ ಕ್ರಮವಹಿಸಲು ಮನವಿ.
- ಗಣೇಶ ಪ್ರತಿಷ್ಠಾಪನೆಯ ಸ್ಥಳದಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಲು ಅನುಮತಿ ನೀಡಲು ಮನವಿ.
- ಮೊಬೈಲ್ ಟ್ಯಾಂಕರ್‌ಗಳನ್ನು ಹೆಚ್ಚಾಗಿ ನಿಯೋಜನೆ ಮಾಡಲು ಮನವಿ.
- ಹೆಚ್ಚು ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಅವಕಾಶ ನೀಡಬಾರದು.
- ಮೆರವಣಿಗೆ ಹೋಗುವ ರಸ್ತೆಗಳನ್ನು ಸರಿಯಾಗಿ ದುರಸ್ತಿಪಡಿಸಿಕೊಡಲು ಮನವಿ.

ಕಡ್ಡಾಯವಾಗಿ ಸಲಹೆ ಸೂಚನೆ ಪಾಲಿಸಿ: ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ಮಾತನಾಡಿ, ಪ್ರತಿ ವರ್ಷದಂತೆ ಶಾಂತಿ ಸೌಹಾರ್ದತೆಯಿಂದ ಗಣೇಶ ಹಬ್ಬವನ್ನು ಆಚರಿಸಬೇಕು. ಈಗಾಗಲೇ ಎಲ್ಲಾ ಕಡೆ ಶಾಂತಿ ಸಭೆಗಳನ್ನು ನಡೆಸಲಾಗಿದೆ. ಈ ಬಾರಿ ಯಾವುದೇ ರೀತಿಯ ಅನಾನುಕೂಲವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪಾಲಿಕೆ, ಪೊಲೀಸ್ ಇಲಾಖೆಯಿಂದ ಬರುವ ಸಲಹೆ, ಸೂಚನೆಗಳನ್ನು ಎಲ್ಲರೂ ತಪ್ಪದೆ ಪಾಲಿಸಬೇಕು.

ಪಿಒಪಿ ಮೂರ್ತಿಗಳ ಮಾರಾಟ ಹೆಚ್ಚಳ

ನಗರದಲ್ಲಿ ಗೌರಿ ಗಣೇಶ ಹಬ್ಬವನ್ನು ಆಚರಿಸಲು ಸಕಲ ಸಿದ್ಧತೆಗಳು ನಡೆಸಲಾಗುತ್ತಿದ್ದು, ಇದರ ಬೆನ್ನಲ್ಲೇ ನಿಷೇಧಿಸಲಾಗಿರುವ ಪಿಒಪಿ ಮೂರ್ತಿಗಳ ಮಾರಾಟವು ಅವ್ಯಾಹತವಾಗಿ ನಡೆದಿದೆ. ಪಿಒಪಿ ಮೂರ್ತಿಗಳ ಬಳಕೆಯನ್ನು ನಿಷೇಧಿಸಲಾಗಿದ್ದರೂ ಕೂಡಾ ಮೂರ್ತಿಗಳ ವ್ಯಾಪಾರವು ನಡೆಯುತ್ತಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಮಾತ್ರ ಗೈಡ್ ಲೈನ್ಸ್ ಹೊರಡಿಸಿ ಸುಮ್ಮನಾಗಿದ್ದಾರೆ. ನಗರದಲ್ಲಿ ಪಿಒಪಿ ಮೂರ್ತಿಗಳನ್ನು ನಿಷೇಧಿಸಿ ಮೂರು ವರ್ಷಗಳೇ ಕಳೆದಿದ್ದರೂ ಕೂಡಾ ಇನ್ನೂ ಪಿಒಪಿ ಮೂರ್ತಿಗಳ ಹಾವಳಿ ಹೆಚ್ಚಿದ್ದು, ನಗರದ ಗಣೇಶ ಮೂರ್ತಿಗಳ ವ್ಯಾಪಾರಸ್ಥರು ಮಾತ್ರ ಈ ನಿಯಮ ನಮಗೆ ಅನ್ವಯವಾಗಿಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ. ನಗರದ ರಸ್ತೆ ಬದಿಗಳಲ್ಲಿ ರಾಜಾರೋಷವಾಗಿ ಪಿಒಪಿ ಮೂರ್ತಿಗಳನ್ನು ಮಾರಾಟ ಮಾಡಲಾಗುತ್ತಿದ್ದು, ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ.

ಮೆರವಣಿಗೆ, ಮೆರವಣಿಗೆ ಮಾರ್ಗಕ್ಕೆ ಎಲ್ಲರೂ ಸಹಕಾರ ನೀಡಬೇಕು. ಹಬ್ಬದ ವೇಳೆ ಅನಾನುಕೂಲ, ಅಚಾತುರ್ಯ ನಡೆಯದಂತೆ ನೋಡಿಕೊಳ್ಳಲಾಗುವುದು. ಎಲ್ಲಿಯೂ ಸಂಚಾರ ದಟ್ಟಣೆಯಾಗದಂತೆ ಪೊಲೀಸ್ ಅಧಿಕರಿಗಳು ಸೂಕ್ರ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ರಸ್ತೆಗಳ ನಡುವೆ ಗಣೇಶ ಮೂರ್ತಿಗಳನ್ನಿಡುವುದನ್ನು ನಿಯಂತ್ರಿಸಿ ಸೂಕ್ತವಾದ ಜಾಗವನ್ನು ಗುರುತಿಸಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಬೇಕು. ಇದರಿಂದ ನಾಗರೀಕರಿಗೆ ಅನುಕೂಲವಾಗಲಿದೆ. ಕಾನೂನು ವ್ಯವಸ್ಥೆಯಲ್ಲಿ ಯಾವುದೇ ರೀತಿಯ ದಕ್ಕೆಯಾಗದಂತೆ ಸಂಭ್ರಮದಿಂದ, ಶಾಂತಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸೋಣ ಎಂದು ಹೇಳಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತ ಸತೀಶ್ ಕುಮಾರ್, ರಮಣ ಗುಪ್ತಾ, ಸಂಚಾರಿ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಅನುಚೇತ್, ಬೆಸ್ಕಾಂ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು, ಇತರ ಪೊಲೀಸ್ ಅಧಿಕಾರಿಗಳು, ಅಗ್ನಿಶಾಮಕ ಅಧಿಕಾರಿಗಳು, ಗಣೇಶ ಪ್ರತಿಷ್ಠಾನದ ಆಯೋಜಕರು, ವಿವಿಧ ಸಮುದಾಯದ ಮುಖಂಡರು ಇದ್ದರು.

ದೆಹಲಿ ಮಾದರಿಯ ಪಾಲಿಕೆ ಬಜಾರ್

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ದೆಹಲಿಯ ಮಾದರಿಯಲ್ಲಿಯೇ ಪಾಲಿಕೆ ಬಜಾರ್ ನಿರ್ಮಿಸಲಾಗಿದ್ದು, ತಿಂಗಳಾಂತ್ಯಕ್ಕೆ ಈ ಅಂಡರ್‌ಗ್ರೌಂಡ್ ಬಜಾರ್ ಲೋಕಾರ್ಪಣೆಯಾಗಲಿದೆ.

ಪಾಲಿಕೆ ಬಜಾರ್‌ನ್ನು ಭಾನುವಾರ ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ಮಾಡಲಿದ್ದು, ಗೋವಿಂದರಾಜ ಶಾಸಕ ಪ್ರಿಯ ಕೃಷ್ಣ, ಕಾಂಗ್ರೆಸ್ ಯುವ ಮುಖಂಡ ಪ್ರದೀಪ್ ಕೃಷ್ಣಪ್ಪ, ಸರಕಾರದ ಸಚಿವರು, ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ.

ವಿಜಯನಗರದ ಮೆಟ್ರೋ ನಿಲ್ದಾಣದ ಸಮೀಪವಿರುವ ಈ ಪಾಲಿಕೆ ಬಜಾರ್ ಅಂಡರ್ ಗ್ರೌಂಡ್ ಹವಾನಿಯಂತ್ರಿತ ಮಾರುಕಟ್ಟೆಯಾಗಿರಲಿದ್ದು, ಸಾರ್ವಜನಿಕರಿಗೆ ಅನುಕೂಲಕರ ಸ್ಥಳದಲ್ಲಿದೆ. 2017ರ ಡಿಸೆಂಬರ್‌ನಲ್ಲಿ ಈ ಯೋಜನೆ ಆರಂಭಿಸಲಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಸಾರ್ವಜನಿಕರ ಸಂಚಾರಕ್ಕೂ ಸಮಸ್ಯೆಯಾಗುತ್ತಿತ್ತು. ಹೀಗಾಗಿ ವ್ಯಾಪಾರಿಗಳಿಗೂ ಅನುಕೂಲವಾಗಲಿ ಎನ್ನುವ ನಿಟ್ಟಿನಲ್ಲಿ ಈ ಪಾಲಿಕೆ ಬಜಾರ್‌ನ್ನು ಪ್ರಾರಂಭಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ,

ಸಂಚಾರ ಸಮಸ್ಯೆ ನಿವಾರಣೆ: ಪಾಲಿಕೆಯಿಂದ ಬೀದಿಬದಿ ವ್ಯಾಪಾರಿಗಳಿಗೆ ನೀಡಲಾಗಿರುವ ಕಾರ್ಡ್‌ಗಳೂ ಇರುವುದರಿಂದ ತುಂಬಾ ಕಡಿಮೆ ವೆಚ್ಚದಲ್ಲಿ ಮಳಿಗೆಗಳನ್ನಿಟ್ಟುಕೊಂಡು ವ್ಯಾಪಾರ ಮಾಡಬಹುದಾಗಿದೆ. ಇಲ್ಲಿ ವ್ಯಾಪಾರಿಗಳಿಗೆ ಕಡಿಮೆ ವೆಚ್ಚದಲ್ಲಿ ವ್ಯಾಪಾರ ಮಾಡಲು ಅನುವು ಮಾಡಿಕೊಡಲಾಗುತ್ತಿದ್ದು, ಇಲ್ಲಿ ಎಸಿ, ಶೌಚಾಲಯ ಹಾಗೂ ಇತರೆ ಅನಿವಾರ್ಯ ಸೌಕರ್ಯಗಳನ್ನು ಮಾಡಿಕೊಡಲಾಗುತ್ತಿದೆ. ಇನ್ನು ಸಾರ್ವಜನಿಕ ಸ್ಥಳಗಳಲ್ಲಿ ಮಳಿಗೆಗಳನ್ನು ಇಡುವುದರಿಂದ ಜನರಿಗೆ ಸಂಚರಿಸಲೂ ಅನಾನುಕೂಲವಾಗುವುದರಿಂದ ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಅಂಡರ್ ಗ್ರೌಂಡ್ ಪಾಲಿಕೆ ಬಜಾರ್ ಸಹಕಾರಿಯಾಗಲಿದೆ. ನಗರೋತ್ಥಾನ ಯೋಜನೆಯಲ್ಲಿ ನಿರ್ಮಿಸಲಾದ ಈ ಮಾರುಕಟ್ಟೆಯಲ್ಲಿ 79 ಕ್ಕೂ ಹೆಚ್ಚು ಮಳಿಗೆಗಳು ಇರಲಿದೆ. ಜತೆಗೆ ಎರಡು ಎಸ್ಕಲೇಟರ್, ಒಂದು ಲಿಫ್ಟ್ ಇರಲಿದ್ದು, 7-8 ಪ್ರವೇಶ ಹಾಗೂ ನಿರ್ಗಮನ ಪಾಯಿಂಟ್‌ಗಳಿರಲಿವೆ. 7-8 ಸ್ಕೈಲೈಟ್‌ಗಳೂ ಇರಲಿದೆ.

ಈ ಹೊಸ ಮಾರುಕಟ್ಟೆ ನಿರ್ಮಾಣವಾಗಿರುವ ಪ್ರದೇಶದಲ್ಲಿ ಈ ಹಿಂದೆ 150 ಕ್ಕೂ ಹೆಚ್ಚು ಮಾರಾಟಗಾರರು ತರಕಾರಿಗಳು, ಹೂವುಗಳು ಮತ್ತು ಇತರ ಅಗತ್ಯ ವಸ್ತುಗಳನ್ನು ಒದಗಿಸುವ ವ್ಯಾಪಾರ -ವಹಿವಾಟು ನಡೆಯುತ್ತಿದ್ದವು. ಹೊಸ ಅಂಡರ್ ಗ್ರೌಂಡ್ ಮಾರುಕಟ್ಟೆಗೆ ಸ್ಥಳಾವಕಾಶ ಕಲ್ಪಿಸಲು ಹಳೆಯ ಸರ್ವಿಸ್ ರಸ್ತೆಯನ್ನು ಪರಿವರ್ತಿಸಲಾಗಿದೆ. ಮೆಟ್ರೋ ನಿಲ್ದಾಣದ ಬಳಿ ಸಬ್‌ವೇ ಪಕ್ಕದಲ್ಲಿ ಈ ಅಂಡರ್ ಗ್ರೌಂಡ್ ಪಾಲಿಕೆ ಬಜಾರ್ ಇರಲಿದ್ದು, ಮೆಟ್ರೋದ ನಿರ್ಗಮನಕ್ಕೂ ಬಜಾರ್‌ನ ಆಗಮನಕ್ಕೂ 10 ಮೀ. ಅಂತರವಿರಲಿದೆ.

ಏನೆಲ್ಲ ವ್ಯವಸ್ಥೆ..?

- ಒಂದು ಎಲೆಕ್ಟ್ರಿಕ್ ಕೋಣೆ
- ಒಂದು ಸ್ಟೋರ್ ಆಫೀಸ್
- 26 ಒಳಾಂಗಣ ಎಸಿ ಯುನಿಟ್
- ಐದು ಹೊರಾಂಗಣ ಯುನಿಟ್
- ಎಂಟು ಆಗಮನ-ನಿರ್ಗಮನ ಪಾಯಿಂಟ್
- ಎರಡು ಎಸ್ಕಲೇಟರ್
- ಒಂದು ಗೂಡ್ಸ್ ಅಥವಾ ವ್ಯಕ್ತಿಗಳ ಲಿಫ್ಟ್

ಐದು ಕೋಟಿ ವೆಚ್ಚದಲ್ಲಿ ನಿರ್ಮಾಣ

ವಿಜಯನಗರದಲ್ಲಿ ಉದ್ಘಾಟನೆಗೆ ಕಾಯುತ್ತಿರುವ ನೂತನ ಅಂಡರ್‌ಗ್ರೌಂಡ್ ಪಾಲಿಕೆ ಬಜಾರ್ 100 ಮೀ.ಉದ್ದ, 11 ಮೀ. ಅಗಲ ಇದ್ದು, 3 ಮೀ. ಅಗಲದ ಪಾದಚಾರಿ ಮಾರ್ಗವನ್ನು ಹೊಂದಿದ್ದು, ಮಾರ್ಗದ ಎರಡೂ ಬದಿಗೆ 75ಕ್ಕೂ ಹೆಚ್ಚು ಮಳಿಗೆಗಳಿವೆ. ನಗರೋತ್ಥಾನ ಯೋಜನೆಯಲ್ಲಿ 5 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಸೆನ್ಸಾರ್ ಹೊಂದಿದ ಸ್ಲೈಡಿಂಗ್ ಬಾಗಿಲುಗಳು, ಎಸ್ಕಲೇಟರ್‌ಗಳು ಮತ್ತು ಲಿಫ್ಟ್ ಸೌಲಭ್ಯವನ್ನು ಹೊಂದಿದೆ. ಈ ಮಾರುಕಟ್ಟೆಗೆ ಎರಡು ಗೇಟ್‌ಗಳ ಮೂಲಕ ಸುಲಭವಾಗಿ ಪ್ರವೇಶಿಸಬಹುದಾಗಿದ್ದು, ಮಾರುಕಟ್ಟೆಗೆ ನೀರು ನುಗ್ಗದಂತೆ ಅದರ ಸುತ್ತ ಪ್ರತ್ಯೇಕ ಪೈಪ್‌ಲೈನ್ ನಿರ್ಮಾಣ ಮಾಡಿ ಮಳೆ ನೀರನ್ನು ಮುಖ್ಯ ರಸ್ತೆಯಲ್ಲಿರುವ ಚರಂಡಿಗೆ ಹರಿಯುವಂತೆ ಮಾಡಲಾಗಿದೆ ಎನ್ನುವ ಮಾತು ಕೇಳಿಬಂದಿದೆ.

ಫೋಟೋ ಜರ್ನಲಿಸ್ಟ್ ಸಂಘದ ವತಿಯಿಂದ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನದಲ್ಲಿ ವಿಶ್ವವಾಣಿ ಛಾಯಾಗ್ರಾಹಕ ಸುಧಾಕರ್ ದೇವರಾಜ್ ಅವರು ಕ್ಲಿಕ್ಕಿಸಿರುವ ಫೋಟೋಗಳನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ವೀಕ್ಷಿಸಿದರು. ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಇದ್ದರು.

26ರವರೆಗೆ ಮಳೆ; ಇಲಾಖೆ ಮುನ್ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಮುಂದುವರಿದಿದ್ದು, ಮುಂದಿನ 24 ಗಂಟೆಗಳಿಗೆ ಅನ್ವಯವಾಗುವಂತೆ 15 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ರಾಜ್ಯದ ವಿವಿಧ ಕಡೆಗಳಲ್ಲಿ ಮಳೆಯಬ್ಬರ ಜೋರಾಗಿದ್ದು, ಮಂಗಳವಾರ ಸಂಜೆಯಿಂದ ಬುಧವಾರವೂ ನಗರದ ಅನೇಕ ಕಡೆಗಳಲ್ಲಿ ವ್ಯಾಪಕ ಮಳೆ ದಾಖಲಾಗಿದೆ. ಈ ಪೈಕಿ ವಿ.ನಾಗೇನಹಳ್ಳಿಯಲ್ಲಿ ಅತ್ಯಧಿಕ ಮಳೆ ದಾಖಲಾಗಿದ್ದು,ನಗರದಲ್ಲಿ ಆಗಸ್ಟ್ ಮಧ್ಯಭಾಗದಿಂದ ದೈನಂದಿನ ಮಳೆ ಮುಂದುವರಿದಿದೆ.

ಹವಾಮಾನ ಇಲಾಖೆ ಪ್ರಕಾರ, ಕರ್ನಾಟಕ ಕರಾವಳಿಯ ಪೂರ್ವ ಮಧ್ಯ ಅರೇಬಿಯನ್ ಸಮುದ್ರದಿಂದ ಮಾಲ್ಡೀವ್ ಪ್ರದೇಶದವರೆಗೆ ಸರಾಸರಿ ಸಮುದ್ರ ಮಟ್ಟದಿಂದ 0.9 ಕಿಮೀ ಎತ್ತರದಲ್ಲಿ ಸುಳಿಗಾಳಿ ಸುತ್ತುವರಿದಿದ್ದು, ಚಂಡಮಾರುತದ ಪರಿಚಲನೆ ಸರಾಸರಿ ಸಮುದ್ರ ಮಟ್ಟದಿಂದ 0.9 ಕಿ.ಮೀ ವರೆಗೆ ವಿಸ್ತರಣೆಗೊಳ್ಳುತ್ತಿದ್ದ ಸ್ಥಿತಿ ತಗ್ಗಿದೆ.

ಎಲ್ಲೆಲ್ಲಿ ಎಷ್ಟು ಮಳೆ..?: ವಿ.ನಾಗೇನಹಳ್ಳಿ 35 ಮಿ.ಮೀ, ಕೊಡಿಗೆಹಳ್ಳಿ 30, ರಾಧಾಕೃಷ್ಣ ಟೆಂಪಲ್‌ವಾರ್ಡ್ 30, ಎಚ್‌ಬಿಆರ್ ಬಡಾವಣೆ 18.5, ಬಾಣಸವಾಡಿ 18.5, ಮನೋರಾಯನಪಾಳ್ಯ 17, ಕುಶಾಲನಗರ 17, ಕೆಂಗೇರಿ 15.5, ರಾಜಮಹಲ್ ಗುಟ್ಟಹಳ್ಳಿ 13.5, ದಯಾನಂದನಗರ 11.5 ಮತ್ತು ಆರ್‌ಆರ್ ನಗರ ಮತ್ತು ಕೆಂಗೇರಿಯಲ್ಲಿ ತಲಾ 11 ಮಿ.ಮೀ ಮಳೆ ದಾಖಲಾಗಿದೆ.

ದಕ್ಷಿಣ ಕನ್ನಡ, ಬೆಳಗಾವಿ, ಕೋಲಾರ, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಶಿವಮೊಗ್ಗ, ತುಮಕೂರು, ವಿಜಯನಗರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಕೊಡಲಾಗಿದೆ. ಆಗಸ್ಟ್ 27 ರವರೆಗೆ ಕರಾವಳಿಯ ಮೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಬುಧವಾರ ಮತ್ತು ಗುರುವಾರ ಮಧ್ಯಾಹ್ನದವರೆಗೆ ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಪ್ರತ್ಯೇಕ ಭಾರೀ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಕನ್ನಡ, ಬೆಳಗಾವಿ, ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಬಹುತೇಕ ಕಡೆಗಳಲ್ಲಿ ಗುಡುಗುಸಹಿತ ಮಳೆಯಾಗಲಿದೆ. ಇನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಮಳೆಯಾಗುವ ಸಂಭವವಿದೆ. ದಕ್ಷಿಣ ಒಳನಾಡು ಉಳಿದ ಜಿಲ್ಲೆಗಳಲ್ಲಿ, ಕರಾವಳಿ ಕರ್ನಾಟಕದ ಉಳಿದ ಜಿಲ್ಲೆಗಳ ಹೆಚ್ಚಿನ ಸ್ಥಳಗಳಲ್ಲಿ ಮತ್ತು ಉತ್ತರ ಒಳನಾಡು ಉಳಿದ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಶೂಟಿಂಗ್ ಸೆಂಟರ್ ಉದ್ಘಾಟನಾ ಭಾಗ್ಯ ಯಾವಾಗ?

ಎರಡು ವರ್ಷದಿಂದ ಉದ್ಘಾಟನೆಗೆ ಕಾಯುತ್ತಿರುವ ತರಬೇತಿ ಕೇಂದ್ರ | ಏಳು ಕೋಟಿ ವೆಚ್ಚದಲ್ಲಿ 2022ರಲ್ಲಿಯೇ ನಿರ್ಮಾಣ ಆರಂಭ

ಅಪರ್ಣಾ ಎ.ಎಸ್. ಬೆಂಗಳೂರು

ದೇಶದಲ್ಲಿ ಸದ್ಯ ಒಲಿಂಪಿಕ್ಸ್ ಹವಾ ಜೋರಾಗಿದ್ದು, ಅದರಲ್ಲಿಯೂ ಒಂದೇ ಒಲಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದು, ಮೂರನೇ ಪದಕವನ್ನು ಕೂದಲೆಳೆ ಅಂತರದಲ್ಲಿ ಕಳೆದುಕೊಂಡ ಮನು ಭಾಕರ್ ಈಗ ದೇಶದ ಕೋಟ್ಯಂತರ ಜನರ ಮಾದರಿಯಾಗಿದ್ದಾರೆ. ಮನು ಭಾಕರ್‌ನಂತೆ ತಾನೂ ಶೂಟಿಂಗ್‌ನಲ್ಲಿ ಸಾಧನೆ ಮಾಡಬೇಕೆಂಬ ಕನಸನ್ನು ಹೊತ್ತ ಹಲವರಿದ್ದಾರೆ.

ಆದರೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವರ್ಷಗಳ ಹಿಂದೆಯೇ ಶೂಟಿಂಗ್‌ಗಾಗಿ ಪ್ರತ್ಯೇಕ ತರಬೇತಿ ಕೇಂದ್ರ ಆರಂಭಿಸಲು ನಿರ್ಧರಿಸಿ, ಕೋಟ್ಯಂತರ ರುಪಾಯಿ ವೆಚ್ಚದಲ್ಲಿ ನಿರ್ಮಾಣ ಕಾಮಗಾರಿಯನ್ನು ನಡೆಸಲಾಗಿದೆ. ಆದರೆ ಕಾಮಗಾರಿ ಪೂರ್ಣಗೊಂಡು ವರ್ಷಗಳು ಕಳೆದಿದ್ದರೂ ಶೂಟರ್‌ಗಳಿಗೆ ತರಬೇತಿಗಾಗಿ ಮಾತ್ರ ಈ ಕ್ರೀಡಾಂಗಣ ಲಭ್ಯವಾಗುತ್ತಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

ಬಸವನಗುಡಿಯ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿ ನಿರ್ಮಿಸಿದ ಕ್ರೀಡಾ ಸಂಕೀರ್ಣದಲ್ಲಿರುವ ಶೂಟಿಂಗ್ ತರಬೇತಿ ಕೇಂದ್ರಕ್ಕೆ ಕಳೆದ ಸರಕಾರದ ಅವಧಿಯಲ್ಲಿಯೇ ಬಸವರಾಜ ಬೊಮ್ಮಾಯಿ ಭೇಟಿ ನೀಡಿ, ಪರಿಶೀಲಿಸಿ 'ಸಾಂಕೇತಿಕ' ಚಾಲನೆಯನ್ನು ನೀಡಿದ್ದರು. ಆದರೆ ಕೆಲವು ಕಾರ್ಯಗಳು ಬಾಕಿಯಿದಿದ್ದರಿಂದ ಅಧಿಕೃತವಾಗಿ ಉದ್ಘಾಟನೆಯಾಗಿರಲಿಲ್ಲ. ಇದೀಗ ಈ ಎಲ್ಲ ಕಾರ್ಯಗಳೂ ಮುಗಿದಿದ್ದರೂ ಉದ್ಘಾಟನೆಯನ್ನು ಮಾಡಿಲ್ಲ. ಇದೇ ಕಾರಣಕ್ಕೆ, ಸ್ಥಳೀಯ ಕ್ರೀಡಾಪಟುಗಳ ತರಬೇತಿಗೆ ಅವಕಾಶ ನೀಡುತ್ತಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

ತರಬೇತಿ ಕೇಂದ್ರದ ಕಾಮಗಾರಿ ಪೂರ್ಣಗೊಂಡಿದ್ದರೂ ರಾಜಕೀಯ ಹಿತಾಸಕ್ತಿ ಹಾಗೂ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಉದ್ಘಾಟನೆಯಾಗಿಲ್ಲ. ಈ ಬಗ್ಗೆ ಅಧಿಕಾರಿಗಳು ವಿಚಾರಿಸಿದರೆ, ಸೂಕ್ತರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಿಲ್ಲ. ಕೋಟ್ಯಂತರ ರುಪಾಯಿ ಖರ್ಚು ಮಾಡಿ ಅಳವಡಿಸಿರುವ ಸಲಕರಣೆಗಳನ್ನು ಸೂಕ್ತ ರೀತಿಯಲ್ಲಿ ಬಳಕೆ ಮಾಡದಿರುವುದರಿಂದ ಹಾಳಾಗುತ್ತಿವೆ ಎನ್ನುವ ಆತಂಕವನ್ನು ಅನೇಕರ ಪೋಷಕರು ವ್ಯಕ್ತಪಡಿಸಿದ್ದಾರೆ.

ಬೊಮ್ಮಾಯಿ ಅವಧಿಯಲ್ಲಿಯೇ ಕಾಮಗಾರಿ ಪೂರ್ಣ: ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಅವರು 2022ರ ಡಿಸೆಂಬರ್‌ನಲ್ಲಿ ಈ ಕ್ರೀಡಾ ಸಂಕೀರ್ಣಕ್ಕೆ ಚಾಲನೆ ನೀಡಿದ್ದರು. ಏಳು ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಮೂರು ಅಂತಸ್ತಿನ ಕ್ರೀಡಾ ಸಂಕೀರ್ಣದ ಕಟ್ಟಡದಲ್ಲಿ, ನೆಲ ಮಹಡಿಯನ್ನು ಶೂಟಿಂಗ್ ತರಬೇತಿಗಾಗಿ ಮೀಸಲಿರಿಸಲಾಗಿದ್ದು, ಶೂಟಿಂಗ್ ತರಬೇತಿಗಾಗಿಯೇ ಸುಮಾರು ಒಂದು ಕೋಟಿ ರುಪಾಯಿ ವೆಚ್ಚದಲ್ಲಿ ಸಿದ್ಧಪಡಿಸಲಾಗಿದೆ. ಕೇಂದ್ರದ ಎಲ್ಲ ಕಾರ್ಯಪೂರ್ಣಗೊಂಡಿದ್ದರೂ, ಉದ್ಘಾಟನೆ ಮಾಡಲು ಬಿಬಿಎಂಪಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

ತರಬೇತಿಯೇ ನೀಡದಿದ್ದರೆ ಮನು ಬಾಕರ್ ಹೇಗಾಗುತ್ತಾರೆ?: ರಾಜ್ಯ, ಕೇಂದ್ರ ಸರಕಾರಗಳು ಪ್ರತಿಬಾರಿ ಒಲಿಂಪಿಕ್ಸ್, ಕಾಮನ್ ವೆಲ್ತ್ ಸಮಯದಲ್ಲಿ ಕ್ರೀಡೆಗಳ ಬಗ್ಗೆ ಆಸಕ್ತಿ ತೋರುತ್ತವೆ. ಆದರೆ ಸಣ್ಣ ಮಕ್ಕಳಿಗೆ ತರಬೇತಿ ನೀಡುವ ವಿಷಯದಲ್ಲಿ ನಿರ್ಲಕ್ಷ್ಯ ತೋರುತ್ತವೆ. ಈ ರೀತಿಯಾದರೆ ಒಲಿಂಪಿಕ್ಸ್ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸುವ, ದೇಶಕ್ಕೆ ಪದಕ ತಂದುಕೊಡಬೇಕು ಎಂದು ಕ್ರೀಡಾಪಟುಗಳಿಂದ ನಿರೀಕ್ಷೆ ಮಾಡಲು ಹೇಗೆ ಸಾಧ್ಯ ಎನ್ನುವ ಪ್ರಶ್ನೆಯನ್ನು ಪೋಷಕರು ಕೇಳುತ್ತಿದ್ದಾರೆ.

ಪೋಷಕರ ಆಕ್ರೋಶ

ಬಿಬಿಎಂಪಿ ವತಿಯಿಂದ ನಿರ್ಮಾಣವಾಗಿರುವ ಈ ತರಬೇತಿ ಕೇಂದ್ರದಲ್ಲಿ 10 ಮೀಟರ್ ಏರ್ ಪಿಸ್ತೂಲ್ ಹಾಗೂ 10 ಮೀಟರ್ ಏರ್ ರೈಫಲ್ ಶೂಟಿಂಗ್ ತರಬೇತಿಗೆ ಅಗತ್ಯ ಸಲಕರಣೆಗಳನ್ನು ನೀಡಲಾಗಿದೆ. ಈ ಕೇಂದ್ರದಲ್ಲಿ ಏರ್ ಪಿಸ್ತೂಲ್ ಶೂಟಿಂಗ್, ಏರ್ ರೈಫಲ್ ಶೂಟಿಂಗ್ ತರಬೇತಿಗೆ ಎಲ್ಲ ಸಲಕರಣೆಗಳಿವೆ. ಆದರೆ ಕೇಂದ್ರ ಉದ್ಘಾಟನೆಯಾಗಿಲ್ಲ ಹಾಗೂ ತರಬೇತುದಾರರು ಲಭ್ಯವಿಲ್ಲ ಎನ್ನುವುದು ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.

ಖಾಸಗಿಯಾಗಿ ಶೂಟಿಂಗ್ ಕ್ರೀಡೆಯಲ್ಲಿ ತರಬೇತಿ ಪಡೆಯಬೇಕು ಎಂದರೆ ಲಕ್ಷಾಂತರ ರುಪಾಯಿ ಖರ್ಚಾಗುತ್ತದೆ. ಆದ್ದರಿಂದ ಮಧ್ಯಮ ಹಾಗೂ ಬಡ ಕುಟುಂಬಗಳ ಮಕ್ಕಳಿಗೆ ಖಾಸಗಿ ತರಬೇತಿ ಪಡೆಯುವುದು ಸಾಧ್ಯವಿಲ್ಲ. ಬಿಬಿಎಂಪಿ ವತಿಯಿಂದ ನಿರ್ಮಾಣವಾಗಿರುವ ಶೂಟಿಂಗ್ ಕೇಂದ್ರದಲ್ಲಿ ತರಬೇತಿ ನೀಡುವಂತಾಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕು.

– **ವಸಂತಾ** ಪೋಷಕರು

ಸಂವಿಧಾನ ಉಳಿಸಿ ಪ್ರಜಾಸತ್ತೆಯನ್ನು ಗಟ್ಟಿಗೊಳಿಸಬೇಕಿದೆ

← ಮೊದಲಪುಟದಿಂದ

ಇಂತಹ ಜನಪರ, ಬಡವರಪರ ಇರುವ ಸರ್ಕಾರದ ಜನಪ್ರಿಯತೆಯನ್ನು ಸಹಿಸದಿರುವ ಮೈತ್ರಿ ಪಕ್ಷಗಳು ಕುತಂತ್ರದಿಂದ ರಾಜ್ಯಪಾಲರ ಮೂಲಕ ಸಿದ್ದರಾಮಯ್ಯ ನೇತೃತ್ವದ ಸರಕಾರ ಒಂದಿಲ್ಲೊಂದು ರೀತಿಯಲ್ಲಿ ಕಿರುಕುಳ ನೀಡುತ್ತಿದ್ದಾರೆ. ಕಳೆದ ವರ್ಷ ರಾಜ್ಯದಲ್ಲಿ 223 ತಾಲೂಕುಗಳಲ್ಲಿ ಭೀಕರ ಬರ ಆವರಿಸಿತ್ತು. ಕೇಂದ್ರ ತಂಡ ಬಂದು ಪರಿಶೀಲಿಸಿ ಹೋದರೇ ಹೊರತು ಸೂಕ್ತ ಸಮಯದಲ್ಲಿ ರಾಜ್ಯಕ್ಕೆ ನೀಡಬೇಕಿದ್ದ ಬರಪರಿಹಾರವನ್ನು ಕೇಂದ್ರ ನೀಡಲಿಲ್ಲ. 18,500 ಕೋಟಿ ರೂ. ಪರಿಹಾರ ಹಣವನ್ನು ಸುಮಾರು 35 ಲಕ್ಷ ರೈತರಿಗೆ ನೀಡಬೇಕೆಂದು ಉಪಮುಖ್ಯಮಂತ್ರಿಗಳು, ಕಂದಾಯ, ಗ್ರಾಮೀಣ ಅಭಿವೃದ್ಧಿ ಸಚಿವರು ಮತ್ತು ನಾನು ಮೂರು ಬಾರಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೂ ಒಂದು ನಯಾಪೈಸೆ ಬಿಡುಗಡೆ ಮಾಡಲಿಲ್ಲ.

ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಕದ ತಟ್ಟಿದ ಬಳಿಕ ಬಳಿಕ ಕೋರ್ಟ್ ಸೂಚನೆ ಹಿನ್ನೆಲೆಯಲ್ಲಿ ಅಲ್ಪ ಪರಿಹಾರ ನೀಡಲಾಯಿತು. ಈ ಬಗ್ಗೆ ಮೈತ್ರಿ ಪಕ್ಷದವರು ಒಮ್ಮೆಯೂ ಪ್ರಧಾನಿಯವರನ್ನು ಕೇಳಲಿಲ್ಲ, ಸಂಸತ್ತಿನಲ್ಲಿ ಕೂಡ ದನಿ ಎತ್ತಲಿಲ್ಲ.

ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಸ್ಪಂದನೆ ಇಲ್ಲ. ಕೇಂದ್ರ ಸರಕಾರದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯಕ್ಕೆ ನ್ಯಾಯಯುತವಾಗಿ ದೊರಕಬೇಕಾದ ಅನುದಾನ ದೊರೆಯಲಿಲ್ಲ. ಈ ಬಗ್ಗೆಯೂ ಮೈತ್ರಿ ನಾಯಕರು ಸೊಲ್ಲೆತ್ತಲಿಲ್ಲ. ಆದರೂ ಸಹ ಕರ್ನಾಟಕ ಸರಕಾರ ಗ್ಯಾರಂಟಿ ಯೋಜನೆಗಳಿಗೆ 58 ಸಾವಿರ ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದೆ. ಅಭಿವೃದ್ಧಿಗಾಗಿ 1 ಲಕ್ಷ 20 ಸಾವಿರ ಕೋಟಿ ರೂ. ಅನುದಾನವನ್ನು ಆಯವ್ಯಯದಲ್ಲಿ ತೆಗೆದಿರಿಸಿದೆ. ಇಷ್ಟಾದರೂ ಸುಖಾಸುಮ್ಮನೆ ರಾಜ್ಯ ಸರಕಾರದ ಬೊಕ್ಕಸ ಖಾಲಿಯಾಗಿದೆ ಎಂದು ಅಪಪ್ರಚಾರದಲ್ಲಿ ಮೈತ್ರಿ ಪಕ್ಷಗಳು ಬೊಬ್ಬೆ ಹೊಡೆಯುತ್ತಿವೆ.

ರಾಜ್ಯ ಸರಕಾರ ಜನರ ಹೃದಯ ಗೆದ್ದಿರುವುದನ್ನು ವಿರೋಧಪಕ್ಷಗಳಿಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಜನರ ಮನಗೆದ್ದು ಜನಾಶೀರ್ವಾದದೊಂದಿಗೆ ಸರಕಾರ ರಚಿಸಲು ಸಾಧ್ಯವಾಗದ ಮೈತ್ರಿ ನಾಯಕರು ಜನರ ತೀರ್ಪಿಗೆ ವಿರುದ್ಧವಾಗಿ ಸರಕಾರ ಕೆಡವಲು ಯತ್ನಿಸುತ್ತಿದ್ದಾರೆ. ರಾಜ್ಯಪಾಲರನ್ನು ಮೈತ್ರಿ ನಾಯಕರು ತಮ್ಮ ದಾಳಕ್ಕೆ ತಕ್ಕಹಾಗೆ ಕುಣಿಯುವ ಹಾಗೆ ಮಾಡುತ್ತಿದ್ದಾರೆ. ರಾಜ್ಯಪಾಲರ ಹುದ್ದೆ ಸಂವಿಧಾನಿಕವಾದುದು. ಅದರ ಗೌರವ ಉಳಿಸುವ ಹಾಗೆ ಕಾರ್ಯನಿರ್ವಹಿಸಬೇಕು. ಆದರೆ ಕಳೆದ ಹತ್ತು ವರ್ಷಗಳಿಂದ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಐಟಿ, ಇಡಿ, ಸಿಬಿಐ, ರಾಜ್ಯಪಾಲರನ್ನು ಬಳಸಿಕೊಂಡು ಬಿಜೆಪಿಯೇತರ ಸರಕಾರಗಳನ್ನು ಅಸ್ಥಿರಗೊಳಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಕೇರಳ, ಮಹಾರಾಷ್ಟ್ರ, ತಮಿಳುನಾಡು, ಪಶ್ಚಿಮಬಂಗಾಳ, ದೆಹಲಿ, ಅರುಣಾಚಲಪ್ರದೇಶ ಈಗ ಕರ್ನಾಟಕ ರಾಜ್ಯದಲ್ಲಿ ರಾಜ್ಯಪಾಲರನ್ನು ದಾಳವಾಗಿಸಿಕೊಂಡು ಕಾನೂನು ಬಾಹಿರವಾಗಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಸಂವಿಧಾನಕ್ಕೆ ಮಾಡುತ್ತಿರುವ ಅಪಚಾರ.

ಬಿಜೆಪಿ ಮತ್ತು ಜೆಡಿಎಸ್ ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ರಾಜ್ಯದ ಪ್ರಜ್ಞಾವಂತ ಜನರು ನಿಸ್ಪಕ್ಷವಾಗಿ ಗಮನಿಸುತ್ತಿದ್ದು ಮುಂದಿನ ದಿನಗಳಲ್ಲಿ ಮೈತ್ರಿ ಪಕ್ಷಗಳಿಗೆ ತಕ್ಕ ಪಾಠವನ್ನು ಕಲಿಸಲಿದ್ದಾರೆ. ಮೈತ್ರಿ ನಾಯಕರು ಹಾಗೂ ರಾಜ್ಯಪಾಲರ ಪ್ರಯತ್ನ ಕರ್ನಾಟಕದಲ್ಲಿ ಯಶಸ್ವಿಯಾಗಲ್ಲ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ಯಾವುದೇ ಸ್ಪಷ್ಟ ವಿವರಣೆ ನೀಡದೇ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು ರಾಜಕೀಯ ಪ್ರೇರಿತವೇ ಹೊರತು ಇದರಲ್ಲಿ ಯಾವುದೇ ಸತ್ಯಾಸತ್ಯತೆ ಇಲ್ಲ.

ಸಂವಿಧಾನ ಹಾಗೂ ನ್ಯಾಯಾಂಗದ ಮೇಲೆ ಕಾಂಗ್ರೆಸ್‌ಗೆ ಸಂಪೂರ್ಣ ನಂಬಿಕೆಯಿದ್ದು ನಮಗೆ ನ್ಯಾಯಾಲಯದಲ್ಲಿ ಜಯ ಸಿಗಲಿದೆ ಎಂಬ ಅಚಲ ವಿಶ್ವಾಸವಿದೆ. ಮೈತ್ರಿ ನಾಯಕರಿಗೆ ನ್ಯಾಯಾಲಯದಲ್ಲಿ ಮತ್ತೊಮ್ಮೆ ಹಿನ್ನಡೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

1. ಗೃಹಜ್ಯೋತಿ ಯೋಜನೆಯಿಂದ ರಾಜ್ಯದ 1 ಕೋಟಿ 67 ಲಕ್ಷ ಕುಟುಂಬಗಳು 200 ಯುನಿಟ್ ವರೆಗಿನ ಉಚಿತ ವಿದ್ಯುತ್‌ನ ಪ್ರಯೋಜನ ಪಡೆಯುತ್ತಿವೆ.
2. ಗೃಹಲಕ್ಷ್ಮಿ ಯೋಜನೆಯಿಂದ 1 ಕೋಟಿ 21 ಲಕ್ಷ ಕುಟುಂಬದ ಯಜಮಾನಿಯರಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡಲಾಗುತ್ತದೆ.
3. ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ರಾಜ್ಯಾದ್ಯಂತ ಉಚಿತ ಬಸ್ ಪ್ರಯಾಣದ ಸೌಕರ್ಯ ಕಲ್ಪಿಸುವ ಮೂಲಕ 272 ಕೋಟಿಗೂ ಅಧಿಕ ಟ್ರಿಪ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ.
4. ಅನ್ನಭಾಗ್ಯ ಯೋಜನೆಯಲ್ಲಿ 1 ಕೋಟಿ 20 ಲಕ್ಷ ಕಾರ್ಡ್ ಗಳ ಮೂಲಕ 4 ಕೋಟಿಗೂ ಅಧಿಕ ಜನರು ಪ್ರಯೋಜನ ಪಡೆಯುತ್ತಿದ್ದಾರೆ.
5. ಯುವ ನಿಧಿ ಯೋಜನೆ ಮೂಲಕ ನಿರುದ್ಯೋಗ ಪದವೀಧರರು ಮತ್ತು ಡಿಪ್ಲೊಮಾ ಪದವೀಧರರಿಗೆ ತಲಾ 3000/1500 ರೂ.ನಂತೆ 1 ಲಕ್ಷ 20 ಸಾವಿರ ಜನರು ಈ ಯೋಜನೆ ಪ್ರಯೋಜನ ಪಡೆಯುತ್ತಿದ್ದಾರೆ.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠ	ಇಂದಿನಮಟ್ಟ	ಒಳಹರಿವು
ಕೆಆರ್‌ಎಸ್	124.80	123.64	8,747
ಕಬಿನಿ	2,284	2,282.28	2,676
ಹಾರಂಗಿ	2,859	2,857.65	1,389
ಹೇಮಾವತಿ	2,922	2,920.90	6,483
ತುಂಗಭದ್ರಾ	1,633	1,625.70	30,893
ಆಲಮಟ್ಟಿ	1,704.81	1,704.70	3,4968
ನಾರಾಯಣಪುರ	1,615	1,614.74	35594
ಲಿಂಗನಮಕ್ಕಿ	1,819.12	1,816.80	7,721

ರಾಜ್ಯಪಾಲರಿಗೆ ಬೆದರಿಕೆ ಬಗ್ಗೆ ಗಮನಕ್ಕೆ ಬಂದಿಲ್ಲ

ತುಮಕೂರು: ರಾಜ್ಯಪಾಲರಿಗೆ ಬೆದರಿಕೆ ಇದೆ ಎಂಬುದರ ಕುರಿತು ನನಗಾಗಲಿ ಅಥವಾ ಡಿಜಿ ಅವರ ಗಮನಕ್ಕಾಗಲಿ ಬಂದಿಲ್ಲ. ರಾಜ್ಯಪಾಲರಿಗೆ ಬುಲೆಟ್ ಪ್ರೂಫ್ ಕಾರು ಕೊಟ್ಟಿರುವ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಿಲ್ಲ. ಕೇಂದ್ರದ ಭದ್ರತಾ ವ್ಯವಸ್ಥೆ ಪ್ರಕಾರ ನೀಡಿರಬಹುದು ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾನೂನಿಗಿಂತ ಯಾರು ದೊಡ್ಡವರಿಲ್ಲ. ಕಾನೂನಿಗೆ ಗೌರವ ಕೊಡುತ್ತಿರುವುದರಿಂದಲೇ ಇನ್ನು ನಾವೆಲ್ಲ ಇದ್ದೇವೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಕಾನೂನಿಗೆ ಗೌರವ ನೀಡಬೇಕು ಎಂದರು.

ಜಂತ್ಕಲ್ ಮೈನಿಂಗ್ ವಿಚಾರದಲ್ಲಿ ಸಹಿ ಫೋರ್ಜರಿಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಹಿ ಫೋರ್ಜರಿಯಾಗಿದೆ ಎಂಬುದರ ಕುರಿತು ಕುಮಾರಸ್ವಾಮಿ ಅವರು ದೂರು ಕೊಟ್ಟರೆ ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತೇವೆ. ದ್ವೇಷದ ರಾಜಕಾರಣ ಮಾಡುವುದಿಲ್ಲ. ಕಾನೂನು ಮೀರಿ ಏನನ್ನೂ ಮಾಡಿಲ್ಲ ಎಂದು ಪರಮೇಶ್ವರ್ ಆರೋಪಿಸಿದರು.

ಮಂತ್ರಾಲಯದಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಸಾಂಸ್ಕೃತಿಕ ವಿಶ್ವವಿದ್ಯಾಲಯ ಸ್ಥಾಪನೆ ಸಂಕಲ್ಪ

- ಪೂರ್ವಾರಾಧನೆ ವೇಳೆ ಸುಬುಧೇಂದ್ರ ಶ್ರೀ ಹೇಳಿಕೆ
- ಸಾಧಕರಾದ ಪ್ರಕಾಶಾನಂದ ಸ್ವಾಮೀಜಿ, ಬ್ರಿಜ್ ಭೂಷಣ್ ಓಜಾ, ವಿದ್ವಾನ್ ರಘುಪತಿ ಅವರಿಗೆ ಪ್ರಶಸ್ತಿ ಪ್ರದಾನ
- ವಿವಿಧ ಗ್ರಂಥಗಳ ಲೋಕಾರ್ಪಣೆ, ಪ್ರಧಾನಿಯಿಂದ ಪ್ರಶಂಸೆ

ರಾಯಚೂರು: ಬಾಂಗ್ಲಾ ದೇಶದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯ ಕೈ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಪಾದಂಗಳವರು ತೀವ್ರವಾಗಿ ಖಂಡಿಸಿದರು.

ಶ್ರೀ ರಾಘವೇಂದ್ರ ಸ್ವಾಮಿಗಳ 353 ಆರಾಧನೆಯ ಪೂರ್ವಾರಾಧನೆ ಕಾರ್ಯಕ್ರಮದಲ್ಲಿ ಸಂಜೆ ನಡೆದ ಸಭಾಭವನ ಕಾರ್ಯಕ್ರಮದಲ್ಲಿ ಆಶೀರ್ವದಿಸಿ ಸಾಧಕರಿಗೆ ಶ್ರೀ ರಾಘವೇಂದ್ರ ಅನುಗ್ರಹ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಶ್ರೀಗಳು, ಶಾಂತಿಪ್ರಿಯರಾದ ಭಾರತೀಯ ಹಿಂದೂಗಳು ಸನಾತನ ಧರ್ಮ ರಕ್ಷಕರಾಗಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ತಡೆಯಲು ಸರ್ಕಾರಗಳು ಮುಂದಾಗಬೇಕು. ತೊಂದರೆಗೊಳಗಾದ ಬಾಂಗ್ಲಾದ ಹಿಂದೂಗಳಿಗೆ ನೈತಿಕ ಬೆಂಬಲಕ್ಕೆ ಮಂತ್ರಾಲಯ ಮಠ ಅಭಯ ನೀಡುತ್ತದೆ ಎಂದು ಹೇಳಿದರು. ಮಂತ್ರಾಲಯದಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಸಾಂಸ್ಕೃತಿಕ ವಿಶ್ವವಿದ್ಯಾಲಯವನ್ನುಸ್ಥಾಪಿಸುವ ಸಂಕಲ್ಪ ತಮ್ಮದೆಂದು ಶ್ರೀಗಳು ತಿಳಿಸಿದರು.

ನಂಬಿ ಬಂದ ಭಕ್ತರಿಗೆ ಜಾತ್ಯತೀತವಾಗಿ, ಪ್ರಾಂತಾತೀತ ವಾಗಿ, ಭಾಷಾತೀತವಾಗಿ ರಾಯರ ಕೃಪೆ ಮಂತ್ರಾಲಯದ ಶ್ರೀಗುರುರಾಯರು ಕಲ್ಪಿಸುತ್ತಿದ್ದಾರೆ ಎಂದು ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಆಶೀರ್ವದಿಸಿದರು. ಗುರುರಾಯರ ಸಂದೇಶಗಳನ್ನು ದೇಶದ ವಿವಿಧ ಭಾಷೆಗಳಲ್ಲಿ ಮತ್ತು ಆಂಗ್ಲ ಭಾಷೆಯಲ್ಲಿ 500 ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ ಮಂತ್ರಾಲಯ ಮಠದ ಪ್ರಕಾಶನ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಸಹ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಶ್ರೀಗಳು ಹೇಳಿದರು.

ಮಂತ್ರಾಲಯದ ಶ್ರೀ ಸುಬುಧೇಂದ್ರ ಶ್ರೀಗಳಿಂದ ಕೃತಿ ಬಿಡುಗಡೆ.

ಪ್ರಶಸ್ತಿ ಪ್ರದಾನ: ಇದೆ ಸಂದರ್ಭದಲ್ಲಿ ಬಿಜೆಎಸ್ ಸಂಸ್ಥೆ ಬೆಂಗಳೂರಿನ ಮುಖ್ಯಸ್ಥರಾದ ಪ್ರಕಾಶನಂದ ಸ್ವಾಮಿಜಿ, ವಿದ್ವಾನ್ ರಘುಪತಿ ಉಪಾಧ್ಯಾಯ, ಕಾಶಿ ಬನಾರಸ್ ವಿಶ್ವ ವಿದ್ಯಾಲಯದ ವಿದ್ವಾನ್ ಬ್ರಿಜ್ ಭೂಷಣ್ ಓಜಾ ಅವರಿಗೆ ಮಠದವತಿಯಿಂದ ಶ್ರೀಗಳು ಶ್ರೀ ರಾಘವೇಂದ್ರ ಅನುಗ್ರಹ ಪುರಸ್ಕಾರ ನೀಡಿ ಗೌರವಿಸಿದರು. ಇದೇ ವೇಳೆ ವಿಆರ್.ಪಂಚಮುಖಿ, ಶ್ರೀನಿವಾಸ ತಂತ್ರಿ, ಹೊಸಕೋಟೆ ರಾಘವೇಂದ್ರ ಇವರನ್ನು ಸಹ ಸನ್ಮಾನಿಸಲಾಯಿತು. ಇದೇ ವೇಳೆ ಮಠದ ವತಿಯಿಂದ ವಿವಿಧ ಪುಸ್ತಕಗಳ ಲೋಕಾರ್ಪಣೆ ಮಾಡಲಾಯಿತು.

ಗವರ್ನರ್‌ಗೆ ಝಡ್ ಭದ್ರತೆ

← ಮೊದಲಪುಟದಿಂದ

ಘಟಿಕೋತ್ಸವಕ್ಕೂ ಗೈರು: ಅಭಿಯೋಜನೆಗೆ ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರು ಹೈಕೋರ್ಟ್ ಮೆಟ್ಟಿಲೇರಿದ್ದು, ಇದರ ಅರ್ಜಿಯನ್ನು 29ಕ್ಕೆ ಹೈಕೋರ್ಟ್ ಮುಂದೂಡಿದೆ. ಆದ್ದರಿಂದ ಈ ಅರ್ಜಿ ವಿಚಾರಣೆ ಮುಗಿಯುವ ತನಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗದಂತೆ ಕೇಂದ್ರ ಗುಪ್ತಚರ ಇಲಾಖೆಯು ಮಾಹಿತಿ ನೀಡಿದೆ ಎಂದು ರಾಜಭವನದ ಮೂಲಗಳು ತಿಳಿಸಿವೆ. ಇದರ ಬೆನ್ನಲ್ಲೇ, ಮೈಸೂರು ಬ್ಯಾಂಕ್ ವೃತ್ತದ ಬಳಿಯಿರುವ ನೃಪತುಂಗ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಬುಧವಾರ ನಡೆದಿದ್ದು, ಈ ಕಾರ್ಯಕ್ರಮಕ್ಕೂ ರಾಜ್ಯಪಾಲರು ಗೈರಾಗಿದ್ದಾರೆ. ಮೂಲಗಳ ಪ್ರಕಾರ ಆಗಸ್ಟ್ 29ರವರೆಗೆ ಸಾರ್ವಜನಿಕ ಕಾರ್ಯಕ್ರಮಗಳಿಗೆ ರಾಜ್ಯಪಾಲರು ಬಹುತೇಕ ಗೈರಾಗುವ ಸಾಧ್ಯತೆಯಿದೆ.

ಇಂದು ಸಚಿವ ಸಂಪುಟ, ಶಾಸಕಾಂಗ ಪಕ್ಷದ ಸಭೆ

ಗುರುವಾರ ಬೆಳಗ್ಗೆ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದ್ದು, ಬಳಿಕ ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನು ಕರೆಯಲಾಗಿದೆ. ಈ ಎರಡೂ ಸಭೆಯಲ್ಲಿ ಮುಂದಿನ ಹೋರಾಟದ ಬಗ್ಗೆ ಸಿದ್ದರಾಮಯ್ಯ ಅವರು ಚರ್ಚಿಸಲಿದ್ದಾರೆ. ಇದರೊಂದಿಗೆ ಸಚಿವರು ಹಾಗೂ ಶಾಸಕರನ್ನು ವಿಶ್ವಾಸಕ್ಕೆ ಪಡೆಯುವ ಸಾಧ್ಯತೆಯಿದೆ. ಈ ಎರಡು ಸಭೆಯ ಬಳಿಕ ಶುಕ್ರವಾರ ದೆಹಲಿಗೆ ತೆರಳಲಿರುವ ಸಿಎಂ, ಡಿಸಿಎಂ ಇಡೀ ಪ್ರಕರಣದ ಬಗ್ಗೆ ಹೈಕಮಾಂಡ್‌ಗೆ ವಿವರಣೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಶಸ್ತ್ರಚಿಕಿತ್ಸಕರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ-576201
ದೂರವಾಣಿ ಸಂಖ್ಯೆ: (08254) 230333/234808 ಇ-ಮೇಲ್: ghkundapura@gmail.com
ದಿನಾಂಕ: 21.08.2024

ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ನಂ:ಸಾಆಕು:ಅಲ್ಪಾವಧಿ ಮರುಟೆಂಡರ್: ಔಷದ: 12: 2024-25 ದಿನಾಂಕ 21.08.2024
ಟೆಂಡರ್ ವಿವರ: ಔಷದ ಖರೀದಿ, ಟೆಂಡರ್ ಅಂದಾಜು ಮೊತ್ತ: **ರೂ. 75,00,000/-**, ಇ.ಎಂ.ಡಿ ಮೊತ್ತ **ರೂ. 1,87,500/-**, ಟೆಂಡರ್ ಆರಂಭ **ದಿನಾಂಕ: 21.08.2024,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **06.09.2024 ಸಮಯ ಅಪರಾಹ್ನ 4.30 ಗಂಟೆಗೆ,** ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: **09-09-2024 ಸಮಯ ಬೆಳಿಗ್ಗೆ 10.00 ಗಂಟೆಗೆ,** ಟೆಂಡರ್ ತೆರೆಯಲು ಸ್ಥಳ: ಶಸ್ತ್ರಚಿಕಿತ್ಸಕರ ಕಛೇರಿ. ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ.
ಹೆಚ್ಚಿನ ಮಾಹಿತಿಯನ್ನು https://www.kppp.karnataka.gov.in ವೆಬ್ ಸೈಟ್ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.
ಸಹಿ/- ಆಡಳಿತ ವೈದ್ಯಾಧಿಕಾರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ-576201, ಉಡುಪಿ ಜಿಲ್ಲೆ
ವಾಸಾಇ/ಸನಿಉ/ಕೆಎಸ್‌ಎಂಸಿಎ/271/24-25 ದಿ: 21.08.2024

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ:08192-251168 e-mail:dudc_dvg@yahoo.co.in
ಸಂ:ಜಿ.ನ.ಕೋ.ದಾ(3)/ಸಿಆರ್/ಎಲ್‌ಎಡಿ/ಇ-10/2023-24 ದಿನಾಂಕ: 19.08.2024

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ (ದಾವಣಗೆರೆ ಮಹಾನಗರ ಪಾಲಿಕೆ ಹೊರತುಪಡಿಸಿ) ಸಿ.ಸಿ.ಎಂ.ಎಸ್ ಯೋಜನೆಯಡಿ ಎಲ್‌ಇಡಿ ದೀಪ ಅಳವಡಿಸುವ ಕಾರ್ಯಕ್ರಮಕ್ಕೆ ಪ್ರಾಜೆಕ್ಟ್ ಇಂಜಿನಿಯರ್ ಮತ್ತು ಎನರ್ಜಿ ಆಡಿಟರ್ ಗಳನ್ನು ಮ್ಯಾನ್ ಪವರ್ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು ಈ ಕೆಳಗಿನ ಇಂಡೆಂಟ್ ನಂಬರ್‌ನಂತೆ ದ್ವಿ ಲಕೋಟೆ ಪದ್ಧತಿ (Two Covers Systeam) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ವಿವರ:- (1) ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ (ದಾವಣಗೆರೆ ಮಹಾನಗರ ಪಾಲಿಕೆ ಹೊರತುಪಡಿಸಿ) ಸಿ.ಸಿ.ಎಂ.ಎಸ್ ಯೋಜನೆಯಡಿ ಎಲ್‌ಇಡಿ ದೀಪ ಅಳವಡಿಸುವ ಕಾರ್ಯಕ್ರಮಕ್ಕೆ ಪ್ರಾಜೆಕ್ಟ್ ಇಂಜಿನಿಯರ್ ಮತ್ತು ಎನರ್ಜಿ ಆಡಿಟರ್ ಗಳನ್ನು ಮ್ಯಾನ್ ಪವರ್ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು. ಇಂಡೆಂಟ್ ಸಂಖ್ಯೆ. DMA/2024-25/ SE3523 (2) ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ):- 97.80 (3) ಇ.ಎಂ.ಡಿ.ಮೊತ್ತ (ರೂ.ಲಕ್ಷಗಳಲ್ಲಿ):-19,56,000/- (4) ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ:- 10.09.2024 (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 12.09.2024 (6) ಆರ್ಥಿಕ ಬಿಡ್ ತೆರೆಯುವ ದಿನಾಂಕ:- 17.09.2024 ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯುನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.
ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ.
ವಾಸಾಇ/ದಾವಣಗೆರೆ/260/ಕೆಎಸ್‌ಎಂಸಿಎ/2024-25

ಸಮಗ್ರ ಶಿಶು ಅಭಿವೃದ್ಧಿ ಯೋಜನಾ ಕಛೇರಿ,
ತುಮಕೂರು ಗ್ರಾಮಾಂತರ ಕೆ.ಎಸ್.ಎಫ್.ಸಿ ಬ್ಯಾಂಕ್ ಹಿಂಭಾಗ,
ಇಂಡಸ್ಟ್ರೀಯಲ್ ಏರಿಯಾ, ಬಿ.ಹೆಚ್.ರಸ್ತೆ, ತುಮಕೂರು.
Email ID: cdpotrural@yahoo.in ದೂರವಾಣಿ ಸಂ: 0816-2955713
ಸಂ:ಶಿಅಯೋ:ತುಗ್ರಾ:ತೂ:ಮೂಸೇ.ಇ-ಟೆಂಡರ್: 2024-25
ದಿನಾಂಕ: 19.08.2024

ಇ-ಟೆಂಡರ್ ಪ್ರಕಟಣೆ

ತುಮಕೂರು ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ 01 ಕಂಪ್ಯೂಟರ್ ಆಪರೇಟರ್ ಹಾಗೂ 01 ಮೆಸೆಂಜರ್ ಹುದ್ದೆಗೆ ಬಾಹ್ಯಮೂಲದಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ-ಪೋರ್ಟಲ್ ಮುಖಾಂತರ http://kppp.karnataka.gov.in ದ್ವಿ-ಲಕೋಟೆ ಪದ್ಧತಿಯಲ್ಲಿ ಅರ್ಹ ನೊಂದಾಯಿತ ಸಂಸ್ಥೆಗಳಿಂದ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು http://kppp.karnataka.gov.in ನಲ್ಲಿ ಅರ್ಜಿ ಫಾರಂ ಹಾಗೂ ನಿಬಂಧನೆಗಳನ್ನು ಪಡೆದು ಸಂಬಂಧಿಸಿದ ದಾಖಲಾತಿಗಳೊಂದಿಗೆ ಆರ್ಥಿಕ ಮತ್ತು ತಾಂತ್ರಿಕ ಬಿಡ್‌ಗಳನ್ನು ನಿಗಧಿತ ದಿನಾಂಕಗಳೊಳಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು.
ಟೆಂಡರ್‌ನ ವಿವರಗಳು ಈ ಕೆಳಕಂಡಂತಿವೆ: 1. ಟೆಂಡರ್‌ನ ಅಂದಾಜು ಮೊತ್ತ : ರೂ.4.80ಲಕ್ಷ. 2. 'ಇ' - ಪ್ರೊಕ್ಯೂರ್‌ಮೆಂಟ್' ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: **19-08-2024**. 3. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09-09-2024** ರಂದು ಸಮಯ: ಸಂಜೆ 3.00 ಗಂಟೆಗೆ 4. Technical Bid ಅನ್ನು ತೆರೆಯುವ ದಿನಾಂಕ: **10-09-2024** ರಂದುಸಮಯ: ಸಂಜೆ 4.00 ಗಂಟೆಗೆ 5. Financial Bid ಅನ್ನು ತೆರೆಯುವ ದಿನಾಂಕ: **12-09-2024** ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ. ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಬೇಕಾದ ವಿವರ:
ಹುದ್ದೆಗಳ ವಿವರ: ಕಂಪ್ಯೂಟರ್ ಆಪರೇಟರ್ (ಕನಿಷ್ಟ ವೇತನ ಕಾಯ್ದೆ). ಹುದ್ದೆಗಳ ಸಂಖ್ಯೆ: **01. ವಿದ್ಯಾರ್ಹತೆ:** ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ, ಕಂಪ್ಯೂಟರ್‌ನಲ್ಲಿ ಬೇಸಿಕ್ ಟ್ಯಾಲಿ, ಡಿಟಿಪಿ., ಎಕ್ಸೆಲ್ ಪ್ರಮಾಣ ಪತ್ರ ಹೊಂದಿರಬೇಕು. ಮೆಸೆಂಜರ್ (ಕನಿಷ್ಟ ವೇತನ ಕಾಯ್ದೆ) ಹುದ್ದೆಗಳ ಸಂಖ್ಯೆ: **01. ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು, ಪ್ರೊಸೆಸ್ ಸರ್ವರ್ ಅನುಭವ ಉಳ್ಳವರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿ, ತುಮಕೂರು ಗ್ರಾಮಾಂತರ
DIPR/TUM/259/KSMCA/2024-25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ
ಸಂಖ್ಯೆ:ಕಾಸಮೈ:ಡಿಎಂ1:ಅಟೆಂಪ್ರ:2024-25:658
ದಿನಾಂಕ : 19.08.2024

ಟೆಂಡರ್ ಅಧಿಸೂಚನೆ ಸಂಖ್ಯೆ : 02/2024-25, ದಿ:19-08-2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-2, ಕೆ.ಡಬ್ಲ್ಯು-3 ಮತ್ತು ಕೆ.ಡಬ್ಲ್ಯು-4ರ ಪ್ರಕಾರ "ಕೆಪಿಪಿ" - ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 4702- ಕೆರೆಗಳ ಆಧುನೀಕರಣ-ಪ್ರಧಾನ ಕಾಮಗರಿಗಳು ಯಡಿಯಲ್ಲಿ ಒಟ್ಟು-03 ಕಾಮಗಾರಿಗಳು, 4702- ಅಣೆಕಟ್ಟು ಪಿಕಪ್-ಪ್ರಧಾನ ಕಾಮಗರಿಗಳಡಿಯಲ್ಲಿ ಒಟ್ಟು-01 ಕಾಮಗಾರಿ ಹಾಗೂ 4702- ಕೆರೆಗಳ ಆಧುನೀಕರಣ-ಪ್ರಧಾನ ಕಾಮಗರಿಗಳು (ಮಳೆಹಾನಿ) ಯಡಿಯಲ್ಲಿ ಒಟ್ಟು-02 ಕಾಮಗಾರಿಗಳಿದ್ದು ಟೆಂಡರಿಗಿಟ್ಟ ಕನಿಷ್ಠ **ರೂ. 50.00 ಲಕ್ಷಗಳಿಂದ ಗರಿಷ್ಠ ರೂ. 200.00 ಲಕ್ಷಗಳಾಗಿರುತ್ತದೆ.** ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : **23.08.2024 ರವರಗೆ** ಪಡೆಯಬಹುದಾಗಿದೆ. ದಿನಾಂಕ: 26.08.2024ರ 17-30 ಗಂಟೆವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು "www.kppp.karnataka. gov.in" ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು ದಿನಾಂಕ : **27.08.2024 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡ್‌ನ್ನು ದಿನಾಂಕ : **28.08.2024 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ "www.kppp.karnataka. gov.in" ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ 'ವೇಳೆಯಲ್ಲಿ ಪಡೆಯ ಬಹುದು. ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಕೆಪಿಪಿಪಿ" - ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/-ಕಾರ್ಯಪಾಲಕ ಇಂಜಿನಿಯರ್, ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/265/2024-25

ನಗರಸಭೆ ಕಾರ್ಯಾಲಯ, ಬಾಗಲಕೋಟೆ - 587 101
ತಾಲ್ಲೂಕು: ಬಾಗಲಕೋಟೆ, ಜಿಲ್ಲೆ: ಬಾಗಲಕೋಟೆ. ದೂ. : 08354-235732,
ಸಹಾಯವಾಣಿ : 235796, ಇಮೇಲ್ : itstaff_ulb_bagalkote@yahoo.co.in
ಸಂಖ್ಯೆ : ನ.ಸ.ಬಾ./ಆ.ಶಾ./ಘ.ವ.ನಿ./ಟೆಂಡರ್/2024-25/721
ದಿನಾಂಕ : 21-08-2024

ಟೆಂಡರ್ ಪ್ರಕಟಣೆ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ನಗರ ಸಭೆಯ ಸಾಮಾನ್ಯ ಅನುದಾನದಲ್ಲಿ ಈ ಕೆಳಗಿನ ಕಾಮಗಾರಿಯನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ದಲ್ಲಿ ನೊಂದಾಯಿತ ಗುತ್ತಿಗೆದಾರರು ಹಾಗೂ ಪೂರೈಕೆದಾರರಿಂದ ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪದ್ಧತಿಯಲ್ಲಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ರಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಆಧಾರದ ಮೇಲೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು.

1) DMA/2024-25/OW/WORK_INDENT10096/Call-2, ಹೀಗೆ ಒಟ್ಟು ರೂ. 11.60 ಲಕ್ಷದ ಕಾಮಗಾರಿ ಇರುತ್ತದೆ.

ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಆನ್‌ಲೈನ್‌ದಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ ಸಲ್ಲಿಸುವುದು. **ಮತ್ತು ಇತರೆ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಸಲ್ಲಿಸುವುದು. ಹಾಗೂ ಇ.ಎಂ.ಡಿ. ಮತ್ತು ಟೆಂಡರ್ ಪ್ರೊಸೆಸಿಂಗ್ ಫೀಯನ್ನು ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಸಲ್ಲಿಸುವುದು.** ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ಆರೋಗ್ಯ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1) Last Date for Submission of Bid through KPPP Portal before : 28-08-2024 At 17.30 hours. 2) Opening of Bid is on or after : 30-08-2024 At 11.00 a.m.
ಸಹಿ/- ಪೌರಾಯುಕ್ತರು, ನಗರಸಭೆ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/193/ಮಣಿಪಾಲ್/2024-25

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001
Ph: +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ.ಸರಬ/ವಿವ/ಚೆಆ/86/2022-23 16.08.2024

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 - ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಚೆಲುವಾಂಬ ಆಸ್ಪತ್ರೆಗೆ ಅವಶ್ಯಕತೆಯಿರುವ ಗ್ರೂಪ್ 'ಡಿ' (ಸ್ವೀಪರ್, ಪ್ಲಂಬರ್ ಮತ್ತು ಸ್ಕ್ಯಾವೆಂಜರ್ ಸಿಬ್ಬಂದಿ) ವೃಂದದ ಹುದ್ದೆಗಳಿಗೆ 01 ವರ್ಷದ ಅವಧಿಗೆ ಅಥವಾ ಮುಂದಿನ ಅದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ) ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 19.08.2024 ರಿಂದ ಪಡೆಯಬಹುದಾಗಿದ್ದು, ದಿ: 02.09.2024 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
ಸಹಿ/- ನಿರ್ದೇಶಕರು ಮತ್ತು ಡೀನ್
DIPR/DDMYS-438/KSMCA-294/2024-25

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91-8431186388, ಇ-ಮೇಲ್: sabvmcri@gmail.com
ಸಂಖ್ಯೆ: SABVMCRI/E-TENDER/05/2024-25 ದಿನಾಂಕ: 21-08-2024

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹಾಗೂ ಸರ್ಕಾರಿ ಹೆಚ್.ಎಸ್.ಐ.ಎಸ್ ಘೋಷಾ ಆಸ್ಪತ್ರೆಗಳಿಗೆ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಗ್ರೂಪ್-ಡಿ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರ ಮೇಲೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ-ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.
ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ **ರೂ. 5,000/-** ಗಳ ಡಿ.ಡಿ. ಯನ್ನು **ನಿರ್ದೇಶಕರು ಹಾಗೂ ಡೀನ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್: **sabvmcri@gmail.com** ಮತ್ತು ದೂರವಾಣಿ ಸಂಖ್ಯೆ: **+91-8431186388** ನ್ನು ಸಂಪರ್ಕಿಸಬಹುದು.
1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: **21-08-2024 ರಿಂದ. 2)** ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **02-09-2024 ರಂದು ಸಂಜೆ 4.00 ಗಂಟೆವರೆಗೆ. 3)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **05-09-2024 ರಂದು ಮಧ್ಯಾಹ್ನ 3.00 ಗಂಟೆಗೆ. 4)** ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **21-10-2024 ರಂದು ಸಂಜೆ 4.00 ಗಂಟೆವರೆಗೆ. 5)** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): **23-10-2024 ರಂದು ಬೆಳಿಗ್ಗೆ 10.30 ಗಂಟೆಗೆ.** ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ನಿರ್ದೇಶಕರು ಹಾಗೂ ಡೀನ್, ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/1580/ಅಡ್ವರ್ಟೋರ್/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ-1/ಇ-ಟೆಂಡರ್ ಪ್ರಕಟಣೆ/2024-25/1092, ದಿನಾಂಕ:19.08.2024

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1 ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ- 3 & 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023-24 ನೇ ಸಾಲಿನ ಕೆಕೆಆರ್‌ಡಿಬಿ (ಯೋಜನೆ)) ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: 1) 12469, 2) 14426 & 3) 14421, ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಕಾಮಗಾರಿ ಅಂದಾಜು ಮೊತ್ತ:** ಕನಿಷ್ಠ ರೂ.75.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ-ಬಿಡ್ ಮೀಟಿಂಗ್ ದಿನಾಂಕ:** 26.08.2024 (11.30 ರ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 28.08.2024 (17.30 ಗಂಟೆವರೆಗೆ) **7)ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 02.09.2024 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 04.09.2024 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 06.09.2024 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in
ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ
ಸಹಿ/- ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/171/ಕೆ.ಎಸ್.ಎಂ.ಸಿ.&ಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.
ಸಂ: ಬೆಂಅಪ್ರಾ/ನಯೋಸ/CLU-278/1123/2024-25 ದಿನಾಂಕ: 20.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s KNS Wealthbridge LLP 3 ನಿರ್ದೇಶಕರಾದ ಶ್ರೀ ಕೆ.ಎನ್. ಸುರೇಂದ್ರ	ಬೆಂಗಳೂರು ದಕ್ಷಿಣ ಇದರ	ಕೆಂಗೇರಿ	ಯಲಚಗುಪ್ಪೆ	88/5	0-34	ವ್ಯವಸಾಯ	ವಸತಿ
2					143	3-03 (ಖರಾಬು ಹೊರತುಪಡಿಸಿ)		
3					145/6	1-13		
4					148(P)	3-11 (ಖರಾಬು ಹೊರತುಪಡಿಸಿ)		
5					149	2-33 (ಖರಾಬು ಹೊರತುಪಡಿಸಿ)		

ಷರಾ: ಅರ್ಜಿದಾರರು ಸದರಿ ಪ್ರದೇಶದ ಸುತ್ತುಮುತ್ತಲಿನ ಪ್ರದೇಶಗಳು ವಸತಿ (ವಾಸದ) ಉದ್ದೇಶಕ್ಕೆ ಭೂ ಪರಿವರ್ತನೆಯಾಗಿ ಪ್ರಾಧಿಕಾರದಿಂದ ಅನುಮೋದಿತ ವಸತಿ ಬಡಾವಣೆಗಳು ನಿರ್ಮಾಣಗಳಾಗಿರುತ್ತವೆ. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗ'ಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಟ್ವೀಟೂ-ಖಾರಾ

ಪಿ.ಸಿ. ಮೋಹನ್, ಬಿಜೆಪಿ ಸಂಸದ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಸುರಂಗ ರಸ್ತೆ ಯೋಜನೆಯ ವರದಿ ಸಿದ್ಧಪಡಿಸಲು 9 ಕೋಟಿ ರು. ವೆಚ್ಚಮಾಡುತ್ತಿದೆ. ಆದರೆ ಸಮಗ್ರ ಸಂಚಾರ ಯೋಜನೆ ಒಳಗೊಂಡಿಲ್ಲ ಎಂಬುದು ಗಮನಾರ್ಹ. ಸಾರಿಗೆ ಇಲಾಖೆ ಆದೇಶವಿದ್ದರೂ ಆಟೋರಿಕ್ಷಾ, ಟ್ಯಾಕ್ಸಿ ಪ್ರಯಾಣ ದರ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಸ್ವತಂತ್ರ ನಿರ್ವಹಣೆಯ ಕೊರತೆಯಿಂದಾಗಿ ಬೆಂಗಳೂರಿನ ಸಂಚಾರ ವ್ಯವಸ್ಥೆಗೆ ಹಾನಿಯಾಗುತ್ತಿದೆ. ಬೆಂಗಳೂರು ಮೆಟ್ರೋಪಾಲಿಟನ್ ಭೂಸಾರಿಗೆ ಪ್ರಾಧಿಕಾರ ರಚನೆ ವಿಳಂಬವಾಗುತ್ತಿರುವುದು ಸರಿಯಲ್ಲ.

ಬೆಳಗೆರೆ ವಿಲೇಜರ್, ಬೆಂಗಳೂರು

ಪಣತ್ತೂರು ಸೇರಿದಂತೆ ಬೆಂಗಳೂರು ಹೊರವಲಯದ ಕೆಲ ಪ್ರದೇಶಗಳಿಗೆ ರೈಲ್ವೆ ಸೌಲಭ್ಯ ಕಲ್ಪಿಸುವ ಯೋಜನೆಗೆ ಕೇಂದ್ರದ ಮಂಜೂರಾತಿ ಪಡೆಯುವಲ್ಲಿ ವಿಳಂಬವಾಗಿರುವುದರಿಂದ ಸಾರಿಗೆ ಸಮಸ್ಯೆಗೆ ಕೊನೆಯಿಲ್ಲ. ಈ ರೀತಿ ವಿಳಂಬ ಧೋರಣೆಯಿಂದ ಬೆಂಗಳೂರಿನ ಸಂಚಾರ ವ್ಯವಸ್ಥೆಗೆ ಸಮಗ್ರ ಯೋಜನೆ ರೂಪಿಸಲು ತಡವಾಗುತ್ತಿದೆ. ನಾವು ಗಂಟೆಗೆ ಒಂದು ಕಿ.ಮೀ. ವೇಗದಲ್ಲಿ ವಾಹನ ಚಾಲನೆ ಮಾಡಬೇಕಾಗಿದೆ.

ಸಮಾಚಾರ ಸಣ್ಣದಲ್ಲ

ಲೈಂಗಿಕ ಕಿರುಕುಳ: ದೂರು ದಾಖಲು

ಕಲಬುರಗಿ: ಕೋಲ್ಕತ್ತಾದ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ತಣ್ಣಗಾಗುವ ಮುನ್ನವೇ ಕಲಬುರಗಿಯಲ್ಲೂ ವೈದ್ಯಕೀಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಘಟನೆ ಬೆಳಕಿಗೆ ಬಂದಿದೆ. ನಗರದ ಇಎಸ್ಐಸಿ ಆಸ್ಪತ್ರೆಯಲ್ಲಿ ಎಮ್.ಬಿ.ಬಿ.ಎಸ್ ವಿದ್ಯಾರ್ಥಿನಿಯರಿಗೆ ಯುವಕ ತನ್ನ ಮರ್ಮಾಂಗ ಪ್ರದರ್ಶಿಸುವ ಮೂಲಕ ಅಸಹ್ಯವಾಗಿ ವರ್ತಿಸಿದ್ದಾನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಓಪಿಡಿ ಚೀಟಿ ತೆಗೆದುಕೊಂಡು ಬಂದ ಯುವಕ ಚಿಕಿತ್ಸೆಯ ನೆಪದಲ್ಲಿ ಎಮ್.ಬಿ.ಬಿ.ಎಸ್ ವಿದ್ಯಾರ್ಥಿನಿಯರ ಮುಂದೆಯೇ ಮರ್ಮಾಂಗ ಪ್ರದರ್ಶಿಸಿದ್ದಾನೆ . ಇದಲ್ಲದೇ, ಹಾಸ್ಟೆಲ್ ನಿಂದ ಆಸ್ಪತ್ರೆಗೆ ಬರುವ ವೇಳೆಯೂ ಸಹ ವಿದ್ಯಾರ್ಥಿನಿಯರನ್ನು ಹಿಂಬಾಲಿಸಿ ಬಂದು ಕಿರುಕುಳ ನೀಡಿದ್ದಾನೆ ಎಂದು ದೂರಲಾಗಿದೆ. ಈ ಕುರಿತು ವಿದ್ಯಾರ್ಥಿನಿಯರು ಆಸ್ಪತ್ರೆಯ ಡೀನ್ ಗೆ ಮಾಹಿತಿ ನೀಡಿದ್ದಾರೆ. ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು, ತನಿಖೆ ನಡೆದಿದೆ.

ಮುಡಾ ಪ್ರಕರಣದಲ್ಲಿ ಸಿಎಂ ತಪ್ಪಿಲ್ಲ: ರಾಯರೆಡ್ಡಿ

ಕೊಪ್ಪಳ: ಮುಡಾ ಪ್ರಕರಣದಲ್ಲಿ ಸಿಎಂ ಮತ್ತವರ ಕುಟುಂಬ ಕಾನೂನಾತ್ಮಕವಾಗಿ ತಪ್ಪು ಮಾಡಿಲ್ಲ, ನಿವೇಶನ ಹಂಚಿಕೆಯಲ್ಲಿ ಕಾನೂನು ಬಾಹಿರ ಪ್ರಕ್ರಿಯೆ ನಡೆದಿಲ್ಲ ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವ ರಾಜ ರಾಯರೆಡ್ಡಿ ಸ್ಪಷ್ಟಪಡಿಸಿದ್ದಾರೆ. ಕೊಪ್ಪಳದಲ್ಲಿ ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿ, ರಾಜಕೀಯ ಒತ್ತಡದಿಂದ ರಾಜ್ಯಪಾಲರು ಪ್ರಾಸಿಕ್ಯೂಶನ್ ಗೆ ಅನುಮತಿ ನೀಡಿದ್ದಾರೆ. ಕೇಂದ್ರ ಸರಕಾರ ಮತ್ತು ಬಿಜೆಪಿಯ ಒತ್ತಡದಿಂದ ರಾಜ್ಯಪಾಲರು ಈ ಕ್ರಮ ಕೈಗೊಂಡಿದ್ದಾರೆ. ತಪ್ಪು ಎಂದು ಗೊತ್ತಿದ್ದರೂ ರಾಜ್ಯಪಾಲರು ಹೀಗೆ ಮಾಡುತ್ತಿದ್ದಾರೆ. ಒಂದೊಮ್ಮೆ ಸಿಎಂ ಪತ್ನಿ ಬರೆದಿದ್ದಾರೆ ಎಂಬ ಪತ್ರಕ್ಕೆ ವೈಟನರ್ ಹಾಕಿದ್ದರೆ, ಈ ಬಗ್ಗೆ ತನಿಖೆ ಆಗಲಿ. ನಾನು ಮುಡಾ ಕೇಸ್ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದೇನೆ. ಒಂದು ಎಳ್ಳು ಕಾಳಷ್ಟೂ ಸಿದ್ದರಾಮಯ್ಯ ತಪ್ಪು ಮಾಡಿಲ್ಲ. ಕಳೆದ 1997 ನಲ್ಲಿ ಇದು ಒಂದೇ ಡಿನೋಟಿಫಿಕೇಷ್ ಆಗಿಲ್ಲ ಎಂದು ಸಮರ್ಥಿಸಿಕೊಂಡರು.

ಫನ್‌ತರಂಗ

– ರಘುಪತಿ ಶೃಂಗೇರಿ –

ರಾಮನಗರದ ನಂತರ ಮತ್ತೊಂದು ಕ್ಷೇತ್ರದ ಹೆಸರು ಬದಲಾಯಿಸಿದ ಸರ್ಕಾರ

ಸುದ್ದಿ

ಸಪ್ನ ಬುಕ್‌ಹೌಸ್‌ನಲ್ಲಿ ವಿಶ್ವೇಶ್ವರ ಭಟ್, ಎಸ್.ಡುಂಡಿರಾಜ, ಡಾ.ಡಿ.ಗುರುಪ್ರಸಾದ್ ಅವರ ಕೃತಿಗಳ ಬಿಡುಗಡೆ

ಸಿಂಗಾಪುರದ ಕನಸಿನ ಶೃಂಗ ಕೃತಿಯಲ್ಲಿ ಸಾಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

70 ವರ್ಷಗಳ ಹಿಂದೆ ಸಿಂಗಾಪುರದ ಮೊದಲ ಪ್ರಧಾನಿ ಕಂಡ ಕನಸನ್ನು ಬರವಣಿಗೆಯಲ್ಲಿ ತಂದು ಓದುಗರಿಗೆ ಉಣಬಡಿಸಿರುವ ಕೀರ್ತಿ ವಿಶ್ವೇಶ್ವರ ಭಟ್ ಅವರಿಗೆ ಸಲ್ಲುತ್ತದೆ. ಸಿಂಗಾಪುರದ ಕೆಲವು ಟಿಪ್ಪಣಿಗಳ ಪುಸ್ತಕದ ಪುಟ ವರ್ಣರಂಜಿತವಾಗಿದೆ ಎಂದು ಲೇಖಕ ಜಗದೀಶ್ ಶರ್ಮಾ ಸಂಪ ಅಭಿಪ್ರಾಯಪಟ್ಟರು.

ಗಾಂಧಿ ನಗರದ ಸಪ್ನ ಬುಕ್‌ಹೌಸ್ ಶಾಖೆಯಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವೇಶ್ವರ ಭಟ್ ಅವರ 'ಸಿಂಗಾಪುರದ ಕೆಲವು ಟಿಪ್ಪಣಿಗಳು', ಡಾ.ಡಿ.ವಿ. ಗುರುಪ್ರಸಾದ್ ಅವರ 'ಪಾಕಿಸ್ತಾನದ ಐಎಸ್ಐ', ಹಾಗೂ ಎಸ್.ಡುಂಡಿರಾಜ್ ಅವರ 'ಒಲವಿನ ಒಲಂಪಿಕ್ಸ್' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವೇಶ್ವರ ಭಟ್ ಅವರು ಸಿಂಗಾಪುರದ ಪ್ರತಿಯೊಂದು ಅಂಶದ ಬಗ್ಗೆ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಭಾರತದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಿಂಗಾಪುರ ಪ್ರಧಾನಿಗಳು ಒಮ್ಮೆ ಕೇಳುತ್ತಾರೆ. ಆಗ ಅವರು, ಭಾರತದಲ್ಲಿರುವ ಭ್ರಷ್ಟಾಚಾರ ನಿಂತಾಗ ಮಾತ್ರ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದ್ದರು. ಭಾರತದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಸರಕಾರಗಳೊಂದಿಗೆ ಸಾರ್ವಜನಿಕರ ವರ್ತನೆಯೂ ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು.

ಸಿಂಗಾಪುರದ ಶಿಕ್ಷೆ ಭಾರತದಲ್ಲಿ ಕೊಟ್ಟರೆ ಗತಿಯೇನು?: ಸಿಂಗಾಪುರದಲ್ಲಿ ದೊಡ್ಡ ಅಪರಾಧವೇ ಇರಲಿ, ಸಣ್ಣ ಅಪರಾಧವೇ ಇರಲಿ ಛಡಿ ಏಟಿನ ಶಿಕ್ಷೆಯಿದೆ. ನೋ ಪಾರ್ಕಿಂಗ್, ಎಲ್ಲೆಂದರಲ್ಲಿ ಉಗುಳುವುದನ್ನು ಮಾಡಿದರೆ ಅಲ್ಲಿ ಹತ್ತು ಛಡಿ ಏಟಿನ ಶಿಕ್ಷೆ ನೀಡಲಾಗುತ್ತದೆ. ಅಲ್ಲಿ ತಪ್ಪು ಮಾಡಿದವರಿಗೆ ಕೈಕಾಲುಗಳನ್ನು ಕಟ್ಟಿಹಾಕಿ ಹೊಡೆಯುತ್ತಾರೆ ಎನ್ನುವುದನ್ನು ಪುಸ್ತಕದಲ್ಲಿ ಭಟ್ಟರು ತಿಳಿಸಿದ್ದಾರೆ. ಒಂದು ವೇಳೆ ಭಾರತದಲ್ಲಿ ಇದನ್ನು ಮಾಡಿದರೆ ಎಷ್ಟು ಜನರಿಗೆ ಛಡಿ ಏಟಿನ ಶಿಕ್ಷೆ ಸಿಗುತ್ತದೆ? ಈ ರೀತಿಯ ಕಠಿಣ ಶಿಕ್ಷೆಗಳನ್ನು ಜಾರಿಗೊಳಿಸಿದರೆ, ಸಮಾಜ ಸರಿ ದಾರಿಯಲ್ಲಿರುತ್ತದೆ ಎನ್ನುವುದಕ್ಕೆ ಸಿಂಗಾಪುರವೇ ಸಾಕ್ಷಿ ಎಂದು ಅಭಿಪ್ರಾಯಪಟ್ಟರು.

ಸಿಂಗಾಪುರದಲ್ಲಿ ಚಿತ್ರ-ವಿಚಿತ್ರ ಕಾನೂನುಗಳಿವೆ. ಈ ಕಾರಣಕ್ಕಾಗಿಯೇ ಅಲ್ಲಿ ಅಭಿವೃದ್ಧಿ ಕಾಣಬಹುದಾಗಿದೆ. ಪಾರಿವಾಳಕ್ಕೆ ಕಾಳು ಹಾಕುವುದು, ಸಾರ್ವಜನಿಕವಾಗಿ ಹೇಗೆ ನಡೆದುಕೊಳ್ಳಬೇಕು. ಹೊರಗಡೆ ಹೊರಟರೆ ಹೇಗೆ ನಡೆದುಕೊಳ್ಳಬೇಕು. ಸಾರ್ವಜನಿಕರ ವರ್ತನೆ ಹೇಗಿರಬೇಕು ಎನ್ನುವುದಕ್ಕೆಲ್ಲ ಕಾನೂನಿದೆ. ಅಲ್ಲಿನ ಪ್ರಜೆಗಳ ಮನೋಭಾವದ ಹತ್ತು ಹಲವು ಅಂಶಗಳನ್ನು ಈ ಪುಸ್ತಕದಲ್ಲಿ ನೋಡಬಹುದಾಗಿದೆ ಎಂದರು.

ಪಾಕಿಸ್ತಾನದ ವ್ಯವಸ್ಥೆ ಬಗ್ಗೆ ಬೆಳಕು ಚೆಲ್ಲಿದ್ದಾರೆ: ಡಾ.ಡಿ.ವಿ. ಗುರುಪ್ರಸಾದ್ ಅವರು ಪಾಕಿಸ್ತಾನದ ಐಎಸ್ಐ, ಪ್ರಚಲಿತ ವ್ಯವಸ್ಥೆ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಚೀನಾದಲ್ಲಿ ಏನಾಗುತ್ತಿದೆ. ಅಮೆರಿಕ, ಪಾಕಿಸ್ತಾನ ಹೇಗಿದೆ ಎನ್ನುವುದಕ್ಕೆ ಈ ಪುಸ್ತಕದಲ್ಲಿ ಉತ್ತರವಿದೆ. ಇದರಲ್ಲಿ ಬಾಂಗ್ಲಾ , ಪಾಕಿಸ್ತಾನ ಹಾಗೂ ಭಾರತದ ಚರಿತ್ರೆಯಿದೆ. ಆ ದೇಶಗಳ ಬಗ್ಗೆ ಮಾತನಾಡಬೇಕು ಎಂದರೆ ಭಾರತ ಇರಬೇಕು. ಜಗತ್ತನ್ನು ಯಾರು ಆಳುತ್ತಿದ್ದಾರೆ ಎಂದರೆ ಅನಾಮಧೇಯ ಅಪರಿಚಿತರು ಆಳುತ್ತಿದ್ದಾರೆ ಎಂದು ವಿವರಿಸಿದರು.

ಒಲವಿನ ಒಲಂಪಿಕ್ಸ್ ಪುಸ್ತಕದಲ್ಲಿ ದಾಂಪತ್ಯ, ಪ್ರೀತಿ ಕುರಿತು ನಗೆಯುಕ್ಕಿಸುವ ಚುಟುಕು ಸಾಹಿತ್ಯವಿದೆ. ಅಲ್ಲಿನ ಪ್ರತಿ ಬರಹವೂ ಓದುಗರಿಗೆ ರಸದೌತಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಪ್ನ ಬುಕ್‌ಹೌಸ್ ಮುಖ್ಯಸ್ಥ ನಿತಿನ್ ಷಾ, ಪ್ರೊ. ಮಲ್ಲೇಪುರಂ ವೆಂಕಟೇಶ್, ಡಾ.ಡಿ.ವಿ. ಗುರುಪ್ರಸಾದ್, ಎಚ್.ಡುಂಡಿರಾಜ್ ಇದ್ದರು.

ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡ ಗಣ್ಯರು .

ವಿಶ್ವೇಶ್ವರ ಭಟ್ ಅವರ ನುಡಿಗಳು

- ವಿಶ್ವವಾಣಿಯದ್ದೇ ಸ್ವಂತ ಪ್ರಕಾಶನ ಸಂಸ್ಥೆಯಿದ್ದರೂ, ಸಪ್ನ ಬುಕ್‌ಹೌಸ್‌ನಿಂದ ಒಂದು ಪುಸ್ತಕವಾದರೂ ಬಿಡುಗಡೆಯಾಗಬೇಕು ಎಂದು ಇಚ್ಛಿಸುತ್ತೇನೆ. ಏಕೆಂದರೆ, ನನ್ನನ್ನು ಬೆಳೆಸಿದ್ದು ಸಪ್ನ ಬುಕ್.
- ಸಿನಿಮಾ ರಿಲೀಸ್ ಆದ ನಂತರ ನಟರು ಹೇಗೆ ಸಿನಿಮಾ ಪ್ರಚಾರ ಮಾಡುವರೋ, ಅದೇ ರೀತಿ ಲೇಖಕರು ತಮ್ಮ ಪುಸ್ತಕಗಳನ್ನು ಪ್ರಚುರಪಡಿಸಬೇಕು.
- ಓದುಗರನ್ನು ಗುರಿಯಾಗಿಸಿಕೊಂಡು ಬರೆಯಬೇಕು. ಲೇಖಕರು ತನ್ನ ತೆವಲಿಗೆ ಬರೆಯಬಾರದು.
- ಒಳ್ಳೆಯ ಪುಸ್ತಕಗಳನ್ನು ಕೊಂಡು ಓದುವ ಓದುಗರು ಈಗಲೂ ಇದ್ದಾರೆ, ಒಳ್ಳೆಯ ಪುಸ್ತಕ ಕೊಟ್ಟರೆ ಓದುಗರು ಹೆಚ್ಚಾಗಲು ಸಾಧ್ಯ.
- ಲೇಖಕರು ಕನ್ನಡ ಸಾಹಿತ್ಯ ಬೆಳೆಸಬೇಕು.
- ಓದುಗರ ಗಮನದಲ್ಲಿಟ್ಟುಕೊಂಡು ಕನ್ನಡ ಪುಸ್ತಕ ಭಂಡಾರ ಬೆಳೆಸಬೇಕು

> ಸಿಂಗಾಪುರದ 70 ವರ್ಷಗಳಿಂದೀಚೆಗೆ ನಿರ್ಮಾಣಗೊಂಡ ರೀತಿಯನ್ನು ಬರವಣಿಗೆ ಮೂಲಕ ಅಚ್ಚುಕಟ್ಟಾಗಿ ಹೊರತಂದಿದ್ದಾರೆ. ಸಿಂಗಾಪುರ ಪ್ರಧಾನಿ ಕಂಡ ಕನಸನ್ನು ಹೇಗೆ ನನಸು ಮಾಡಿದರು ಎಂಬುದನ್ನು ವಿಶ್ವೇಶ್ವರ ಭಟ್ಟರು ಕೃತಿಯಲ್ಲಿ ತಿಳಿಸಿದ್ದು, ಪ್ರಧಾನಿಯೊಂದಿಗೆ ಅಲ್ಲಿನ ಪ್ರಜೆ ಹೇಗೆ ದೇಶ ಕಟ್ಟುವಲ್ಲಿ ಕೈಜೋಡಿಸಿದ್ದಾರೆ ಎನ್ನುವುದನ್ನು ತೋರಿಸಿದ್ದಾರೆ.
>
> **ಮಲ್ಲೇಪುರಂ.ಜಿ.ವೆಂಕಟೇಶ್** ವಿಶ್ರಾಂತ ಕುಲಪತಿ

> ಒಲವಿನ ಒಲಂಪಿಕ್ಸ್‌ಗೆ ಮೊದಲು ಬೇರೆಯದೇ ಟೈಟಲ್ ಕೊಟ್ಟಿದ್ದೆ. ನಂತರ ಟೈಟಲ್ ಬದಲಾಯಿಸಿದೆ. ಭಟ್ಟರು ದೊಡ್ಡೇಗೌಡರನ್ನು ಪರಿಚಯ ಮಾಡಿದರು. ಮೊದಲು ವಿಜಯ ಕರ್ನಾಟಕಕ್ಕೆ ಬರೀ ವಕ್ರತುಂಡೋಕ್ತಿ ಬರೆಯುತ್ತಿದೆ. ನಂತರ ಭಟ್ಟರ ಸಲಹೆ ಪ್ರೋತ್ಸಾಹದಿಂದ ಅಂಕಣ ಬರೆಯಲು ಪ್ರಾರಂಭಿಸಿದೆ.
>
> **- ಎಚ್.ಡುಂಡಿರಾಜ** ಲೇಖಕರು

ಲೇಖಕರಿಗೆ ಆಶ್ರಯ ಕೊಟ್ಟಿದ್ದು ಸಪ್ನ ಬುಕ್‌ಹೌಸ್

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಲೇಖಕರಿಗೆ ಆಶ್ರಯ ಕೊಟ್ಟ ಪ್ರಕಾಶನ ಸಂಸ್ಥೆ ಸಪ್ನ ಬುಕ್‌ಹೌಸ್. ಬೆಂಗಳೂರಿನಲ್ಲಿ ಒಂಬತ್ತು ತಿಂಗಳು ನಿರುದ್ಯೋಗಿಯಾಗಿದ್ದಾಗ ತ್ರಿಭುವನ್ ಕಾಂಪ್ಲೆಕ್ಸ್‌ನ ಸಪ್ನ ಕಚೇರಿಯಲ್ಲಿ 10 ಗಂಟೆಗೆ ಬಂದರೆ ಸಂಜೆವರೆಗೂ ಅಲ್ಲೇ ಅಂಗಡಿಯಲ್ಲಿ ಇರುತ್ತಿದೆ. 1989ರಲ್ಲಿ ನಾನು ಅಟಲ್ ಬಿಹಾರಿ ವಾಜಪೇಯಿ ಬಗ್ಗೆ ಬರೆದ ಪುಸ್ತಕಕ್ಕೆ ಎರಡು ಲಕ್ಷ ರು. ಕೊಟ್ಟಿದ್ದರು. ಆಗ ವೈಎನ್‌ಕೆ '28 ಕೃತಿ ಬರೆದರೂ ಸಂಭಾವನೆ ನನಗೆ ಸಿಗಲಿಲ್ಲ' ಎಂದು ಹೇಳಿದ್ದರು. ಆ ದಿನಗಳಲ್ಲಿ ಅದು ದೊಡ್ಡ ಸಂಭಾವನೆ. ಈಗಲೂ ಅಷ್ಟು ಸಂಭಾವನೆ ಸ್ವಪ್ನದಲ್ಲಿ ಮಾತ್ರ ಸಾಧ್ಯ ಎಂದು ಸಪ್ನ ಪುಸ್ತಕ ಮಳಿಗೆಯೊಂದಿಗಿನ ಒಡನಾಟ ಸ್ಮರಿಸಿಕೊಂಡರು. ಪ್ರಕಾಶಕರಾದ ಪ್ರಕಾಶ್ ಕಂಬತ್ತಹಳ್ಳಿ, ಜಮೀಲ್, ವೀರಕಪುತ್ರ ಶ್ರೀನಿವಾಸ್ ಸೇರಿದಂತೆ ಹತ್ತಾರು ಲೇಖಕರು ಸಮಾಗಮವಾಗಿದೆ. ಗುರುಪ್ರಸಾದ್ ಪೊಲೀಸ್ ಇಲಾಖೆ ಸೇವೆಯಲ್ಲಿದ್ದಾಗ ಇಷ್ಟೊಂದು ಪುಸ್ತಕ ಬರೆದಿರಲಿಲ್ಲ. ನಿವೃತ್ತರಾದ ಬಳಿಕ ಬರೆದಿರುವುದು ವಿಶೇಷ. ಅವರು ಈಗಾಗಲೇ 50ರಿಂದ 60 ಪುಸ್ತಕ ಬರೆದಿದ್ದು, ಶೀಘ್ರದಲ್ಲಿಯೇ ಶತಕ ಬಾರಿಸಲಿದ್ದಾರೆ. ಒಬ್ಬ ಪೊಲೀಸ್ ಅಧಿಕಾರಿಯಾಗಿ ಇಷ್ಟೊಂದು ಬರೆದಿರುವುದು ಯಾರಿಲ್ಲ ಎಂದು ಹೇಳಿದರು.

ಸಮಾರಂಭಕ್ಕೆ ಸಾಕ್ಷಿಯಾದ ಪ್ರೇಕ್ಷಕರು.

> ಹೂವಿನ ಜತೆ ನಾರು ಸ್ವರ್ಗಕ್ಕೆ ಸೇರಿತು ಎಂಬಂತೆ ಇಂತಹ ದೊಡ್ಡ ಲೇಖಕರ ಕೃತಿಗಳ ನಡುವೆ ನನ್ನ ಕೃತಿಯೂ ಲೋಕಾರ್ಪಣೆಗೊಳ್ಳುತ್ತಿರುವುದು ನಿಜಕ್ಕೂ ಸ್ವರ್ಗ ಸುಖ ಸಿಕ್ಕಿದೆ. ನಾನು ಚಿಕ್ಕ ವಯಸ್ಸಿನಲ್ಲಿ ಗೂಢಚಾರಿ ಆಗಬೇಕು ಎಂಬ ಆಸೆ ಇತ್ತು. ಆದರೆ ಕೆಲಸ ಸಿಕ್ಕತೂ ತಂದೆ ತಾಯಿ ಬಿಡಲಿಲ್ಲ. ಇಸ್ರೇಲ್‌ಗೆ ಹೋಗಿ ಅಲ್ಲಿನ ಮೊಸಾದ್ ಬಗ್ಗೆ ವಿಶ್ವೇಶ್ವರ ಭಟ್ಟರು ಬರೆಯುತ್ತಾರೆ ಎಂಬ ಆತಂಕದಲ್ಲೇ ಕೇವಲ 20 ದಿನಗಳಲ್ಲಿ ಪುಸ್ತಕ ಬರೆದೆ.
>
> **-ಡಾ.ಡಿ.ಗುರುಪ್ರಸಾದ್**
> ನಿವೃತ್ತ ಪೊಲೀಸ್ ಅಧಿಕಾರಿ

ಮುಖ್ಯಮಂತ್ರಿಯಿಂದ ಆಲಮಟ್ಟಿ ಜಲಾಶಯಕ್ಕೆ ಗಂಗಾಪೂಜೆ, ಬಾಗಿನ ಅರ್ಪಣೆ

ಆಲಮಟ್ಟಿ ಎತ್ತರ ಹೆಚ್ಚಳ: ಕೇಂದ್ರಕ್ಕೆ ಸಿಎಂ ಒತ್ತಾಯ

ವಿಜಯಪುರ: ಆಲಮಟ್ಟಿ ಜಲಾಶಯ ಎತ್ತರದಿಂದ ಬಾಧಿತವಾಗುವ ಪ್ರದೇಶದಲ್ಲಿ ಪುನರ್ವಸತಿ, ಪುನರ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಸಿದ್ಧವಿದ್ದು, ಆಲಮಟ್ಟಿ ಡ್ಯಾಂ ಎತ್ತರ ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಆಲಮಟ್ಟಿ ಆಣೆಕಟ್ಟೆಗೆ ಬುಧವಾರ ಭೇಟಿನೀಡಿದ ಸಿಎಂ, ಕೃಷ್ಣೆಯ ಜಲಧಿಗೆ ಗಂಗಾಪೂಜೆ ಹಾಗೂ ಬಾಗಿನ ಅರ್ಪಣೆ ಮಾಡಿದರು. ಡಿಸಿಎಂ ಡಿ.ಕೆ ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ಆರ್.ಬಿ. ತಿಮ್ಮಾಪುರ ಸೇರಿದಂತೆ ಅನೇಕ ಗಣ್ಯರು ಮುಖ್ಯಮಂತ್ರಿ ಜೊತೆಗಿದ್ದರು.

ಡ್ಯಾಂ ಎತ್ತರಿಸಿದರೆ ಅನುಕೂಲ : ನಂತರ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯ, ಕೃಷ್ಣಾ ನ್ಯಾಯಾಧೀಕರಣ 2ನೇ ತೀರ್ಪು ಬಂದಿದ್ದು, ತೀರ್ಪಿನನ್ವಯ ಆಲಮಟ್ಟಿ ಎತ್ತರ ಹೆಚ್ಚಳದಿಂದಾಗಿ 130 ಟಿಎಂಸಿ ನೀರು ಹೆಚ್ಚುವರಿಯಾಗಿ ದೊರೆಯಲಿದೆ. 130 ಟಿಎಂಸಿ ನೀರನ್ನು ಬಳಕೆ ಮಾಡಲು ಆಲಮಟ್ಟಿ ಡ್ಯಾಂ ಎತ್ತರ ಹೆಚ್ಚಳ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದರೆ ಮಾತ್ರ ಆಲಮಟ್ಟಿ ಎತ್ತರ ಹೆಚ್ಚಿಸಲು ಸಾಧ್ಯವಾಗುತ್ತದೆ. 519.6 ರಿಂದ 524.252 ಮೀ. ಎತ್ತರಿಸಿದಾಗ ಮಾತ್ರ 130 ಟಿಎಂಸಿ ನೀರು ದೊರೆಯಲಿದೆ. ಆಲಮಟ್ಟಿ ಎತ್ತರ ಹೆಚ್ಚಳದಿಂದ 14.68 ಲಕ್ಷ ಎಕರೆ ಜಮೀನು ನೀರಾವರಿಗೊಳಪಟ್ಟು ರೈತರಿಗೆ ಅನುಕೂಲವಾಗಲಿರುವುದರಿಂದ ಶೀಘ್ರವೇ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದರು.

ಪುನರ್ವಸತಿ, ಪುನರ್ ನಿರ್ಮಾಣಕ್ಕೆ ಸಿದ್ಧ : ಪುನರ್ವಸತಿ, ಪುನರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಸಿದ್ಧವಿದ್ದು, ಈ ಹಿಂದೆ 52 ಸಾವಿರ ಕೋಟಿ ರೂ. ಪುನರ್ವಸತಿ ಹಾಗೂ ಪುನರ್ ನಿರ್ಮಾಣಕ್ಕಾಗಿ ಲೆಕ್ಕಾಚಾರ ಮಾಡಲಾಗಿತ್ತು, ಪ್ರಸ್ತುತ 82 ಸಾವಿರ ಕೋಟಿಗೂ ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ. ನೀರಾವರಿಗಾಗಿ 5 ವರ್ಷದಲ್ಲಿ 1 ಲಕ್ಷ ಕೋಟಿ ರೂ. ಖರ್ಚು ಮಾಡುವ ಉದ್ದೇಶ ಹೊಂದಿರುವುದರಿಂದ ಅಧಿಸೂಚನೆ ಹೊರಡಿಸುವುದು ಅತ್ಯವಶ್ಯಕವಾಗಿದೆ. ಹೀಗಾಗಿ ಕೇಂದ್ರ ಸರ್ಕಾರ ಆಲಮಟ್ಟಿ ಆಣೆಕಟ್ಟು ಎತ್ತರಕ್ಕೆ ಅಧಿಸೂಚನೆ ಹೊರಡಿಸುವಂತೆ ಒತ್ತಾಯಿಸಲಾಗುವುದು. ಇದರಿಂದ ಹೆಚ್ಚಿನ ರೈತರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ತುಂಗಭದ್ರಾ ಶೀಘ್ರ ಭರ್ತಿ ; ಸಿಎಂ ವಿಶ್ವಾಸ

130 ಟಿಎಂಸಿ ಸಾಮರ್ಥ್ಯ ಹೊಂದಿರುವ ತುಂಗಭದ್ರಾ ಡ್ಯಾಂ ನ 19ನೇ ಗೇಟ್ ಕಳಚಿ ಹೋಗಿದ್ದರಿಂದ ಬಾಗಿನ ಅರ್ಪಣೆ ಮಾಡಲು ಸಾಧ್ಯವಾಗಿಲ್ಲ. ಈಗಾಗಲೇ ಬೆಳೆಗಳಿಗೆ ನೀರು ಒದಗಿಸಲಾಗಿದೆ. ಕರ್ನಾಟಕ, ಆಂಧ್ರ, ತೆಲಂಗಾಣ ಮೂರು ರಾಜ್ಯಗಳ ರೈತರಿಗೆ ಅನುಕೂಲವಾಗುವ ಯೋಜನೆ ಇದಾಗಿದ್ದು, ಇನ್ನೂ 20 ಟಿಎಂಸಿ ನೀರು ಬಂದರೆ, ಶೇ.95 ಶೇಖರಣೆಯಾಗುತ್ತದೆ. ರೈತರಿಗೂ ಕೂಡ ನೀರು ಸಿಗುವುದಿಲ್ಲ ಎಂಬ ಆತಂಕವಿತ್ತು. ಆದರೆ ಕಳಚಿಹೋದ ಗೇಟ್ ದುರಸ್ತಿಗೊಳಿಸಿ ನೀರು ಪೋಲಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಆದಷ್ಟು ಶೀಘ್ರ ಭರ್ತಿಯಾಗಲಿದೆ ಎಂದು ಅವರು ಭರವಸೆ ವ್ಯಕ್ತಪಡಿಸಿದರು.

- ಸಿಎಂ, ಇತರ ಗಣ್ಯರೊಂದಿಗೆ ಲಾಲ್ ಬಹದ್ದೂರ್ ಡ್ಯಾಂಗೆ ಸಿದ್ದರಾಮಯ್ಯ ಭೇಟಿ
- ಕೃಷ್ಣಾ ಟ್ರಿಬ್ಯುನಲ್ ತೀರ್ಪಿನಂತೆ ಆಲಮಟ್ಟಿ ಎತ್ತರ ಹೆಚ್ಚಳ, ರಾಜ್ಯಕ್ಕೆ 130 ಟಿಎಂಸಿ ಹೆಚ್ಚುವರಿ ನೀರು

ರಾಜ್ಯದ ಅಣೆಕಟ್ಟುಗಳ ಸುರಕ್ಷತೆ ಪರಿಶೀಲನೆ

ತಾಂತ್ರಿಕ ಸಮಿತಿ ರಚನೆ: ಡಿಸಿಎಂ ಡಿ.ಕೆ.ಶಿವಕುಮಾರ್

ವಿಜಯಪುರ: ಅಣೆಕಟ್ಟುಗಳ ಸುರಕ್ಷತೆ ಪರಿಶೀಲನೆಗಾಗಿ ಕೇಂದ್ರ ತಂಡ ಹಾಗೂ ಮಾಜಿ ಸಿಡ್ಬ್ಲುಸಿ ಸದಸ್ಯರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚನೆ ಮಾಡಲಾಗಿದೆ. ರಾಜ್ಯದ ಎಲ್ಲಾ ಅಣೆಕಟ್ಟುಗಳನ್ನು ಪರಿಶೀಲಿ ಸಲು ಈ ತಂಡ ಈಗಾಗಲೇ ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದೆ'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಆಲಮಟ್ಟಿ ಅಣೆಕಟ್ಟೆಗೆ ಸಿಎಂ ಸಿದ್ದರಾಮಯ್ಯ ಜೊತೆಗೂಡಿ ಬಾಗಿನ ಅರ್ಪಿಸಿದ ನಂತರ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು ಸಮಿತಿಯ ವರದಿಯ ಆಧಾರದ ಮೇಲೆ ಅಣೆಕಟ್ಟುಗಳ ಸುರಕ್ಷತೆಗೆ ಸರ್ಕಾರ ಕೆಲಸ ಮಾಡಲಿದೆ. ನಾರಾಯಣಪುರ ಅಣೆಕಟ್ಟಿನ ಗೇಟುಗಳನ್ನು ಆಧುನಿಕ ತಂತ್ರಜ್ಞಾನ ಬಳಸಿ ಅಳವಡಿಸಲಾಗಿದೆ ಎಂದರು.

ಗಂಗಾ ಆರತಿ ಮಾದರಿಯಲ್ಲಿ ಕೃಷ್ಣಾ ಆರತಿ

ಗಂಗಾ ಆರತಿ ಮಾದರಿಯಲ್ಲಿ ಕೃಷ್ಣಾ ಆರತಿ ಕಾರ್ಯಕ್ರಮ ನಡೆಸಬೇಕು ಎಂದು ಸಚಿವರಾದ ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್ ಮತ್ತು ಆರ್.ಬಿ.ತಿಮ್ಮಾಪುರ ಸೇರಿದಂತೆ ಅನೇಕ ಗಣ್ಯರು ಮನವಿ ಮಾಡಿದ್ದಾರೆ. ತುಂಗಾ ಆರತಿ ಈಗಾಗಲೇ ನಡೆಯುತ್ತಿದೆ. ಕಾವೇರಿ ಆರತಿ ನಡೆಸಲು ಸಮಿತಿ ರಚನೆ ಮಾಡಲಾಗಿದೆ. ಅದೇ ರೀತಿ ಕೃಷ್ಣಾ ಆರತಿಯನ್ನು ಪರಿಗಣಿಸಲಾಗುವುದು. ಅಲ್ಲದೇ ಆಲಮಟ್ಟಿ ಅಣೆಕಟ್ಟಿನ ಉದ್ಯಾನವನ ಉತ್ತಮವಾಗಿದೆ. ಪ್ರವಾಸಿಗರ ಸಂಖ್ಯೆಯೂ ಹೆಚ್ಚಿದೆ. ಇನ್ನಷ್ಟು ಪ್ರವಾಸಿಗರನ್ನು ಆಕರ್ಷಿಸಲು ಸರಕಾರ ಹೊಸ ಯೋಜನೆ ರೂಪಿಸುವುದಾಗಿ ತಿಳಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಭೂಮಿ ಕಳೆದು ಕೊಂಡವರು ಹಾಗೂ ಭೂಸ್ವಾಧೀನ ವಿಚಾರವಾಗಿ ಈ ಭಾಗದ ಮೂವರು ಸಚಿವರು ಹಾಗೂ ಶಾಸಕರು ಪ್ರಸ್ತಾವನೆ ಮಾಡಿದ್ದಾರೆ. ಎಲ್ಲರ ಬಳಿ ಯಾವ, ಕೆಲಸಗಳನ್ನು ಮಾಡಬಹುದು ಎಂದು ಚರ್ಚಿಸಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ತಮಿಳುನಾಡಿಗೆ ಹೆಚ್ಚುವರಿ 100 ಟಿಎಂಸಿ ನೀರು

ಸಾಮಾನ್ಯ ವರ್ಷದಲ್ಲಿ 177.25 ಟಿಎಂಸಿ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಬೇಕಿತ್ತು. ನಿಗದಿತ ನೀರಿಗಿಂತ 100 ಟಿಎಂಸಿ ಹೆಚ್ಚುವರಿ ನೀರನ್ನು ಹರಿಸಲಾಗಿದೆ. ನಮ್ಮಲ್ಲಿ ಹೆಚ್ಚುವರಿ ನೀರನ್ನು ಹಿಡಿದಿಟ್ಟುಕೊಳ್ಳಲು ಆಗುವುದಿಲ್ಲ ಎಂದರು.

ಅಗತ್ಯಬಿದ್ದರೆ ಎಚ್ ಡಿಕೆ ಬಂಧನ: ಸಿದ್ದರಾಮಯ್ಯ

ಕೊಪ್ಪಳ: ಬಂಧಿಸುವ ಸನ್ನಿವೇಶ ಬಂದರೆ ಯಾವುದೇ ಮುಲಾಜಿಲ್ಲದೇ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಬಂಧಿಸುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟವಾಗಿ ಹೇಳಿದ್ದಾರೆ. ಕೊಪ್ಪಳದ ಬಸಾಪುರ ವಿಮಾನ ನಿಲ್ದಾಣ ದಲ್ಲಿ ಬುಧವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸದ್ಯಕ್ಕೆ ಕುಮಾರಸ್ವಾಮಿಯನ್ನು ಬಂಧಿಸುವ ಸನ್ನಿವೇಶ ಬಂದಿಲ್ಲ. ಅವರ ಮೇಲೆ ಈಗಾಗಲೇ ಲೋಕಾಯುಕ್ತ ಹಾಗೂ ಎಸಿಬಿ ತನಿಖೆ ಮಾಡಿವೆ. ಕುಮಾರಸ್ವಾಮಿ ವಿರುದ್ಧ ಸಾಕಷ್ಟು ದಾಖಲೆ ಸಿಕ್ಕಿವೆ. ಈ ಹಿನ್ನೆಲೆ ಲೋಕಾಯುಕ್ತ ಸಂಸ್ಥೆ ಪ್ರಾಸಿಕ್ಯೂಷನ್ ಗೆ ಪರವಾನಗಿ ನೀಡುವಂತೆ ರಾಜ್ಯಪಾಲರನ್ನು ಕೇಳಿದ್ದಾರೆ. ಈಗ ಕುಮಾರಸ್ವಾಮಿಗೆ ಭಯ ಬಂದಿದೆ. ಅದಕ್ಕೆ ಹೀಗೆಲ್ಲ ಮಾತನಾಡುತ್ತಿದ್ದಾರೆ ಎಂದರು.

ಕೇವಲ ಟಿ.ಜೆ.ಅಬ್ರಹಾಂ ಬರೆದ ಪತ್ರದ ಆಧಾರದ ಮೇಲೆ ರಾಜ್ಯಪಾಲರು ನನ್ನ ವಿರುದ್ಧ ಪ್ರಾಸಿಕ್ಯೂಷನ್ ಗೆ ಒಪ್ಪಿಗೆ ನೀಡಿದ್ದಾರೆ. ಈ ನಡೆ ತಾರತಮ್ಯದಿಂದ ಕೂಡಿದೆ ಎಂದರು.

ಪೆನ್ ಡ್ರೈವ್ ಬಿಡುಗಡೆ ಮಾಡಿದ್ದಾರೆಯೇ..?

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿ ಬಿಡುಗಡೆ ಮಾಡಿದ ಪತ್ರದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಕುಮಾರಸ್ವಾಮಿ ಯಾವತ್ತೂ ಹಿಟ್ ಆ್ಯಂಡ್ ರನ್ ಗಿರಾಕಿ. ಅವರು ಯಾವತ್ತೂ ಯಾವುದೇ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಕಾಣಿಸಿಲ್ಲ. ನನ್ನ ಜೇಬಿನಲ್ಲೇ ಪೆನ್ ಡ್ರೈವ್ ಇದೆ ಎಂದು ಹೇಳುತ್ತಿದ್ದರು. ಯಾವುದಾದರೂ ಪೆನ್‌ಡ್ರೈವ್ ಬಿಡುಗಡೆ ಮಾಡಿದ್ದಾರೆಯೇ ಎಂದು ವ್ಯಂಗ್ಯವಾಡಿದರು.

ಮೈಸೂರು ಪ್ರವೇಶಿಸಿದ ದಸರಾ ಗಜಪಡೆ

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಅಭಿಮನ್ಯು ನೇತೃತ್ವದ 9 ಆನೆಗಳ ತಂಡ ಬುಧವಾರ ಮೈಸೂರು ಪ್ರವೇಶಿಸಿದೆ. ಈ ಮೂಲಕ 2024ನೇ ಸಾಲಿನ ದಸರಾ ಮಹೋತ್ಸವಕ್ಕೆ ನಾಂದಿ ಹಾಡಲಾಗಿದೆ. ಅಂತೆಯೇ ಇದೇ 23ರಂದು ಆನೆಗಳ ತಂಡ ಅಂಬಾವಿಲಾಸ ಅರಮನೆಯ ಜಯ ಮಾರ್ತಾಂಡ ದ್ವಾರದ ಮೂಲಕ ಅರಮನೆ ಪ್ರವೇಶಿಸಲಿವೆ.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ವೀರನಹೊಸಹಳ್ಳಿ ಗ್ರಾಮದ ಬಳಿ ಅಭಿಮನ್ಯು ನೇತೃತ್ವದ ಗಜಪಡೆಗೆ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಈಶ್ವರ ಖಂಡ್ರೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಬಾಲಕಿ ಮೇಲೆ ಅತ್ಯಾಚಾರ: ಅಪ್ಪ-ಮಗನಿಗೆ ಜೈಲುಶಿಕ್ಷೆ

ಚಿತ್ತಾಪುರ: ಬಾಲಕಿ ಮೇಲಿನ ಅತ್ಯಾಚಾರ ಆರೋಪ ಸಾಬೀತಾಗಿದ್ದರಿಂದ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೋ) ನ್ಯಾಯಾಲಯವು ಅಪರಾಧಿ ಮಗನಿಗೆ 30 ವರ್ಷ ಹಾಗೂ ಆತನ ತಂದೆಗೆ 5 ವರ್ಷಗಳ -ಜೈಲುಶಿಕ್ಷೆಯನ್ನು ಮಂಗಳವಾರ ವಿಧಿಸಿದೆ.

ಚಿತ್ತಾಪುರ ತಾಲೂಕಿನ ಸತೀಶ್ ಕಾಶಿ ಸೂರ್ಯಕಾಂತ (21) ಹಾಗೂ ಸೂರ್ಯಕಾಂತ ಕಾಶಿ (45) ಶಿಕ್ಷೆಗೆ ಒಳಗಾದವರು. ಬಾಲಕಿಯನ್ನು ಪ್ರೀತಿಸುವುದಾಗಿ ಹಿಂದೆ ಬಿದ್ದಿದ್ದ ಸತೀಶ್, 2022ರ ಮೇ 5ರಂದು ಆಕೆಯನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದ. ಆಗ, ಬಾಲಕಿಯ ಕುಟುಂಬಸ್ಥರು ದೂರು ಕೊಡಲು ಮುಂದಾದರು. 18 ವರ್ಷ ತುಂಬಿದ ಬಳಿಕ ಮದುವೆ ಆಗುವುದಾಗಿ ಹೇಳಿದ ಅಪರಾಧಿ, ಬಾಲಕಿಯನ್ನು ತನ್ನ ಮನೆಯಲ್ಲಿ ಅಕ್ರಮ ಬಂಧನದಲ್ಲಿ ಇರಿಸಿಕೊಂಡಿದ್ದು , ಆಗಾಗ ಅತ್ಯಾಚಾರ ಎಸಗಿದ್ದ ಎಂದು ದೂರಲಾಗಿತ್ತು.

ಬಾಲಕಿಗೆ ಮಾನಸಿಕ, ದೈಹಿಕ ಕಿರುಕುಳ

ಸತೀಶ್ ಕುಟುಂಬಸ್ಥರು ಬಾಲಕಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ್ದರು. ಜತೆಗೆ ಸತೀಶ್ ತಂದೆ ಸೂರ್ಯಕಾಂತ ಬಾಲಕಿಗೆ ಲೈಂಗಿಕ ಕಿರುಕುಳ ಕೊಟ್ಟು, ಜೀವ ಬೆದರಿಕೆ ಕೂಡ ಹಾಕಿದ್ದ. ಈ ಸಂಬಂಧ ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿಪಿಐಗಳಾದ ಶಿವಾನಂದ ಎನ್. ಅಂಬಿಗೇರ ಹಾಗೂ ಪ್ರಕಾಶ್ ಆರ್. ಯಾತನೂರ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಾದ-ಪ್ರತಿವಾದ ಆಲಿಸಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯ (ವಿಶೇಷ ಪೋಕ್ಸೊ) ಎಫ್‌ಟಿಎಸ್‌ಸಿ-1 ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು ಸತೀಶ್‌ಗೆ ಪೋಕ್ಸೊ ಕಾಯ್ದೆಯಡಿ 30 ವರ್ಷ ಜೈಲುಶಿಕ್ಷೆ ಮತ್ತು 20 ಸಾವಿರ ದಂಡ ಹಾಗೂ ಸೂರ್ಯಕಾಂತಗೆ 5 ವರ್ಷ ಜೈಲುಶಿಕ್ಷೆ ಮತ್ತು 3 ಸಾವಿರ ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಶಾಂತವೀರ ಬಿ.ತುಪ್ಪದ ಅವರು ವಾದ ಮಂಡಿಸಿದರು. ನೊಂದ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ 7 ಲಕ್ಷ ಪರಿಹಾರ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಗದ್ದೆಹೊಸೂರು ಗ್ರಾಮದಲ್ಲಿ ದುರಂತ

ಪತ್ನಿಯ ಆತ್ಮಹತ್ಯೆ ಕಂಡು ಕೆರೆಗೆ ಹಾರಿದ ಪತಿ

ಕೆ.ಆರ್.ಪೇಟೆ: ಕೌಟುಂಬಿಕ ಕಲಹಕ್ಕೆ ಮಡದಿ ಆತ್ಮಹತ್ಯೆಗೆ ಶರಣಾಗುವುದು ಕಂಡು ಬೇಸತ್ತ ಗಂಡನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಗದ್ದೆಹೊಸೂರು ಗ್ರಾಮದಲ್ಲಿ ಜರುಗಿದೆ. ಕೌಟುಂಬಿಕ ಕಲಹಕ್ಕೆ ಬಲಿಯಾದ ದಂಪತಿಯ 10 ತಿಂಗಳ ಪುಟ್ಟ ಹೆಣ್ಣು ಮಗು ಅನಾಥವಾಗಿದೆ.

ಗದ್ದೆಹೊಸೂರಿನ ಮೋಹನ್ ಎಂಬಾತನ ಪತ್ನಿ ಸ್ವಾತಿ (22) ಸೋಮವಾರ ರಾತ್ರಿ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರಿಂದ ಮನನೊಂದ ಪತಿ ಮೋಹನ್(26) ಸಹ ಬುಧವಾರ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಘಟನೆ ವಿವರ: ಬೇವಿನಹಳ್ಳಿ ಗ್ರಾಮದ ಸ್ವಾತಿ ಎಂಬಾಕೆಯನ್ನು ಮೂರು ವರ್ಷಗಳ ಹಿಂದೆ ಗದ್ದೆಹೊಸೂರಿನ ಮೋಹನ್‌ಗೆ ಕೊಟ್ಟು ವಿವಾಹ ಮಾಡಿಕೊಡಲಾಗಿತ್ತು. ಎರಡೂ ಕುಟುಂಬಗಳು ಆರ್ಥಿಕವಾಗಿ ಸ್ಥಿತಿವಂತರಾಗಿದ್ದರು. ಆದರೆ ಕೌಟುಂಬಿಕ ಕಲಹದಿಂದ ಸ್ವಾತಿ ತನ್ನ ಕೊಠಡಿಯಲ್ಲಿ ನೇಣಿಗೆ ಶರಣಾಗಿದ್ದಾಳೆ.

ಗ್ರಾಮಸ್ಥರೊಂದಿಗೆ ಧಾವಿಸಿದ ಸ್ವಾತಿ ಪೋಷಕರು , ತಮ್ಮ ಮಗಳಿಗೆ ವರದಕ್ಷಿಣೆ ಕಿರುಕುಳ ನೀಡಿ ಕೊಲೆ ಮಾಡಿ ನೇಣುಹಾಕಿದ್ದಾರೆ ಎಂದು ಆರೋಪಿಸಿದ್ದಾರೆ. ಸ್ವಾತಿ ಕುಟುಂಬದವರು ನೂರಾರು ಜನರೊಂದಿಗೆ ಗ್ರಾಮಕ್ಕೆ ಬಂದು ಕೊಬ್ಬರಿ, ತೆಂಗಿನಕಾಯಿ ರಾಶಿಗೆ ಬೆಂಕಿ ಹಾಕಿದ್ದರು. ಇದರಿಂದ ನೊಂದು ಮೋಹನ್ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸ್ಥಳಕ್ಕೆ ಕಿಕ್ಕೇರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರೇವತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಬಿಜೆಪಿ, ಆರೆಸ್ಸೆಸ್‌ನಿಂದ ರಾಜಭವನ ದುರ್ಬಳಕೆ

ಚಿಕ್ಕಬಳ್ಳಾಪುರ: ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಆರ್.ಎಸ್.ಎಸ್ ರಾಜಭವನವನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬಿಜೆಪಿ ತನ್ನ ರಾಜಕೀಯ ಉದ್ದೇಶಗಳಿಗಾಗಿ ಇ.ಡಿ., ಐಟಿ, ಸಿಬಿಐ ಮತ್ತಿತರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಈಗ ರಾಜಭವನವನ್ನು ಕೂಡ ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಏನೂ ನಡೆಯದೇ ನಮ್ಮ ಸಿಎಂ ವಿರುದ್ಧ ತನಿಖೆಗೆ ಆದೇಶಿಸಿರುವ ರಾಜ್ಯಪಾಲರು, ಈಗ ಕೇಂದ್ರ ಸಚಿವರಾಗಿರುವ ಎಚ್.ಡಿ . ಕುಮಾರಸ್ವಾಮಿ ವಿರುದ್ಧ ಸಾಕ್ಷಿಗಳಿದ್ದರೂ ಪ್ರಾಸಿ ಕ್ಯೂಷನ್ ಗೆ ಅನುಮತಿ ಆದೇಶ ನೀಡದೆ ರಾಜಕಾರಣ ಮಾಡಿದ್ದಾರೆ ಎಂದು ಟೀಕಿಸಿದರು. ಎಚ್.ಡಿ. ಕುಮಾರಸ್ವಾಮಿ ವಿಚಾರದಲ್ಲಿ ರಾಜ್ಯಪಾಲರು ತಾರತಮ್ಯ ಧೋರಣೆ ಪ್ರದರ್ಶಿಸಿದ್ದಾರೆ ಎಂದು ಸಚಿವ ಚಲುವರಾಯ ಸ್ವಾಮಿ ಟೀಕಿಸಿದರು.

ವಿಶ್ವವಾಣಿ

ಸಂಪಾದಕೀಯ

ಕಂಪನಿ ಶಾಲೆಗಳು ಅನಿವಾರ್ಯವೇ?

ಕಾರ್ಪೊರೇಟ್ ಸಂಸ್ಥೆಗಳು ಮತ್ತು ಉದ್ಯಮಿಗಳಿಂದ ಸಿಎಸ್‌ಆರ್ ನಿಧಿಯಡಿ ಹಣ ಸಂಗ್ರಹಿಸಿ ಶಿಕ್ಷಣ ಕ್ಷೇತ್ರವನ್ನು ಸುಧಾರಿಸಲು ಸರಕಾರ ಯೋಜನೆ ಹಾಕಿಕೊಂಡಿದೆ. ಮುಂದಿನ 3 ವರ್ಷಗಳಲ್ಲಿ ರಾಜ್ಯದ 2 ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ 'ಪಬ್ಲಿಕ್ ಶಾಲೆ' ನಿರ್ಮಿಸಲು ರಾಜ್ಯಸರಕಾರ ಉದ್ದೇಶಿಸಿದೆ. ಕಾರ್ಪೊರೇಟ್ ಕಂಪನಿಗಳು, ಉದ್ಯಮಿಗಳು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ನೀಡುವ ದೇಣಿಗೆಯಿಂದಲೇ ಇವುಗಳನ್ನು ನಿರ್ವಹಿಸಲಾಗುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ವಿಪ್ರೋ, ಇನ್ಫೋಸಿಸ್‌ನಂತಹ ಪ್ರಮುಖ ಕಂಪನಿಗಳು ಸಾವಿರ ಕೋಟಿ ರೂ.ಗೂ ಹೆಚ್ಚು ಹಣ ವೆಚ್ಚ ಮಾಡಲು ಸಿದ್ಧರಿದ್ದಾರೆ ಎಂದು ಡಿಸಿಎಂ ಹೇಳಿದ್ದಾರೆ. ಕಾರ್ಪೊರೇಟ್ ಕಂಪನಿಗಳು ಶಿಕ್ಷಣ ಕ್ಷೇತ್ರಕ್ಕೆ ದೇಣಿಗೆ ನೀಡುವ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರೂ ಮನವಿ ಮಾಡಿದ್ದಾರೆ. ಮೇಲ್ನೋಟಕ್ಕೆ ಈ ಯೋಜನೆ ನವಿರಾದ ಕಲ್ಪನೆಯನ್ನು ನೀಡಿದರೂ, ಯೋಜನೆಗೆ ಜಾರಿಗೆ ಮುನ್ನ ಸರಕಾರ ಮತ್ತು ನಾಗರಿಕರು ಸಾಕಷ್ಟು ಮುಂಜಾಗರೂಕತೆ ವಹಿಸಲೇಬೇಕು. ಈಗ ಇರುವ ಶಾಲೆಗಳನ್ನು ಮೇಲ್ದರ್ಜೆಗೇರಿಸಿ, ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಹೊರಟಿದ್ದರೆ ಆಕ್ಷೇಪವಿರಲಿಲ್ಲ. ಹೊಸ ಇಂಗ್ಲಿಷ್ ಮೀಡಿಯಂ ಶಾಲೆಗಳನ್ನು ತೆರೆಯಲು ಹೊರಟಿರುವ ಸರಕಾರಕ್ಕೆ ಅಲ್ಲಿನ ಕನ್ನಡ ಶಾಲೆಗಳ ಉಳಿವಿನ ಬಗ್ಗೆ ಚಿಂತೆ ಇದ್ದಂತಿಲ್ಲ. 'ನೀವೇ ಕಟ್ಟಡ ವನ್ನು ನಿರ್ಮಾಣ ಮಾಡಿ' ಎಂದು ಕಾರ್ಪೊರೇಟ್ ಕಂಪನಿಗಳಿಗೆ ಹಸಿರು ಟವಲ್ ಹಾಸಿರುವ ಸಚಿವರು, ಈ ಶಾಲೆಗಳಿಗೆ ಅಗತ್ಯವಿರುವ ಜಾಗವನ್ನು ಯಾರು ಕೊಡುತ್ತಾರೆ? ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಯಾರು ನೇಮಿಸುತ್ತಾರೆ? ಅವರ ಮಾಸಿಕ ವೇತನವನ್ನು ಪಾವತಿಸು ವವರಾರು? ಹಾಲಿ ಶಿಕ್ಷಕರಂತೆಯೇ ಅವರಿಗೆ ಕೆಲಸ ಭದ್ರತೆ ಇರಲಿದೆಯೇ, ಭವಿಷ್ಯದ ದಿನಗಳಲ್ಲಿ ಕಂಪನಿಗಳು ಮುಚ್ಚಿದರೆ ಈ ಶಾಲೆಗಳನ್ನು ನಿರ್ವಹಿಸುವವರಾರು ? ಇತ್ಯಾದಿ ಹಲವು ಪ್ರಶ್ನೆಗಳಿಗೂ ಉತ್ತರ ನೀಡಬೇಕಾಗಿದೆ. ಸ್ಥಳೀಯರ ಸಹಭಾಗಿತ್ವದೊಂದಿಗೆ ಶಾಲೆಗಳು ನಡೆಯಬೇಕೆನ್ನುವ ಕಾರಣಕ್ಕೆ ಶಾಲಾ ಭಿವೃದ್ಧಿ ಮಂಡಳಿಗಳನ್ನು ರಚಿಸಲಾಗಿದೆ. ಕರಾವಳಿ, ಮಲೆನಾಡು ಭಾಗದ ಸರಕಾರಿ ಶಾಲೆಗಳು ಎಸ್‌ಡಿಎಂಸಿಗಳ ಸಹಕಾರದಿಂದ ಖಾಸಗಿ ಶಾಲೆಗಳಿಗಿಂತಲೂ ಚೆನ್ನಾಗಿ ನಡೆಯುತ್ತಿವೆ. ಉಳಿದೆಡೆಗಳಲ್ಲೂ ಸ್ಥಳೀಯರ ಸಹಭಾಗಿತ್ವಕ್ಕೆ ಸರಕಾರ ಒತ್ತು ನೀಡಬೇಕು. ಜನಭಾಗಿತ್ವವಿಲ್ಲದ ಯಾವ ಯೋಜನೆಯೂ ಯಶಸ್ವಿಯಾಗಲಾರದು.

ಸೊಂಪಾದಕೀಯ

ಬದಲಾದ ಅಖಾಡ

ಕಳೆದ ಒಲಿಂಪಿಕ್ಸ್‌ನಲ್ಲಿ ವಿನೇಶ್ ಫೋಗಟ್ ಕುಸ್ತಿ ವಿಭಾಗದಲ್ಲಿ ಸ್ಪರ್ಧಿಸಿ ಪದಕ ಗೆಲ್ಲದೆ ಇದ್ದರೂ, ಗೆಲ್ಲದೇ ಇದ್ದ ಕಾರಣಕ್ಕಾಗಿ ತುಂಬಾನೇ ಸುದ್ದಿಯಾಗಿದ್ದರು. ಈ ವಿಷಯದಲ್ಲಿ ನಾನಾ ಜನ, ನಾನಾ ರೀತಿ ಮಾತನ್ನಾಡಿದ್ದರು. ಆದರೆ 100 ಗ್ರಾಂ ತೂಕದ ವಿಷಯಕ್ಕಾಗಿ ಪದಕ ಕಳೆದುಕೊಂಡ ವಿನೇಶ್ '100 ಗ್ರಾಂ ಬರುತ್ತೆ, 100 ಗ್ರಾಂ ಹೋಗುತ್ತೆ' ಅನ್ನೋ ಥರ 'ನೂರು ಮಾತು ಬರುತ್ತೆ, ನೂರು ಮಾತು ಹೋಗುತ್ತೆ' ಅಂತ ಅವೆಲ್ಲಕ್ಕೂ ಸೊಪ್ಪು ಹಾಕದೆ ಸುಮ್ಮನಾಗಿದ್ದರು. ಆದರೆ ಪದಕ ಗೆಲ್ಲದೇ ಇದ್ದರೂ ಅವರಿಗೆ ಭಾರತೀಯರಿಂದ ಅನುಕಂಪದ ಆಧಾರದ ಮೇಲೆ ಸಾಕಷ್ಟು ಬೆಂಬಲ ವ್ಯಕ್ತವಾಗಿತ್ತು. ಈಗ ವಿನೇಶ್ ತಮ್ಮ ಹೊಸ ವರಸೆಯನ್ನು ತೋರಿಸುವ ಕಾಲ ಹತ್ತಿರ ಇದೆ ಎಂಬ ಸುದ್ದಿ ಹರಿದಾಡುತ್ತಿದೆ. 29 ವರ್ಷದ ವಿನೇಶ್ ಅವರು ಮುಂಬರುವ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಬಗ್ಗೆ ಸುದ್ದಿ ಓಡಾಡುತ್ತಿದೆ. ಹಾಗಾಗಿ ಕುಸ್ತಿ ಅಖಾಡದಲ್ಲಿ ಸಾಕಷ್ಟು ಸದ್ದು ಮಾಡಿದ್ದ ಅವರು ಈಗ ರಾಜಕೀಯದ ಅಖಾಡಕ್ಕೆ ಇಳಿದಿದ್ದಾರೆ ಎನ್ನಬಹುದು. ಅವರಿಗೆ ಪದಕ ಕೈ ತಪ್ಪಲು ದೇಶದ ರಾಜಕಾರಣವೇ ಕಾರಣ ಎಂಬುದು ಹಲವರ ಅನಿಸಿಕೆ. ಹಾಗಾಗಿ ಈಗ ಕುಸ್ತಿಯ ಬದಲು ನೇರವಾಗಿ ರಾಜಕಾರಣದಲ್ಲಿಯೇ ಒಂದು ಕೈ ನೋಡಿಬಿಡೋಣ ಅನ್ನೋ ಹುಮ್ಮಸ್ಸಿನಲ್ಲಿ ವಿನೇಶ್ ಅವರು ರಾಜಕೀಯಕ್ಕೆ ಇಳಿದಿರಬಹುದೇನೋ ಗೊತ್ತಿಲ್ಲ. ಕುಸ್ತಿಯಲ್ಲಿ ಆಟದ ಅಖಾಡದಲ್ಲಿ ಅಲ್ಲದಿದ್ದರೂ ಹಿಂದೆ ನಿಂತು ಅವರನ್ನು ತುಳಿಯಲು ಪ್ರಯತ್ನಿಸಿದವರು ಹಲವರು. ಹಾಗಾಗಿ ಅವರಿಗೆ ಈಗ ರಾಜಕೀಯ ರಂಗದಲ್ಲಿ ಉತ್ತರ ಕೊಡಲು ವಿನೇಶ್ ಸಿದ್ಧರಾಗಿದ್ದಾರೆ ಎಂಬ ಅನುಮಾನ ಎಲ್ಲರದು. ಒಲಿಂಪಿಕ್ಸ್‌ನಲ್ಲಿ ಬಂಗಾರದ ಪದಕ ಮಿಸ್ಸಾದರೂ ತಮ್ಮ ತವರಿಗೆ ಹಿಂತಿರುಗಿದ ದಿನೇಶ್ ಅವರಿಗೆ ಅವರ ಊರಿನವರೇ ಬಂಗಾರದ ಪದಕ ತೊಡಿಸಿ ಸಂಭ್ರಮಿಸಿದ್ದಾರೆ. ವಿಚಿತ್ರ ಏನು ಅಂದ್ರೆ, ಈ ಚುನಾವಣೆಯಲ್ಲಿ ಕೂಡ ವಿನೇಶ್ ಅವರನ್ನು ಕುಸ್ತಿ ಅನ್ನುವುದು ಹಿಂಬಾಲಿಸುತ್ತಿದೆ. ಯಾಕೆಂದರೆ ಈ ರಾಜಕೀಯ ಅಖಾಡದಲ್ಲಿ ಅವರು ಸ್ಪರ್ಧಿಸಬೇಕಾಗಿರುವುದು ಇನ್ನೊಬ್ಬ ಕುಸ್ತಿಪಟು ಆದ ಬಬಿತಾ ಅವರ ವಿರುದ್ಧ. ವಿನೇಶ್ ಅವರೇನೋ ಒಲಿಂಪಿಕ್ಸ್‌ನ ನಿರಾಸೆಯ ನಂತರ ಕುಸ್ತಿಗೆ ವಿದಾಯ ಹೇಳಿದ್ದಾರೆ. ಆದರೆ ಅವರು ಕುಸ್ತಿಯನ್ನು ಬಿಟ್ಟರೂ ಕುಸ್ತಿ ಅವರನ್ನು ಬಿಡುತ್ತಿಲ್ಲ ಅನ್ನುವುದು ಈ ಚುನಾವಣೆಯಲ್ಲಿ ಅವರ ವಿರುದ್ಧ ಸ್ಪರ್ಧಿಸುತ್ತಿರುವ ಬಬಿತಾ ಅವರಿಂದ ಪ್ರೂವ್ ಆಗುತ್ತಿದೆ.

ಸಂಪಾದಕರ ಸದ್ಯಶೋಧನೆ

ತೀರ್ಥರೂಪ ಎಂದರೇನು?

ಸಾಮಾನ್ಯವಾಗಿ ನಾವೆಲ್ಲಾ ತಂದೆಗೆ ಪತ್ರ ಬರೆಯುವಾಗ ಆರಂಭದಲ್ಲಿ ತೀರ್ಥರೂಪ ತಂದೆಯವರಿಗೆ ಶಿರಸಾಷ್ಟಾಂಗ ನಮಸ್ಕಾರಗಳು, ತೀರ್ಥರೂಪ ಸಮಾನರಾದ ತಂದೆಯವರಿಗೆ ವಂದನೆಗಳು ಅಥವಾ ತೀರ್ಥರೂಪರಿಗೆ ನಮಸ್ಕಾರಗಳು ಎಂದು ಬರೆಯುತ್ತಿದ್ದೆವು. ಯಾರೇ ತಂದೆಯವರಿಗೆ ಬರೆಯಲಿ, ತೀರ್ಥರೂಪ ಪದದಿಂದಲೇ ಆರಂಭಿಸುತ್ತಿದ್ದರು. ಬೇರೆ ಹಿರಿಯರಿಗೆ ಬರೆಯುವಾಗ 'ತೀರ್ಥರೂಪ ಸಮಾನರಾದ' ಎಂದು ಬಳಸುತ್ತಿದ್ದರು. ತೀರ್ಥರೂಪ ಎಂದು ಬಳಸುವವರಿಗೆ ಆ ಪದದ ಸರಿಯಾದ ಅರ್ಥ ಗೊತ್ತಿಲ್ಲದಿದ್ದರೂ ಬಳಸುವುದು ವಾಡಿಕೆಯಲ್ಲಿದೆ. ತೀರ್ಥರೂಪ ಪದದ ಬಗ್ಗೆ ಅನೇಕರು ವ್ಯಾಖ್ಯಾನಿಸಿದ್ದಾರೆ. ಆದರೆ ನನಗೆ ಇಷ್ಟವಾದುದು ಪಾ.ವೆಂ.ಆಚಾರ್ಯರು ಬರೆದಿದ್ದು. ತೀರ್ಥರೂಪ ಎಂದರೆ ತಂದೆಯೆಂದಾಗುತ್ತದೆ. ನಮಗೆ ಪರಿಚಯವಿರುವ ಮಟ್ಟಿಗೆ ತೀರ್ಥ ಎಂದರೆ ದೇವತಾ ಪ್ರತಿಮೆಗಳನ್ನು ಮೀಯಿಸಿದ ನೀರು ಅಥವಾ ಪವಿತ್ರವೆನಿಸಿದ ನದಿ, ಸರೋವರ ಮೊದಲಾದವು. ಹೀಗಿರುವಾಗ ತಂದೆ ತೀರ್ಥರೂಪ ಹೇಗಾದ? ತೀರ್ಥ ಶಬ್ದ ಯುಗಗಳಷ್ಟು ಹಳೆಯದು. ಮೂಲತಃ 'ತೃ-ತರಣೇ' ಅಂದರೆ ದಾಟುವುದು ಎಂಬರ್ಥದ ಧಾತುವಿನಿಂದ ಹುಟ್ಟಿದ ಶಬ್ದ ಅದು. ಅದು ದಾರಿ ದಾಟುವುದಾಗಬಹುದು, ನದಿ ಅಥವಾ ಸಮುದ್ರವನ್ನು ದಾಟುವುದಾಗಿರಬಹುದು. ಹೀಗೆ ದಾಟಲು ಅನುಕೂಲವಾದ ಸ್ಥಳ, ವಿಶೇಷವಾಗಿ ನದಿಯ ಕಡವು ತೀರ್ಥವೆನಿಸುತ್ತಿತ್ತು. ಅದರ ಅರ್ಥ ವಿಸ್ತರಿಸಿ ನದಿ, ಸರೋವರಗಳಿಗೆ ಇಳಿದು ಸ್ನಾನ ಮಾಡಬಹುದಾದ ಸ್ಥಳ, ಸೋಪಾನಗಳು, ಇವೆಲ್ಲ ತೀರ್ಥವೆನಿಸಿದವು. ಬೇರೆ ದೇಶಗಳಲ್ಲಿಯೂ ನದಿಗಳಿವೆ. ಆದರೆ ಅವೆಂದೂ 'ಪವಿತ್ರ'ವೆನಿಸಲಿಲ್ಲ. ನನಗನಿಸುವಂತೆ ನಮ್ಮ ದೇಶದಲ್ಲಿ ಆರ್ಯರ ಅಥವಾ ಅದಕ್ಕಿಂತ ಹಿಂದಿನ ಕಾಲದಿಂದಲೇ ಸ್ನಾನದ ಬಗ್ಗೆ ಒಂದು ತರಹದ ಹುಚ್ಚು (obsession) ಇದ್ದಿರಬೇಕು. ಸ್ನಾನಕ್ಕಿರುವ ಈ ಮಹತ್ವ ಧರ್ಮದಲ್ಲಿ ಸ್ಥಾನ ಪಡೆದು ಅದಕ್ಕೆ ಪಾವಿತ್ರ್ಯ ಬಂತು. ಸ್ನಾನಕ್ಕೆ ಅನುಕೂಲವಾದ ಸ್ಥಾನ ತೀರ್ಥವೆಂದ ಮೇಲೆ ತೀರ್ಥವೇ ಪವಿತ್ರವೆನಿಸಿತು. ಅದನ್ನೇ ತಿರುವುಮುರುವು ಮಾಡಿದರೆ ಪವಿತ್ರವಾದದ್ದು ತೀರ್ಥವೆನಿಸುತ್ತದೆ. (ತೀರ್ಥ=ಪವಿತ್ರ, ಪವಿತ್ರ=ತೀರ್ಥ). ಹೀಗೆ ಗುರುಗಳು, ಸ್ವಾಮಿಗಳು 'ತೀರ್ಥಪಾದರು' ಅವರ ಪಾದ ತೊಳೆದ ನೀರೂ ತೀರ್ಥವಾಯಿತು. ತಂದೆಯೇ ನಮ್ಮ ಪ್ರಥಮ ಗುರು. ಅವನು 'ತೀರ್ಥ' (ಪವಿತ್ರ, ಗೌರವಾರ್ಹ) ರೂಪ ಅಥವಾ 'ತೀರ್ಥಸ್ವರೂಪ'ವೆನಿಸುವುದು ಸ್ವಾಭಾವಿಕ. ತಂದೆಗೆ ಸಮಾನರಾಗಿರುವವರು ತೀರ್ಥರೂಪ ಸಮಾನರು. ಈ ರೀತಿ ನಮ್ಮ ದೇಶದಲ್ಲಿ ಎಲ್ಲ ಕಡೆ ಈ ಪದ ಪ್ರಚಲಿತವಾಗಿರಬೇಕಿತ್ತು. ಆದರೆ ನಾನು ಶೋಧಿಸಿದ ಮಟ್ಟಿಗೆ ಇದು ಹಿಂದಿ, ಬಂಗಾಲಿ ಮೊದಲಾದ ಉತ್ತರದ ಭಾಷೆಗಳಲ್ಲಾಗಲಿ, ಸಂಸ್ಕೃತದಲ್ಲೇ ಆಗಲಿ ತಂದೆಗೆ ಅನ್ವಯಿಸುವಂತೆ ಕಾಣಲಿಲ್ಲ. 'ಆರ್ಯ' ಭಾಷೆಗಳ ಪೈಕಿ ಮರಾಠಿಯಲ್ಲಿ ಮಾತ್ರ ತೀರ್ಥರೂಪ ಅಥವಾ ಸ್ವರೂಪ ತಂದೆಗೆ ಸಲ್ಲುತ್ತದೆ. ಶಂಕರಾಚಾರ್ಯರು ಸಂನ್ಯಾಸಿಗಳನ್ನು ಬೇರೆ ಬೇರೆ ಶಾಖೆಗಳಾಗಿ ವಿಂಗಡಿಸಿ ಒಂದೊಂದಕ್ಕೂ ಒಂದೊಂದು ಉಪಾಧಿಯನ್ನು ಕೊಟ್ಟರೆಂದು ಇತಿಹಾಸ ಹೇಳುತ್ತದೆ. ಶಕ್ತಿ, ಭಾರತಿ ಇತ್ಯಾದಿ. ಅಂಥ ಉಪಾಧಿಗಳಲ್ಲಿ ತೀರ್ಥ ಎನ್ನುವುದೂ ಒಂದು. ಉದಾ. 'ಭಾರತೀ ಕೃಷ್ಣತೀರ್ಥ', 'ಆನಂದ ತೀರ್ಥ' ಇತ್ಯಾದಿ (ವೈಷ್ಣವ ಸಂನ್ಯಾಸಿಗಳು ಅಧಿಕತರವಾಗಿ ತೀರ್ಥ ಎಂಬ ಉಪಾಧಿಯನ್ನು ಧರಿಸುತ್ತಾರೆ). ಸಂನ್ಯಾಸಿಗಳಿಗೆ 'ತೀರ್ಥ' ಎಂಬ ಉಪಾಧಿ ಬರಲು ಬೇರೊಂದು ಕಾರಣ ಹೇಳಬಹುದು. ತೀರ್ಥ ಎಂದರೆ ದಾಟುವಿಕೆ ಎಂದೆನಲ್ಲವೆ? ಸಂಸಾರ ಸಾಗರವನ್ನು ದಾಟಿದವರು ತೀರ್ಥರಲ್ಲದೆ ಮತ್ತೇನು? ಸಂನ್ಯಾಸವೆಂದರೆ ಸಂಸಾರವನ್ನು ದಾಟುವ ಉಪಾಯ ತಾನೆ? ಇದೇ ತರ್ಕದಿಂದ ಒಂದು ವಿದ್ಯೆಯಲ್ಲಿ ಪೂರ್ಣತೆ ಪಡೆದವನು ತೀರ್ಥನಾಗಬಲ್ಲ. 'ಪಾರಂಗತ' ಆಚೆ ದಾಟಿದವ = ತೀರ್ಥ, ಗುರುವಿನ ಹತ್ತಿರ ಒಟ್ಟಾಗಿ ಶಾಸ್ತ್ರಾಭ್ಯಾಸ ಮಾಡಿ ಪಾರಂಗತರಾದ ಸಹಪಾಠಿಗಳನ್ನು ಸತೀರ್ಥರು ಎನ್ನುವುದು ಈ ತರ್ಕದಿಂದ. ದಿವಂಗತ ಪತ್ರಕರ್ತ ವೈಎನ್ಕೆ ಅವರು ಗುಂಡಿನ ಕುರಿತು ಬರೆದ ತಮ್ಮ ಕವನ ಸಂಕಲನಕ್ಕೆ 'ತೀರ್ಥರೂಪ' ಎಂದು ಹೆಸರಿಟ್ಟಿದ್ದರು. ಆ 'ತೀರ್ಥ'ವೇ ಬೇರೆ.

ಬದುಕು ನಾವು ಅಂದುಕೊಂಡಿದ್ದಕ್ಕಿಂತ ಸರಳ, ಸುಲಭ

ದೇವರು ನಮ್ಮ ಯೋಜನೆಗಳನ್ನು ತಲೆಕೆಳಗು ಮಾಡುತ್ತಿರುತ್ತಾನೆ. ಆಗ ನೀವು ಬೇಸರಿಸಿಕೊಳ್ಳಬಾರದು, ಯಾಕೆಂದರೆ ಆತ ತನ್ನ ಯೋಜನೆಗಳನ್ನು ಜಾರಿಗೊಳಿಸಲು ಸ್ಕೆಚ್ ಹಾಕಿರುತ್ತಾನೆ. ಹೀಗಾಗಿ ಜೀವನದಲ್ಲಿ ಹಿನ್ನಡೆಯಾದಾಗ ಕಿಂಚಿತ್ತೂ ಅಧೀರರಾಗಬಾರದು. ನಮ್ಮ ಒಳ್ಳೆಯದಕ್ಕಾಗಿಯೇ ಇವೆಲ್ಲ ಆಗುತ್ತಿದೆಯೆಂದು ಭಾವಿಸಿ ಸಾಕು, ಎಲ್ಲವೂ ಸರಿ ಹೋಗುತ್ತದೆ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಸಂಪಾದಕನಾಗುವುದರ ಬಹುದೊಡ್ಡ ಪ್ರಯೋಜನವೆಂದರೆ, ಓದುಗರ ಜತೆ ನಿತ್ಯ ಸಾಂಗತ್ಯದಲ್ಲಿರುವುದು ಎಂಬ ಮಾತನ್ನು ನಾನು ಸದಾ ಅನುಭವಿಸುತ್ತಲೇ ಇರುತ್ತೇನೆ. ಪತ್ರಿಕೆಯಲ್ಲಿ ಒಂದು ತಪ್ಪಾದರೆ, ಉತ್ತಮ ಶೀರ್ಷಿಕೆ ನೀಡಿದರೆ, ತುಸು ಅಶ್ಲೀಲ ಎಂಬಂಥ ಫೋಟೊ ಪ್ರಕಟಿಸಿದರೆ, ಒಳ್ಳೆಯ ವರದಿ ಪ್ರಕಟಿಸಿದರೆ ನೂರಾರು ಓದುಗರು ಫೋನ್, ಎಸ್ಸೆಮ್ಮೆಸ್ ಮೂಲಕ ತಮ್ಮ ಅನಿಸಿಕೆಗಳನ್ನುಹರಿಬಿಡುತ್ತಾರೆ. ತಾವು ಕಂಡ ಅನ್ಯಾಯ, ಅನಾಚಾರಗಳನ್ನು ವರದಿ ಮಾಡಿ ಎಂದು ವಿವರಗಳನ್ನು ನೀಡುತ್ತಾರೆ.

ಇಷ್ಟೇ ಅಲ್ಲ, ಇನ್ನು ಕೆಲವರು ಅದನ್ನು ಓದಿ, ಇದನ್ನು ಓದಿ ಎಂದು ಶಿಫಾರಸು ಮಾಡುತ್ತಾರೆ. ಮತ್ತೆ ಕೆಲವರು ಆಫೀಸಿಗೆ ಬಂದು ಪುಸ್ತಕಗಳನ್ನು ಕೊಟ್ಟು, ಇದನ್ನು ಓದಿ ಇದರ ಬಗ್ಗೆ ಬರೆಯಲೇಬೇಕು ಎಂದು ತಾಕೀತು ಮಾಡಿ ಹೋಗುತ್ತಾರೆ. ಮೊನ್ನೆ ಉದಯಕುಮಾರ್ ಎಂಬುವವರು ಬಂದಿದ್ದರು. ಅವರು ಈ ಹಿಂದೆ ಹಲವು ಸಲ ಇಮೇಲ್ ಮಾಡಿದ್ದರು. ಪತ್ರಿಕೆಯ ಅಭಿಮಾನಿ. ಅವರು ಬಹಳ ಕಷ್ಟ ಪಟ್ಟು ಜೀವನದಲ್ಲಿ ನೆಲೆ ನಿಂತವರು. ಕಚೇರಿಯೊಂದರಲ್ಲಿ ಅಟೆಂಡರ್ ಆಗಿ ಕೆಲಸಕ್ಕೆ ಸೇರಿಕೊಂಡು ಈಗ ತಮ್ಮದೇ ಆದ ಕಂಪನಿಯೊಂದನ್ನು ಹುಟ್ಟುಹಾಕಿದ್ದಾರೆ. ಸ್ವಾಮಿಗಳನ್ನು ನೋಡುವಾಗ ಹಣ್ಣು ಕಾಯಿಗಳನ್ನು ಒಯ್ಯುವಂತೆ ನನ್ನನ್ನು ಭೇಟಿಯಾಗಲು ಬರುವಾಗ ಪುಸ್ತಕವನ್ನು ತಂದಿದ್ದರು. 'ಸರ್, ಸಾಧ್ಯವಾದರೆ ಈ ಪುಸ್ತಕವನ್ನು ಓದಿ, ತುಂಬಾ ಚೆನ್ನಾಗಿದೆ. ನೀವು ಓದಿದರೆ ಅದರ ಬಗ್ಗೆ ಬರೆದೇ ಬರೆಯುತ್ತೀರಿ. ಉತ್ತಮ ವಿಚಾರಗಳು ನಾಲ್ಕು ಜನರಿಗೆ ಗೊತ್ತಾಗಲಿ' ಎಂದು ಹೇಳಿಹೋದರು.

ಹೀಗೆ ಓದುಗರು ಕೊಟ್ಟು ಹೋದ ಪುಸ್ತಕಗಳ ಮೇಲೆ ನನ್ನ ಬಿಡುವಿಲ್ಲದ ಕೆಲಸಗಳ ಮಧ್ಯದಲ್ಲಿಯೂ ಒಮ್ಮೆ ಕಣ್ಣಾಡಿಸುತ್ತೇನೆ. ಆದರೆ ಈ ಪುಸ್ತಕ ಹೇಗೋ ಕಣ್ತಪ್ಪಿಸಿಕೊಂಡಿತ್ತು. ನನ್ನ ಕಣ್ಣಿಗೆ ಬಿದ್ದಿದ್ದೇ ತಡ, ಓದಲಾರಂಭಿಸಿದೆ. ಪುಸ್ತಕ ಪಕ್ಕಕ್ಕಿಟ್ಟಾಗ ಬೆಳಗಿನ ಎರಡೂವರೆ. ಪುಸ್ತಕದ ಹಿಂದಿನ ಪುಟದಲ್ಲಿದ್ದ ಒಂದು ಸಾಲು ಈ ಕೃತಿಯ ಬಗ್ಗೆ ಕುತೂಹಲವನ್ನು ಮೂಡಿಸಿತು. ಅಲ್ಲಿ ಹೀಗೆ ಬರೆದಿತ್ತು– 'Success is in the big things, happiness is in the small things, meditation is in nothing, god is in everything, That's life'.

ಆ ಪುಸ್ತಕದ ಬಗ್ಗೆ ಸಣ್ಣ ಕುತೂಹಲ ಮೂಡಿದ್ದು ಆಗಲೇ. ಬಳಿಕ ನಾನು ಮುಖಪುಟದ ಕಡೆಗೆ ಹೊರಳಿದೆ. ಮುಖಪುಟದಲ್ಲಿ ಬರೆದಿತ್ತು– 'my dear readers... Unspotted Letter, Loving You,' T.T. RangaRajan (Excited to be alive). ನಿಮ್ಮಲ್ಲಿ ಎಷ್ಟು ಜನ ಈ ಟಿ.ಟಿ. ರಂಗರಾಜನ್ ಅವರ ಹೆಸರನ್ನು ಕೇಳಿದ್ದೀರೋ ಇಲ್ಲವೋ ಗೊತ್ತಿಲ್ಲ. ಆದರೆ ಇವರು 'ನ್ಯೂ ಏಜ್ ಗುರು' ಅಂತಾನೇ ಪ್ರಸಿದ್ಧ. ಮೂಲತಃ ಇವರು ವ್ಯಕ್ತಿತ್ವ ವಿಕಸನ ಪ್ರಚಾರಕ. ಇಷ್ಟೇ ಆಗಿದ್ದರೆ ಇವರ ಬಗ್ಗೆ ಅಂಥ ಕುತೂಹಲ ತಾಳಬೇಕಿರಲಿಲ್ಲ. ಕಾರಣ ನಮ್ಮ ಮಧ್ಯೆ ಇಂಥ ಹಲವಾರು ಮಂದಿ ಇದ್ದಾರೆ. ಎಲ್ಲರೂ ಬದುಕುವ ಕಲೆ ಹೇಗೆ ಎಂದು ಕ್ಲಾಸುಗಳನ್ನು ಸಂಘಟಿಸಿ ಹಣ ಮಾಡುವವರೇ. ಆದರೆ ರಂಗರಾಜನ್ ಹಾಗಲ್ಲ. ನಮ್ಮಲ್ಲಿರುವ ನಮ್ಮನ್ನು ಹುಡುಕುವುದು ಹೇಗೆ ಎಂಬುದನ್ನು ತೋರಿಸುವ ಪ್ರಯತ್ನ ಮಾಡುತ್ತಾರೆ. The messenger should be the message ಎಂಬುದು ಅವರ ನಂಬಿಕೆ. ಇವರು ದೇವರು ದಿಂಡರು ಬಗ್ಗೆ ಕೊರೆಯುವುದಿಲ್ಲ. ಬದುಕಿನ ಸರಳ ಮಾರ್ಗಗಳನ್ನು ಹೇಳಿಕೊಡುತ್ತಾರೆ. ಇವರ ಮಾತನ್ನು ಕೇಳಿದರೆ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಇವರ ಮಾತನ್ನು ಕೇಳಿದವರು 'ವಾಯ್ಸ್ ಆಫ್ ಲವ್' ಎಂದು ಹೇಳುವುದುಂಟು. 'ಅಲ್ಮಾ ಮೇಟರ್' ಎಂಬ ಸಂಸ್ಥೆಯನ್ನು ಕಟ್ಟಿಕೊಂಡು ಅವರು ಮಾಡುತ್ತಿರುವ ಕೆಲಸ ಅಸಾಮಾನ್ಯವಾದುದು. ಈ ಪುಸ್ತಕದ ಮೂಲಕ ರಂಗರಾಜನ್ ಅವರು ಮತ್ತಷ್ಟು ಆಪ್ತರಾದರು.

ಈ ಪುಸ್ತಕವನ್ನು ಓದಿದ ಬಳಿಕ ನಾನು ಈ ಮನುಷ್ಯನ ಬಗ್ಗೆ ಎಲ್ಲೋ ಓದಿದ್ದೇನಲ್ಲಾ ಎಂದೆನಿಸಿತು. ಕೆಲ ದಿನಗಳ ಹಿಂದೆ ಸ್ನೇಹಿತರೊಬ್ಬರು ಒಂದು ಪುಟ್ಟ ಬರಹವನ್ನು ಇಮೇಲ್ ಮಾಡಿದ್ದರು. ಅದರ ಶೀರ್ಷಿಕೆ (What the world calls failure, I call it a turning point) ಆಕರ್ಷಕವಾಗಿತ್ತು. ಆ ಲೇಖನದಲ್ಲಿ ರಂಗರಾಜನ್ ಬರೆದುಕೊಂಡಿದ್ದರು– ನನಗೆ ಹದಿನೇಳು ವರ್ಷಗಳಾಗಿದ್ದಾಗ ಎಂಜಿನಿಯರ್ ಆಗಬೇಕೆಂದು ಕನಸು ಕಂಡಿದ್ದೆ. ಆದರೆ ಪಿಯುಸಿ ಎರಡನೇ ವರ್ಷದಲ್ಲಿ ನನಗೆ ಉತ್ತಮ ಅಂಕ ಬರಲಿಲ್ಲ. ಹೀಗಾಗಿ ಗಣಿತದಲ್ಲಿ ಡಿಗ್ರಿ ಓದಬೇಕಾಯಿತು. ಬರೀ ಇದನ್ನು ಮಾತ್ರ ಓದಿದರೆ ಒಳ್ಳೆಯ ಕೆಲಸ ಸಿಗಲಿಕ್ಕಿಲ್ಲವೆಂದು ಕಂಪ್ಯೂಟರ್ ಸೈನ್ಸ್ ಪ್ರೋಗ್ರಾಮಿಂಗ್ ಓದಿದೆ. ನಾನು ಓದಿದ್ದೇ ಒಂದು, ಆಗಲು ಹೊರಟಿದ್ದೇ ಇನ್ನೊಂದು. ಆದರೇನಂತೆ ನನಗೆ ಇಪ್ಪತ್ತೈದು ವರ್ಷ ಆಗುವ ಹೊತ್ತಿಗೆ ನನ್ನದೇ ಒಂದು ಸಾಫ್ಟ್‌ವೇರ್ ಕಂಪನಿ ಆರಂಭಿಸಿದ್ದೆ. ಐವತ್ತಕ್ಕೂ ಹೆಚ್ಚಿನ ಎಂಜಿನಿಯರ್‌ಗಳು ನನ್ನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಹದಿನೇಳನೇ ವಯಸ್ಸಿನಲ್ಲಿ ನಾನು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗದಿದ್ದಾಗ, ಇಡೀ ಜಗತ್ತು ನಾನೊಬ್ಬ ನಿಷ್ಪ್ರಯೋಜಕ ಎಂಬ ಹಣೆಪಟ್ಟಿ ಕಟ್ಟಿತ್ತು. ಆದರೆ ನಾನು ಹೊಸ ಸಾಧನೆಗೆ ಭಾಷ್ಯ ಬರೆದಿದ್ದೆ. 'ಅಲ್ಮಾ ಮೇಟರ್' ಎಂಬ ಸಂಸ್ಥೆಯನ್ನು ನನಗೆ ಮೂವತ್ತು ವರ್ಷವಾದಾಗ ಸ್ಥಾಪಿಸಿದೆ. ಆದಾದ ಐದು ವರ್ಷಗಳಲ್ಲಿ 'ಫ್ರೋಜನ್ ಥಾಟ್ಸ್' ಎಂಬ ಮ್ಯಾಗಜಿನ್ ಆರಂಭಿಸಿದೆ.

ಯುಗೊಸ್ಲಾವಿಯಾದ ಅಗ್ನೇಸ್ ಗೋಂಕ್ಸಾ ಬೊಜೊಕ್ಸಿಯೋ ಕೊಲ್ಕತ್ತಾದ ಕಾನ್ವೆಂಟ್ ಸ್ಕೂಲ್‌ನಲ್ಲಿ ಪಾಠ ಮಾಡಲು ಬಂದಳು. ಅವಳು ಬರುವಾಗ ಒಂದು ದಿನ ಇಡೀ ಜಗತ್ತೇ ಹೆಮ್ಮೆಯಿಂದ, ಅಭಿಮಾನದಿಂದ ಕರೆಯುವ ಮದರ್ ತೆರೇಸಾ ಆಗುತ್ತೇನೆಂದು ಅಂದುಕೊಂಡಿರಲಿಲ್ಲ. ಅವಳಿಗೆ ನೊಬೆಲ್ ಪ್ರಶಸ್ತಿಯೂ ಬಂತು. ಜವಾಹರಲಾಲ್ ನೆಹರು ಆರಂಭಿಸಿದ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಗೆ ಬಾಲಕೃಷ್ಣ ಮೆನನ್ ಎಂಬುವವರು ಉಪಸಂಪಾದಕರಾಗಿ ಸೇರಿದರು. ಒಂದು ದಿನ ಈ ಮೆನನ್ ಅವರು ಸ್ವಾಮಿ ಶಿವಾನಂದರನ್ನು ಭೇಟಿಯಾದರು. ಈ ಭೇಟಿ ಸ್ನೇಹಕ್ಕೆ ತಿರುಗಿತು. ಸ್ವಾಮಿ ಶಿವಾನಂದರ ಪ್ರಭಾವದಿಂದ ಬಾಲಕೃಷ್ಣ ಮೆನನ್ ಕೊನೆಗೆ ಸ್ವಾಮಿ ಚಿನ್ಮಯಾನಂದರಾದರು. ದೇಶ ವಿದೇಶಗಳಲ್ಲಿ ಕೋಟ್ಯಂತರ ಭಕ್ತರು ಮತ್ತು ಅನುಯಾಯಿಗಳನ್ನು ಪಡೆದರು. ಚಿನ್ಮಯ ಮಿಷನ್ ಮೂಲಕ ಅಮೋಘವಾದ ಸಮಾಜಸೇವೆಗೆ ತಮ್ಮನ್ನು ತೊಡಗಿಸಿಕೊಂಡರು.

ಕ್ರಿಸ್ಟೋಫರ್ ಕೊಲಂಬಸ್ ಮನೆಯಿಂದ ಹೊರಟಾಗ ಮುಂದೊಂದು ದಿನ ತಾನು ಅಮೆರಿಕವನ್ನು ಶೋಧಿಸುತ್ತೇನೆ ಅಂತ ಅಂದುಕೊಂಡಿದ್ದನಾ? ಏನೋ ಆಗಬೇಕೆಂದು ಅಂದುಕೊಂಡು ಇನ್ನೇನೋ ಆದ ಅಸಂಖ್ಯ ಜನರ ಸಾಧನೆ ನಮ್ಮ ಕಣ್ಣ ಮುಂದಿದೆ. ಮೊದಲು ವಿಫಲರಾಗಿ, ಲೋಕನಿಂತರಾಗಿ, ಜನರ ನಿಂದನೆಗೆ ಪಾತ್ರರಾಗಿ, ಕೇಳಬಾರದ ಬೈಗುಳಗಳನ್ನು ಕೇಳಿಸಿಕೊಂಡು ಕೊನೆಗೆ ಯಾರೂ ಮಾಡದ ಅಸಾಮಾನ್ಯ ಸಾಧನೆ ಮಾಡಿದವರು ಇದ್ದಾರೆ. ಹೀಗಾಗಿ ನೀವು ಅಂದುಕೊಂಡಿದ್ದನ್ನು ಸಾಧಿಸಲು ಆಗದಿದ್ದರೆ, ಜೀವನದ ಆರಂಭದಲ್ಲಿ ನಿಮ್ಮ ಮನೋರಥ ಈಡೇರದಿದ್ದರೆ ಅದಕ್ಕಾಗಿ ಎದೆಗುಂದಬೇಕಿಲ್ಲ. ಜೀವನದಲ್ಲಿ ಜಿಗುಪ್ಸೆ ಹೊಂದಿ ಖಿನ್ನರಾಗಬೇಕಿಲ್ಲ. ಅದು ನಿಮ್ಮ ಜೀವನದ ಹೊಸ ಮಾರ್ಗ ಶೋಧನೆಗೆ ಕಾರಣವಾಗಬಹುದು. ನಿಮ್ಮನ್ನು ಹೊಸ ಸಾಹಸಕ್ಕೆ ಅಣಿಗೊಳಿಸಬಹುದು. ಯಾರಿಗೆ ಗೊತ್ತು, ನೀವು ಬಸ್ಸು ತಪ್ಪಿಸಿಕೊಂಡಿದ್ದೇ ಒಳ್ಳೆಯದಾಯಿತು ಅಂತ ನಿಮಗೆ ಅನಿಸಬಹುದು, ನೀವು ಹತ್ತಬೇಕಿದ್ದ ಬಸ್ಸು ಕಮರಿಗೆ ಬಿತ್ತು ಎಂಬ ಸುದ್ದಿ ಕೇಳಿದಾಗ!

ನಾನು ಆಗಾಗ ಹೇಳುತ್ತಿರುತ್ತೇನೆ, ಅದೇನೆಂದರೆ, ದೇವರು ನಮ್ಮ ಯೋಜನೆಗಳನ್ನು ತಲೆಕೆಳಗು ಮಾಡುತ್ತಿರುತ್ತಾನೆ. ಆಗ ನೀವು ಬೇಸರಿಸಿಕೊಳ್ಳಬಾರದು, ಯಾಕೆಂದರೆ ಆತ ತನ್ನ ಯೋಜನೆಗಳನ್ನು ಜಾರಿಗೊಳಿಸಲು ಸ್ಕೆಚ್ ಹಾಕಿರುತ್ತಾನೆ. ಹೀಗಾಗಿ ಜೀವನದಲ್ಲಿ ಹಿನ್ನಡೆಯಾದಾಗ ಕಿಂಚಿತ್ತೂ ಅಧೀರರಾಗಬಾರದು. ನಮ್ಮ ಒಳ್ಳೆಯದಕ್ಕಾಗಿಯೇ ಇವೆಲ್ಲ ಆಗುತ್ತಿದೆಯೆಂದು ಭಾವಿಸಿ ಸಾಕು, ಎಲ್ಲವೂ ಸರಿ ಹೋಗುತ್ತದೆ.

ನಾನು ಭೇಟಿ ಮಾಡಿದ ಅನೇಕರು ಕಂಡುಕೊಂಡ ಸಂಗತಿಯೇನೆಂದರೆ, ಆ ಪೈಕಿ ಬಹುತೇಕ ಮಂದಿಗೆ ತಮ್ಮ ಮಹತ್ವವೇ ಗೊತ್ತಿಲ್ಲದಿರುವುದು. ತಮ್ಮನ್ನು ಲಘುವಾಗಿ ಪರಿಗಣಿಸುವುದು, ತಾನೇ ಗ್ರೇಟ್ ಎಂದು ಭಾವಿಸಬೇಕು ಅಂತ ನಾನು ಹೇಳುತ್ತಿಲ್ಲ. ಅದು ಅಹಂಕಾರ. ಆದರೆ, ಈ ಕೆಲಸ ನನ್ನಿಂದ ಸಾಧ್ಯ ಎಂಬ ಆತ್ಮವಿಶ್ವಾಸ ಸಹ ಅವರಲ್ಲಿ ಇರುವುದಿಲ್ಲ. ಮನಸ್ಸು ಮಾಡಿದರೆ ಅವರಿಗೆ ಆಗದ ಕೆಲಸವೇನೂ ಅಲ್ಲ. ಆದರೂ ಮನಸ್ಸು ಮಾಡುವುದಿಲ್ಲ.

'ಜೀವನದಲ್ಲಿ ಸರ್ವಸ್ವವೂ ನಾಶವಾಗಿ ಹೋಯಿತು. ನನಗೆ ಆತ್ಮಹತ್ಯೆಯೊಂದೇ ಪರಿಹಾರ' ಎಂದು ಕೆಲವರು ಹೇಳುತ್ತಾ ಬರುತ್ತಾರೆ. 'ಸರ್ವಸ್ವವೂ ನಾಶವಾದ ಬಳಿಕ, ಹೊಸದಾಗಿ ಜೀವನ ರೂಪಿಸಿಕೊಳ್ಳುವ ಸಾಮರ್ಥ್ಯ ನನ್ನಲ್ಲಿದೆ' ಎಂದು ಯಾರೂ ಯೋಚಿಸುವುದಿಲ್ಲ. ಹಾಗೆ ನೋಡಿದರೆ ಮನುಷ್ಯನ ಅಸ್ತಿತ್ವವಿರುವುದೇ ಕಟ್ಟುವುದರಲ್ಲಿ. ನೀವು ಒಂದು ನೂರು ಕೋಟಿ ರುಪಾಯಿ ಗಳಿಸಿದ್ದೀರೆನ್ನಿ. ಅವೆಲ್ಲವೂ ನಿಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ಕಳೆದುಹೋಯಿತೆನ್ನಿ, ಅಲ್ಲಿಗೆ ಎಲ್ಲವೂ ಮುಗಿದುಹೋಯಿತು ಎಂದಲ್ಲ. ಅಲ್ಲಿಂದ ಆರಂಭಿಸುತ್ತೀರಲ್ಲ, ಪುನಃ ಕಟ್ಟಬೇಕೆಂಬ ಸಂಕಲ್ಪ ತೊಡುತ್ತೀರಲ್ಲ, ಅದು ಬಹಳ ಮುಖ್ಯ. ಈ ಗುಣವೇ ನಮ್ಮನ್ನು ಪೊರೆಯುವುದು. ಇದರಿಂದ ಕಳೆದುಕೊಂಡ ನೂರು ಕೋಟಿ ರುಪಾಯಿಯನ್ನು ಪುನಃ ಸಂಪಾದಿಸಬಹುದು. ನನ್ನ ಮುಂದೆಯೇ ಇದನ್ನು ಮಾಡಿ ತೋರಿಸಿದ ಹಲವಾರು ಮಂದಿಯಿದ್ದಾರೆ. ನಿಮಗೆ ನೂರು ಕೋಟಿ ರುಪಾಯಿ ಗಳಿಸುವುದು ಗೊತ್ತಿದೆ ಅಂದ್ರೆ, ಅದನ್ನು ಕಳೆದುಕೊಂಡ ಬಳಿಕ, ಪುನಃ ಸಂಪಾದಿಸುವುದು ಸಹ ಗೊತ್ತಿದೆ ಎಂದೇ ಅರ್ಥ. ಆದರೆ ಮೊದಲು ಗಳಿಸಿದ್ದು ವಾಮಮಾರ್ಗದಿಂದಾದರೆ ಮಾತ್ರ ಪುನಃ ಗಳಿಸುವುದಕ್ಕೆ ನೀವು ಹಿಂದೇಟು ಹಾಕುತ್ತೀರಿ.

Your most precious resource is yourself. Are you using yourself enough? ಈ ಪ್ರಶ್ನೆಯನ್ನು ಎಲ್ಲರಿಗೂ ಕೇಳುತ್ತೇನೆ. ಎಲ್ಲರೂ ಈ ಪ್ರಶ್ನೆಗೆ ವಿಚಿತ್ರವಾಗಿಯೇ ಉತ್ತರಿಸುತ್ತಾರೆ. ಯಾರೂ ಆತ್ಮವಿಶ್ವಾಸಭರಿತವಾಗಿ 'ಹೂಂ' ಅನ್ನುವುದಿಲ್ಲ. ಅವರ ಬಗ್ಗೆ ಅವರಿಗೆ ಅಂಥ ವಿಶ್ವಾಸ!

ನಿಮಗೆ ಗೊತ್ತಿರಬಹುದು. 1960ರಲ್ಲಿ ಜಪಾನ್ ಸ್ಟೀಲನ್ನು ಉತ್ಪಾದಿಸಲು ನಿರ್ಧರಿಸಿತು. ಸ್ಟೀಲ್ ತಯಾರಿಕೆಗೆ ಮೂಲಭೂತವಾಗಿ ಎರಡು ಕಚ್ಚಾ ವಸ್ತುಗಳು ಬೇಕು– ಕಬ್ಬಿಣದ ಅದಿರು ಹಾಗೂ ಕಲ್ಲಿದ್ದಲು. ವಿಚಿತ್ರವೆಂದರೆ ಈ ಎರಡೂ ವಸ್ತುಗಳು ಜಪಾನ್‌ನಲ್ಲಿ ಸಿಗುವುದಿಲ್ಲ. ಆದರೆ ಜಪಾನ್‌ಗೆ ಇವೆರಡನ್ನು ಎಲ್ಲಿಂದ ಪಡೆಯಬಹುದೆಂಬುದು ಗೊತ್ತಿತ್ತು. ಹೀಗಾಗಿ ಇವೆರಡು ಅತಿ ಕಡಿಮೆ ಬೆಲೆಗೆ ಧಾರಾಳವಾಗಿ ಸಿಗುವ ದೇಶದಿಂದ ಆಮದು ಮಾಡಿಕೊಳ್ಳಲು ನಿರ್ಧರಿಸಿತು. ಇದಕ್ಕೆ ಪ್ರತಿಯಾಗಿ ಬೇಡಿಕೆ ಅಧಿಕವಾಗಿರುವ ದೇಶಗಳಿಗೆ ಸ್ಟೀಲ್ ಅನ್ನು ರಫ್ತು ಮಾಡಲು ತೀರ್ಮಾನಿಸಿತು. ಎಂಥ ಸೋಜಿಗವೆನ್ನಿ! ಒಂದು ಕಾಲಕ್ಕೆ ಜಪಾನ್ ಜಗತ್ತಿನಲ್ಲಿ ಸ್ಟೀಲ್ ಉತ್ಪಾದಿಸುವ ದೇಶಗಳ ಪೈಕಿ ಅಗ್ರಗಣ್ಯ ಸ್ಥಾನ ಪಡೆಯಿತು. ಅದಾಗಿ ಬರೀ ಎರಡು ದಶಕಗಳ ಅವಧಿಯಲ್ಲಿ ಕೈಗಾರಿಕಾ ಕ್ರಾಂತಿಗೆ ಸಾಕ್ಷಿಯಾಯಿತು.

ಕಬ್ಬಿಣದ ಅದಿರೂ ಇರಲಿಲ್ಲ, ಕಲ್ಲಿದ್ದಲೂ ಇರಲಿಲ್ಲ, ಇದ್ದಿದ್ದು ಬುದ್ಧಿಮತ್ತೆ ಹಾಗೂ ಈಡೇರಿಸುವ ಛಲ. ಏನೂ ಇಲ್ಲದಿದ್ದರೂ ಜಪಾನ್ ಅಗಾಧವಾದುದನ್ನು ಸಾಧಿಸಿತು. ಒಂದು ಸಂಗತಿ ಗೊತ್ತಿರಲಿ, ನೀವು ಯಾವುದೋ ಹೊಸ ದಂಧೆ, ವ್ಯಾಪಾರ ಮಾಡಲು ನಿಂತಿದ್ದೀರಿ ಎನ್ನಿ. ತಕ್ಷಣ ನಿಮಗೆ ಎದುರಾಗುವ ಪ್ರಶ್ನೆಯೆಂದರೆ, ಅಷ್ಟೊಂದು ಹಣವನ್ನು ಎಲ್ಲಿಂದ ತರೋದು? ಆದರೆ ಆಗ ನಿಮಗೆ ನಿಮ್ಮ ನೆನಪೇ ಆಗುವುದಿಲ್ಲ. ನಿಮ್ಮಂಥ ದೊಡ್ಡ ಸಂಪನ್ಮೂಲ ಮತ್ತೊಂದಿಲ್ಲ ಎಂಬ ಸರಳ ಸಂಗತಿ ನಿಮ್ಮ ಅರಿವಿಗೆ ಬರುವುದಿಲ್ಲ. ಬರೀ ಹಣದ ಬಗ್ಗೆ ಅಷ್ಟೇ ಯೋಚಿಸುತ್ತಿರುತ್ತೀರಿ.

ಜೀವನದಲ್ಲಿ ಯಾರೂ ನಿಮ್ಮನ್ನು ಇಷ್ಟಪಡದಿರಬಹುದು. ಬೇರೆ ಎಲ್ಲರೂ ನಿಮ್ಮನ್ನು ನಂಬದಿರಬಹುದು. ಆದರೆ ನೀವು ನಂಬಲೇಬೇಕು. ಜಗತ್ತು ನಿಮ್ಮನ್ನು ಹೇಗೆಯೇ ನೋಡಲಿ ಅದರಿಂದ ನಿಮಗೆ ಹೆಚ್ಚು ಫರಕ್ಕು ಬೀಳುವುದಿಲ್ಲ. ಆದರೆ, ಅದೇ ನೀವು ನಿಮ್ಮನ್ನು ಹೇಗೆ ನೋಡುತ್ತೀರಿ ಎಂಬ ಸಂಗತಿ ನಿಮ್ಮಲ್ಲಿ ಅಗಾಧ ಪರಿಣಾಮ ಹಾಗೂ ವ್ಯತ್ಯಾಸವನ್ನುಂಟುಮಾಡುತ್ತದೆ.

ನನ್ನ ತಾಯಿ ನನ್ನನ್ನು ಭೌತವಿಜ್ಞಾನಿಯನ್ನಾಗಿ ಮಾಡಿದಳು ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಐಸಿಡೋರ್ ಐಸಾಕ್ ರಬಿ ಹೇಳಿದ್ದಾನೆ. 'ಎಲ್ಲ ತಾಯಂದಿರೂ ಅವರವರ ಮಕ್ಕಳಿಗೆ ಇಂದು ಹೊಸತೇನನ್ನು ಕಲಿತೆ? ಎಂದು ಕೇಳುತ್ತಿದ್ದರು. ಆದರೆ ನನ್ನ ತಾಯಿ ಪ್ರತಿದಿನ 'ಇಂದು ಸ್ಕೂಲಿನಲ್ಲಿ ಒಳ್ಳೆಯ ಪ್ರಶ್ನೆ ಕೇಳಿದೆ ತಾನೆ?' ಎಂದು ಕೇಳುತ್ತಿದ್ದಳು. ಅದೇ ನನ್ನನ್ನು ವಿಜ್ಞಾನಿಯನ್ನಾಗಿ ಮಾಡಿತು' ಎಂದು ರಬಿ ಹೇಳಿದ್ದಾನೆ. ಎಂಥ ವ್ಯತ್ಯಾಸ!

ಬದುಕು ನಾವು ಅಂದುಕೊಂಡಷ್ಟು ಕಷ್ಟವಾಗಿಲ್ಲ. ಆದರೆ ನಾವು ಅಂದುಕೊಂಡಿದ್ದಕ್ಕಿಂತ ಸರಳವಾಗಿದೆ, ಸುಲಭವಾಗಿದೆ.

ಇದನ್ನು ನೀವೇ ಅನುಭವಿಸಬೇಕು.

ಮಹಾರಾಷ್ಟ್ರದಲ್ಲಿ ಅಕ್ಕ ತಂಗಿಯರು ಬಿಜೆಪಿಯ ಕೈ ಹಿಡಿಯುತ್ತಾರಾ?

ಇಡೀ ದೇಶದ ಕಣ್ಣು ಈಗ ಜಮ್ಮು ಮತ್ತು ಕಾಶ್ಮೀರದ ಚುನಾವಣೆ ಮೇಲೆ ನೆಟ್ಟಿದೆ. ಆದರೆ, ವಿರೋಧ ಪಕ್ಷಗಳ ಕಣ್ಣು ಮಹಾರಾಷ್ಟ್ರದ ಮೇಲೆ ನೆಟ್ಟಿದೆ. ಏಕೆಂದರೆ, ಮಹಾರಾಷ್ಟ್ರದಲ್ಲಿ ಚುನಾವಣೆ ಮುಂದಕ್ಕೆ ಹೋಗಿದೆ. ಕಾಶ್ಮೀರದಲ್ಲಿ ಮತಪೆಟ್ಟಿಗೆಯಿಂದ ಶಾಂತಿಯ ಸಂದೇಶ ಬರುತ್ತದೆಯೇ? ಮಹಾರಾಷ್ಟ್ರದಲ್ಲಿ ಹೆಣ್ಮಕ್ಕಳು ಯಾರಿಗೆ ಜೈ ಎನ್ನುತ್ತಾರೆ?

ಸಂಗತ

ಡಾ.ವಿಜಯ್ ದರಡಾ
vveditoped@gmail.com

ನಾನೊಬ್ಬನೇ ಅಲ್ಲ, ಎಲ್ಲರೂ, ಎಲ್ಲಾ ರಾಜಕೀಯ ಪಕ್ಷಗಳೂ ದೀಪಾವಳಿಗಿಂತ ಮೊದಲೇ ಮಹಾರಾಷ್ಟ್ರ ಮತ್ತು ಹರಿಯಾಣದ ವಿಧಾನಸಭೆಗಳಿಗೆ ಚುನಾವಣೆ ನಡೆಯುತ್ತದೆ ಎಂಬ ನಿರೀಕ್ಷೆಯಲ್ಲಿದ್ದುದುಂಟು. ಇವೆರಡೂ ರಾಜ್ಯಗಳಿಗೆ ಒಟ್ಟಿಗೇ ಚುನಾವಣೆ ನಡೆಯಲಿದೆ ಎಂಬ ಲೆಕ್ಕಾಚಾರ ಏಕೆ ನಮ್ಮ ಮನದಲ್ಲಿತ್ತು ಅಂದರೆ, ಈ ಹಿಂದೆ 2009, 2014 ಮತ್ತು 2019ರಲ್ಲಿ ಈ ಎರಡೂ ರಾಜ್ಯಗಳಿಗೆ ಒಟ್ಟಿಗೇ ವಿಧಾನಸಭೆ ಚುನಾವಣೆ ನಡೆದಿತ್ತು. ಆದರೆ ಈ ಬಾರಿ ಚುನಾವಣಾ ಆಯೋಗ ಬೇರೆಯದೇ ರೀತಿಯಲ್ಲಿ ಯೋಚನೆ ಮಾಡಿದೆ. ವ್ಯಾಪಕ ಮಳೆಯಿಂದಾಗಿ ಮಹಾರಾಷ್ಟ್ರದ ಕೆಲ ಭಾಗಗಳಲ್ಲಿ ಪ್ರವಾಹ ಬಂದಿದೆ. ಹೀಗಾಗಿ ಜನರು ಸಂಕಷ್ಟದಲ್ಲಿದ್ದಾರೆ. ಸರಕಾರ ನೆರೆ ಪರಿಹಾರ ಕಾರ್ಯಾಚರಣೆಗಳ ಬಗ್ಗೆ ಗಮನ ಹರಿಸಬೇಕು. ಹೀಗಾಗಿ ಚುನಾವಣೆ ನಡೆಸುವುದಕ್ಕೆ ಇದು ಸರಿಯಾದ ಸಮಯವಲ್ಲ ಎಂದು ಆಯೋಗಕ್ಕೆ ಅನ್ನಿಸಿರಬೇಕು. ಹಾಗೆಯೇ, ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಅಂದರೆ ಅದೊಂದು ರೀತಿಯಲ್ಲಿ ಸಂಭ್ರಮಾಚರಣೆ ಕೂಡ ಹೌದು. ಆದರೆ, ನೆರೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನರು ಸಂಭ್ರಮಾಚರಣೆ ನಡೆಸುವುದು ಎಲ್ಲಿ ಬಂತು! ಹೀಗಾಗಿ ಮಹಾರಾಷ್ಟ್ರವನ್ನು ಬಿಟ್ಟು, ಹರಿಯಾಣದ ವಿಧಾನಸಭೆ ಚುನಾವಣೆಯ ಜತೆಗೆ ಜಮ್ಮು ಮತ್ತು ಕಾಶ್ಮೀರದಲ್ಲೂ ಚುನಾವಣೆ ನಡೆಸಲು ಚುನಾವಣಾ ಆಯೋಗವು ನಿರ್ಧರಿಸಿದೆ. ಮಹಾರಾಷ್ಟ್ರದಲ್ಲಿ ಚುನಾವಣೆ ತುಸು ಮುಂದಕ್ಕೆ ಹೋಗಿದೆ.

ಮಹಾರಾಷ್ಟ್ರದ ವಿಧಾನಸಭೆಯ ಅವಧಿ ನವೆಂಬರ್ 26ಕ್ಕೆ ಮುಗಿಯಲಿದೆ. ಹರಿಯಾಣದ ವಿಧಾನಸಭೆ ಅವಧಿ ನವೆಂಬರ್ 3ಕ್ಕೆ ಮುಗಿಯಲಿದೆ. ಬೇರೆ ಬೇರೆ ರಾಜ್ಯಗಳಲ್ಲಿ ವಿಧಾನಸಭೆಯ ಅವಧಿ ಮುಕ್ತಾಯದ ಅಂತರ ಕಡಿಮೆ ಇದ್ದಾಗ ಸಾಮಾನ್ಯವಾಗಿ ಚುನಾವಣಾ ಆಯೋಗವು ಆ ರಾಜ್ಯಗಳ ಚುನಾವಣೆಯನ್ನು ಒಟ್ಟಿಗೇ ನಡೆಸುವುದು ವಾಡಿಕೆ. ಹೀಗಾಗಿಯೇ ಕಳೆದ ಮೂರೂ ಚುನಾವಣೆಗಳನ್ನು ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಒಟ್ಟಿಗೇ ನಡೆಸಲಾಗಿತ್ತು. ಆದರೆ, ಈ ಬಾರಿ ಚುನಾವಣಾ ಆಯೋಗ ಬೇರೆ ರೀತಿಯಲ್ಲಿ ಯೋಚಿಸಿದ್ದರಿಂದ ವಿರೋಧ ಪಕ್ಷಗಳು ಪ್ರಶ್ನೆಗಳನ್ನು ಎತ್ತುವುದು ಸಹಜವೇ ಆಗಿದೆ. ಹಿಂದೆ ಸತತ ಮೂರು ಬಾರಿ ಒಟ್ಟಿಗೇ ವಿಧಾನಸಭೆ ಚುನಾವಣೆಗಳನ್ನು ನಡೆಸಿ, ಈ ಬಾರಿ ಏಕೆ ಬೇರೆ ಬೇರೆ ಸಲ ನಡೆಸಲು ಮುಂದಾಗಿದ್ದೀರಿ ಎಂದು ಅವು ಕೇಳುತ್ತವೆ. ಹರಿಯಾಣದಲ್ಲೂ ಹಬ್ಬಗಳಿವೆಯಲ್ಲ! ಆದರೂ ಅಲ್ಲಿ ಈಗಲೇ ಚುನಾವಣೆ ನಡೆಸಲಾಗುತ್ತಿದೆ. ಇದಕ್ಕೆ ಚುನಾವಣಾ ಆಯೋಗವು ಭದ್ರತಾ ಕಾರಣಗಳನ್ನು ನೀಡುತ್ತದೆ. ಕೆಲ ರಾಜ್ಯಗಳಲ್ಲಿ ಒಟ್ಟಿಗೇ ಚುನಾವಣೆ ನಡೆಸಿದರೆ, ಆ ರಾಜ್ಯಗಳಲ್ಲಿನ ಕಾನೂನು-ಸುವ್ಯವಸ್ಥೆ ಸೂಕ್ಷ್ಮವಾಗಿದ್ದರೆ, ಆಗ ಅಲ್ಲಿಗೆ ಹೆಚ್ಚು ಭದ್ರತಾ ಪಡೆಗಳನ್ನು ನಿಯೋಜಿಸಬೇಕಾಗುತ್ತದೆ. ಆದರೆ ಅಷ್ಟು ಭದ್ರತಾ ಸಿಬ್ಬಂದಿ ಲಭ್ಯವಿರುವುದಿಲ್ಲ. ಹೀಗಾಗಿ ಬೇರೆ ಬೇರೆ ಸಮಯದಲ್ಲಿ, ಹೆಚ್ಚು ಹಂತಗಳಲ್ಲಿ ಚುನಾವಣೆ ನಡೆಸುವುದು ಉಂಟು. ಆದರೆ, ಪ್ರಧಾನ ಮಂತ್ರಿಗಳು ಇಡೀ ದೇಶದಲ್ಲಿ ಒಂದೇ ಸಲ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ನಡೆಸುವ ಬಗ್ಗೆ ಮಾತನಾಡುತ್ತಾರೆ. ಮೂರ್ನಾಲ್ಕು ರಾಜ್ಯಗಳಿಗೆ ಒಟ್ಟಿಗೇ ಚುನಾವಣೆ ನಡೆಸುವುದಕ್ಕೇ ನಿಮ್ಮಲ್ಲಿ ಭದ್ರತಾ ಸಿಬ್ಬಂದಿಯ ಕೊರತೆ ಇದೆ ಅಂತಾದರೆ ಇಡೀ ದೇಶದ ಎಲ್ಲಾ ರಾಜ್ಯಗಳಿಗೂ ಒಟ್ಟಿಗೇ ಚುನಾವಣೆ ನಡೆಸಲು ಹೇಗೆ ಸಾಧ್ಯ ಎಂದು ಖಂಡಿತ ವಿರೋಧ ಪಕ್ಷಗಳು ಕೇಳುತ್ತವೆ.

ವಿರೋಧ ಪಕ್ಷಗಳು ಅತಿಹೆಚ್ಚು ಹಾಗೂ ಅತ್ಯಂತ ಗಂಭೀರವಾಗಿ ಆರೋಪ ಮಾಡುತ್ತಿರುವುದು 'ಲಡ್ಕಿ ಬೆಹೆನ್' ಯೋಜನೆಯ ಬಗ್ಗೆ. ಈ ಯೋಜನೆಯ ಬಗ್ಗೆ ಇಡೀ ದೇಶಕ್ಕೆ ತಿಳಿದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಹಿಂದಿ ರಾಜ್ಯಗಳಲ್ಲಿ ಇದು ಜನಪ್ರಿಯ ಯೋಜನೆ. ಮೂಲತಃ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಕನಸಿನ ಕೂಸಿದು. ಮಧ್ಯಪ್ರದೇಶದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಮುಖ್ಯಮಂತ್ರಿಯಾಗಿದ್ದಾಗ ಮಹಿಳೆಯರಿಗೆ ಸರಕಾರದಿಂದ ಹಣ ನೀಡುವ ಈ ಯೋಜನೆಯನ್ನು ಜಾರಿಗೆ ತಂದರು. ನಂತರ ನಡೆದ ಮಧ್ಯಪ್ರದೇಶದ ವಿಧಾನಸಭೆ ಚುನಾವಣೆಯಲ್ಲಿ ಹಾಗೂ ಲೋಕಸಭೆ ಚುನಾವಣೆಯಲ್ಲಿ ಇದು ಬಿಜೆಪಿಯ ನೆರವಿಗೂ ಬಂದಿತು. ಲೋಕಸಭೆ ಚುನಾವಣೆಯಲ್ಲಿ ದೇಶಾದ್ಯಂತ ಬಿಜೆಪಿಗೆ ಹಿನ್ನಡೆ ಉಂಟಾದರೂ ಮಧ್ಯಪ್ರದೇಶದಲ್ಲಿ ಅದರ ಪ್ರದರ್ಶನ ಉತ್ತಮವಾಗಿಯೇ ಇದ್ದುದಕ್ಕೆ ಈ ಯೋಜನೆ ಕೂಡ ಕಾರಣ. ಮಹಾರಾಷ್ಟ್ರದಲ್ಲಿ ಮಹಾ ವಿಕಾಸ ಅಘಾಡಿ ಮೈತ್ರಿಕೂಟದ ಪಕ್ಷಗಳು ಒಟ್ಟು 48 ಲೋಕಸಭೆ ಸ್ಥಾನಗಳ ಪೈಕಿ 31 ಸ್ಥಾನ ಗೆದ್ದಿದ್ದವು. ಎನ್‌ಡಿಎ ಗೆದ್ದಿದ್ದು 17 ಸ್ಥಾನ ಮಾತ್ರ. ಚುನಾವಣೆಯ ಫಲಿತಾಂಶವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬಂದಿದ್ದು ಏನೆಂದರೆ, ಮಹಾರಾಷ್ಟ್ರದ 288 ವಿಧಾನಸಭೆ ಕ್ಷೇತ್ರಗಳ ಪೈಕಿ 154 ಕ್ಷೇತ್ರಗಳಲ್ಲಿ ಮಹಾ ವಿಕಾಸ ಅಘಾಡಿ ಮೈತ್ರಿಕೂಟ ಮುನ್ನಡೆ ಸಾಧಿಸಿತ್ತು. ಅದರಲ್ಲಿ ಕಾಂಗ್ರೆಸ್ ಪಕ್ಷ 63 ಕ್ಷೇತ್ರಗಳಲ್ಲಿ, ಶಿವಸೇನೆ (ಉದ್ಧವ್ ಠಾಕ್ರೆ ಬಣ) 57 ಕ್ಷೇತ್ರಗಳಲ್ಲಿ ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) 34 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದವು. ಎನ್‌ಡಿಎ ಮುನ್ನಡೆ ಸಾಧಿಸಿದ 127 ಕ್ಷೇತ್ರಗಳ ಪೈಕಿ ಬಿಜೆಪಿ 80 ಕ್ಷೇತ್ರಗಳಲ್ಲಿ, ಶಿವಸೇನೆ (ಶಿಂಧೆ ಬಣ) 37 ಕ್ಷೇತ್ರಗಳಲ್ಲಿ ಹಾಗೂ ಅಜಿತ್ ಪವಾರ್ ಅವರ ಎನ್‌ಸಿಪಿ ಕೇವಲ 6 ಕ್ಷೇತ್ರಗಳಲ್ಲಿ ಮುಂದಿದ್ದವು. ಇದು ಲೋಕಸಭೆ ಚುನಾವಣೆಯಲ್ಲಿ ಕಂಡ ಸನ್ನಿವೇಶ. ಆದರೆ, ಲೋಕಸಭೆ ಚುನಾವಣೆಗೂ ವಿಧಾನಸಭೆ ಚುನಾವಣೆಗೂ ವ್ಯತ್ಯಾಸವಿದೆ ಎಂಬುದು ನನಗೆ ಗೊತ್ತು. ಈ ಎರಡೂ ಚುನಾವಣೆಗಳಲ್ಲಿ ಮತದಾರರು ಬೇರೆ ಬೇರೆ ರೀತಿ ಯೋಚಿಸುತ್ತಾರೆ. ಇದಕ್ಕೆ ಈ ಹಿಂದಿನ ಸಾಕಷ್ಟು ನಿದರ್ಶನಗಳನ್ನು ನೀಡಬಹುದು.

ಕುತೂಹಲಕರ ಸಂಗತಿಯೆಂದರೆ, ಕಳೆದ ಮೂರು ಬಾರಿ ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ವಿಧಾನಸಭೆ ಚುನಾವಣೆಗಳನ್ನು ಲೋಕಸಭೆ ಚುನಾವಣೆಯ ಬಳಿಕ ಒಟ್ಟಿಗೇ ನಡೆಸಿದಾಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ರಾಜಕೀಯ ಪಕ್ಷಕ್ಕೇ ಹೆಚ್ಚು ಅನುಕೂಲವಾಗಿತ್ತು. ಈ ಬಾರಿ ಎನ್‌ಡಿಎ ಅಧಿಕಾರದಲ್ಲಿದೆ. ಆದರೆ, ಬಿಜೆಪಿಗೆ ಸ್ವಂತ ಬಹುಮತ ಇಲ್ಲ. ಹೀಗಾಗಿ ಮಹಾರಾಷ್ಟ್ರದಲ್ಲಿ ವಿಧಾನಸಭೆ ಚುನಾವಣೆ ನಡೆದಾಗ ಏನಾಗುತ್ತದೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಹೀಗಾಗಿಯೇ, ಬಿಜೆಪಿಯವರು ಮಹಾರಾಷ್ಟ್ರದಲ್ಲೂ ಮಧ್ಯಪ್ರದೇಶದ ಲಡ್ಕಿ ಬೆಹೆನ್ ಯೋಜನೆಯನ್ನು ಜಾರಿಗೊಳಿಸಿ ಮತದಾರರ ಮನ ಗೆಲ್ಲಲು ಯತ್ನಿಸುತ್ತಿದ್ದಾರೆ. ಈ ಯೋಜನೆಯ ಲಾಭ ಪಡೆಯಲು ಅರ್ಜಿ ಸಲ್ಲಿಸುವುದಕ್ಕೆ ಆಗಸ್ಟ್ 31 ಕೊನೆಯ ದಿನ. ಆದರೆ, ಆಗಸ್ಟ್ 14ರ ವೇಳೆಗೇ 1.62 ಕೋಟಿ ಮಹಿಳೆಯರು ಯೋಜನೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಅವರ ಪೈಕಿ 80 ಲಕ್ಷ ಮಹಿಳೆಯರಿಗೆ 3000 ರುಪಾಯಿ ಹಣ ಪಾವತಿಯೂ ಆಗಿದೆ. ಪ್ರತಿ ತಿಂಗಳು 1,500 ರುಪಾಯಿ ನೀಡುವ ಈ ಯೋಜನೆಯ ಎರಡು ತಿಂಗಳ ಹಣವನ್ನು ಅವರ ಖಾತೆಗೆ ಒಟ್ಟಿಗೇ ಮುಂಗಡವಾಗಿ ಜಮೆ ಮಾಡಲಾಗಿದೆ. ವಿರೋಧ ಪಕ್ಷಗಳಿಗೆ ಅನುಮಾನ ಬಂದಿರುವುದೇ ಇಲ್ಲಿ. ಲಡ್ಕಿ ಬೆಹೆನ್ ಯೋಜನೆಯ ಹಣವನ್ನು ಹೆಚ್ಚು ಮಹಿಳೆಯರ ಖಾತೆಗೆ ವರ್ಗಾವಣೆ ಮಾಡಿದರೆ ಚುನಾವಣೆಯಲ್ಲಿ ಹೆಚ್ಚು ಅನುಕೂಲವಾಗುತ್ತದೆ ಎಂಬ ಕಾರಣದಿಂದಲೇ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಸರಕಾರ ಚುನಾವಣಾ ಆಯೋಗದ ಮೇಲೆ ಪ್ರಭಾವ ಬೀರಿ ಮಹಾರಾಷ್ಟ್ರದ ಚುನಾವಣೆಯನ್ನು ತಡ ಮಾಡುತ್ತಿದೆ ಎಂದು ಅವು ಆರೋಪಿಸುತ್ತಿವೆ. ಆದರೆ, ನಿಜವಾದ ಪ್ರಶ್ನೆಯಿರುವುದು ಏನೆಂದರೆ, ಈ ಯೋಜನೆಯಿಂದ ಮಹಾರಾಷ್ಟ್ರದಲ್ಲಿ ಎನ್‌ಡಿಎಗೆ ಅನುಕೂಲವಾಗುತ್ತದೆಯೇ ಎಂಬುದು. ಏಕೆಂದರೆ, ಕೇಂದ್ರ ಸರಕಾರವು ಲೋಕಸಭೆ ಚುನಾವಣೆಗೂ ಮೊದಲು ಇಡೀ ದೇಶದ 80 ಕೋಟಿ ಜನರಿಗೆ ಉಚಿತವಾಗಿ ಪಡಿತರ ನೀಡುತ್ತಿತ್ತು. ಅದರಿಂದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಯಿತೇ? ಹೀಗಾಗಿ ಮಹಾರಾಷ್ಟ್ರದಲ್ಲಿ ಲಡ್ಕಿ ಬೆಹೆನ್ ಯೋಜನೆಯಿಂದ ಲಾಭವಾಗುತ್ತದೆಯೋ ಇಲ್ಲವೋ ಎಂಬುದು ಸದ್ಯಕ್ಕೆ ಪ್ರಶ್ನಾರ್ಹವೇ ಆಗಿದೆ.

ಈಗ ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆ ಚುನಾವಣೆಗೆ ಬರೋಣ. 2014ರಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭೆ ಚುನಾವಣೆ ನಡೆದಿಲ್ಲ. ಕಳೆದ ಬಾರಿ ಚುನಾವಣೆ ನಡೆದಾಗ ಜಮ್ಮು ಮತ್ತು ಕಾಶ್ಮೀರ ರಾಜ್ಯವಾಗಿತ್ತು. ಅದರಲ್ಲಿ 87 ವಿಧಾನಸಭೆ ಕ್ಷೇತ್ರಗಳಿದ್ದವು. ಅವುಗಳ ಪೈಕಿ 4 ಕ್ಷೇತ್ರ ಲಡಾಕ್‌ನಲ್ಲಿತ್ತು. ಲಡಾಕ್ ಕೂಡ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಭಾಗವಾಗಿತ್ತು. ಆದರೆ, ಈಗ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಕ್ ಎರಡೂ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿವೆ. ಇವುಗಳ ನಡುವೆ ವ್ಯತ್ಯಾಸಗಳಿವೆ. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ 90 ವಿಧಾನಸಭಾ ಕ್ಷೇತ್ರಗಳನ್ನು ರಚಿಸಲಾಗಿದೆ. ಕ್ಷೇತ್ರ ಪುನರ್ ವಿಂಗಡಣೆಯ ವೇಳೆ ಜಮ್ಮು ಪ್ರದೇಶಕ್ಕೆ 6 ಕ್ಷೇತ್ರಗಳು ಹೆಚ್ಚುವರಿಯಾಗಿ ಲಭಿಸಿವೆ. ಆದರೆ, ಕಾಶ್ಮೀರಿ ಕಣಿವೆಗೆ ಕೇವಲ 1 ಹೆಚ್ಚುವರಿ ಕ್ಷೇತ್ರವನ್ನು ನೀಡಲಾಗಿದೆ. ವಿಧಾನಸಭೆಗೆ ರಾಜ್ಯಪಾಲರು ಐವರು ಸದಸ್ಯರನ್ನು ನಾಮನಿರ್ದೇಶನ ಮಾಡುತ್ತಾರೆ.

2019ರಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನವನ್ನು ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸುವ ಮೂಲಕ ಹಿಂಪಡೆಯಲಾಯಿತು. ನಂತರದ ಐದು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇಲ್ಲಿ ಹೊಸ ಸೂರ್ಯೋದಯವಾಗಿದೆ. ಪ್ರದೇಶದಲ್ಲಿ ಅಭಿವೃದ್ಧಿಯ ಚಟುವಟಿಕೆಗಳು ಹೆಚ್ಚಾಗಿವೆ. ಅದು ನೆರೆಯ ಪಾಕಿಸ್ತಾನದ ಕಣ್ಣನ್ನು ಕೆಂಪಾಗಿಸಿದೆ. ಹೀಗಾಗಿ ಪಾಕಿಸ್ತಾನವು ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಹೆಚ್ಚಿಸಿದೆ. ಅವರನ್ನು ಹಿಮ್ಮೆಟ್ಟಿಸಲು ನಮ್ಮ ಸೇನಾಪಡೆಯ ಯೋಧರು ಶಕ್ತಿಮೀರಿ ಯತ್ನಿಸುತ್ತಿದ್ದಾರೆ. ಭಯೋತ್ಪಾದಕರು ಸತ್ತ ಸುದ್ದಿಗಳಷ್ಟೇ ಮಾಧ್ಯಮದಲ್ಲಿ ಹೆಚ್ಚು ಪ್ರಚಾರ ಪಡೆಯುತ್ತಿವೆ. ಆದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಸೇನಾಪಡೆಗಳ ಸಾಕಷ್ಟು ಅಧಿಕಾರಿಗಳು ಹಾಗೂ ಸೈನಿಕರೂ ಹುತಾತ್ಮರಾಗುತ್ತಿದ್ದಾರೆ. ಇದು ಹೆಚ್ಚು ಸುದ್ದಿಯಾಗುತ್ತಿಲ್ಲ. ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಪಡೆಗಳ ಮಾಜಿ ಮುಖ್ಯಸ್ಥ ಎಸ್.ಪಿ.ವೈದ್ ಅವರ ಪ್ರಕಾರ ಕಾಶ್ಮೀರಿ ಕಣಿವೆಗೆ ಪಾಕಿಸ್ತಾನದಿಂದ 600ಕ್ಕೂ ಹೆಚ್ಚು ಭಯೋತ್ಪಾದಕರು ನುಸುಳಿದ್ದಾರೆ. ಅವರನ್ನು ನಮ್ಮ ಸೇನಾಪಡೆಗಳು ನೋಡಿಕೊಳ್ಳುತ್ತವೆ ಬಿಡಿ. ಆದರೆ ನಿಜವಾದ ಪ್ರಶ್ನೆ ಏನೆಂದರೆ– 'ಕಾಶ್ಮೀರಿ ಕಣಿವೆಯ ಜನರು ಭಯೋತ್ಪಾದಕರನ್ನು ಹೇಗೆ ನೋಡಿಕೊಳ್ಳುತ್ತಾರೆ?' ಜಮ್ಮು ಮತ್ತು ಕಾಶ್ಮೀರದಲ್ಲಿ ಆಗುತ್ತಿರುವ ಅಭಿವೃದ್ಧಿ, ಇಷ್ಟು ದಿನ ಇದ್ದ ರಾಷ್ಟ್ರಪತಿ ಆಳ್ವಿಕೆ ಮುಗಿದು ಈಗ ಚುನಾವಣೆ ನಡೆಯುತ್ತಿರುವುದು, ಜನರಿಗೆ ಲಭಿಸುತ್ತಿರುವ ಉದ್ಯೋಗಾವಕಾಶಗಳು ಮತ್ತು ಕಣಿವೆಯಲ್ಲಿ ಹೆಚ್ಚುತ್ತಿರುವ ಬಂಡವಾಳ ಹೂಡಿಕೆ ಇವುಗಳನ್ನೆಲ್ಲ ಗಮನಿಸಿದರೆ ಕಾಶ್ಮೀರಕ್ಕೆ ಈಗ ತೆರೆದುಕೊಂಡಿರುವುದು ಸುವರ್ಣಾವಕಾಶವಲ್ಲದೆ ಬೇರೇನೂ ಅಲ್ಲ. ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದು ಜನರ ಕೈಲಿದೆ.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕಷ್ಟವಾದರೂ ಕೆಲವೊಂದನ್ನು ಬಿಡುವುದೇ ಲೇಸು ಅಲ್ಲವೇ?
- ಹೂಂ.. ನಾಲ್ಕು ಪೆಗ್ ಕುಡಿದ ನಂತರ ಲಾಸ್ಟ್ ಡ್ರಾಪ್ ಬಿಡುವುದು ಲೇಸು!

● **ಡಾ.ಆನಂದ ಕುಲಗೋಡ, ಧಾರವಾಡ**
ಭಟ್ರೇ, 'ಕುಡಿಯೋಣು ಬಾರಾ' ಪುಸ್ತಕಕ್ಕೆ ಹಸ್ತಾಕ್ಷರ ಹಾಕಿಸಿಕೊಳ್ಳಲು ಎಲ್ಲಿಗೆ ಬರಬೇಕು?
- ಸದ್ಯ ಬಾರ್, ಪಬ್‌ಗೆ ಬರಲಾ ಎಂದು ಕೇಳಲಿಲ್ಲವಲ್ಲ?!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಬಿಗ್ ಬಾಸ್‌ಗೆ ಹೋಗೋದು ಪ್ರತಿಷ್ಠೆಯಾ?
- ಸದ್ಯ ಪರಪ್ಪನ ಅಗ್ರಹಾರಕ್ಕೆ ಹೋಗುವುದು ಪ್ರತಿಷ್ಠೆಯಾ ಎಂದು ಕೇಳಲಿಲ್ಲವಲ್ಲ?!

● **ರಾಜಪ್ಪ, ಹಾವೇರಿ**
ಭಟ್ರೇ, ಲಾಯರ್ ನಾಗರಾಜ ಕುಡಪಲಿ ಬಿಗ್ ಬಾಸ್‌ಗೆ ಹೋಗ್ತಾರಂತೆ?
- ಅದಕ್ಕಾಗಿಯೇ ಸಿದ್ದರಾಮಯ್ಯನವರು ತಮ್ಮ ಕೇಸನ್ನು ಅಭಿಷೇಕ್ ಮನು ಸಿಂಘ್ವಿಗೆ ವಹಿಸಿದ್ದು!

● **ಪ್ರದೀಪ ಕುಮಾರ, (ಇಮೇಲ್ ಮೂಲಕ)**
ಭಟ್ರೇ, ನೀವು ಬಾರ್ ಓಪನ್ ಮಾಡಿದರೆ ಯಾವ ಹೆಸರಿಡುತ್ತೀರಿ?
- 'ಕುಡಿಯೋಣು ಬಾರಾ'!

● **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಮದುವೆಯಾದ ಗಂಡಸರು ಕೋಪ ಬಂದಾಗ ಹೆಂಡತಿ ಚುಚ್ಚುತ್ತಾರೆ. ಮದುವೆಯಾಗದವರು?
- ತಲೆ ಚಚ್ಚಿಕೊಳ್ತಾರೆ!

● **ರವಿ ಕೆ., ಮಂಡ್ಯ**
ಭಟ್ರೇ, ಎಸ್ಸೆಂ ಕೃಷ್ಣ ಕಾಂಗ್ರೆಸ್ಸಿನಲ್ಲೇ ಇದ್ದಿದ್ದರೆ ಏನಾಗುತ್ತಿತ್ತು?
- ಇಲೆಕ್ಟ್ರಾನಿಕ್ ಸಿಟಿಗೆ ಅರಸು ಬದಲು, ಕೃಷ್ಣ ಅವರ ಹೆಸರಲ್ಲೇ ಇರ್ತಾ ಇತ್ತು!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಕು.ವೀರಭದ್ರಪ್ಪ ಅವರ 'ಲ್ಯಾಟರೀನಾ' ಕಾದಂಬರಿಯನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ನೋಡಿದ್ದಾರೆ?
- ಅದನ್ನು 'ಲಾಟರಿನಾ' ಅಥವಾ 'ಲ್ಯಾಟ್ರೀನಾ' ಎಂದು ಓದುತ್ತಿದ್ದರು!

● **ಕೇಶವ ಬದನಾಳ, ಚಿತ್ರದುರ್ಗ**
ಭಟ್ರೇ, ಹರಿಯಾಣ ಚುನಾವಣೆಯಲ್ಲಿ ಅಕ್ಕ ಬಬಿತಾ ಜತೆ ವಿನೇಶ್ ಫೋಗಟ್ ಸ್ಪರ್ಧಿಸುತ್ತಾಳಂತೆ?
- ಆಕೆ ಕುಸ್ತಿಯನ್ನು ಬಿಟ್ಟರೂ ಕುಸ್ತಿ ಆಕೆಯನ್ನು ಬಿಡ್ತಾ ಇಲ್ಲ!

● **ವೇಣುಗೋಪಾಲ ಕಂಚಿತೊಟ, ಕಡೂರು**
ಭಟ್ರೇ, ಮಾವನ ಮನೆಯಲ್ಲಿ ಅಳಿಯನಿಗೆ ಉಪಚಾರ ಜಾಸ್ತಿ ಆದ್ರೆ?
- ಗಂಡನಮನೆಯಲ್ಲಿ ಸೊಸೆಗೆ ಉಪದ್ರ ಜಾಸ್ತಿ!

ಇವರ ಮನ ಬಾಂಗ್ಲಾ ಹಿಂದೂಗಳಿಗೆ ಮಿಡಿಯಲಿಲ್ಲ

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಗಾಜಾ ಸ್ಟ್ರಿಪ್‌ನ ದಕ್ಷಿಣದ ತುದಿಯಲ್ಲಿನ ರಾಫಾ ನಗರದ ಪ್ಯಾಲೆಸ್ತೀನ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಗೆ 45 ಜನರು ಹತರಾಗಿ 249ಕ್ಕೂ ಹೆಚ್ಚು ಜನ ಗಾಯಗೊಂಡರು. ರಾಫಾ ಸಂತ್ರಸ್ತರು ಬಾಂಬ್ ದಾಳಿಯಿಂದ ಆದ ಹಾನಿಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರಸಮೇತ ಹಂಚಿಕೊಂಡರು. ತದನಂತರ ಶುರುವಾದ All Eyes on Rafah ಎಂಬ ಅಭಿಯಾನವು ಸಾಮಾಜಿಕ ಜಾಲತಾಣಗಳಲ್ಲಿ ನಂ.1 ಟ್ರೆಂಡ್ ಆಗಿ ವಿಶ್ವಾದ್ಯಂತ ಸಂಚಲನ ಮೂಡಿಸಿತು.

ಭಾರತದಲ್ಲೂ ಸಾವಿರಾರು ಜನರು ಅದರಲ್ಲೂ ಬಾಲಿವುಡ್‌ನ ಹಲವು ಸೆಲೆಬ್ರಿಟಿಗಳು All Eyes on Rafah ಗ್ರಾಫಿಕ್ ಹಂಚಿಕೊಂಡು, 4,500 ಕಿ.ಮೀ. ದೂರದಲ್ಲಿರುವ ರಾಫಾ ನಿವಾಸಿಗಳ ಸಂಕಷ್ಟಕ್ಕೆ ಮರುಗಿ, ಇಸ್ರೇಲ್‌ನ ಬಾಂಬ್ ದಾಳಿಯನ್ನು ಖಂಡಿಸಿ, ಶಾಂತಿಸ್ಥಾಪನೆಗೆ ಮನವಿ ಮಾಡಿದರು. ಪ್ರಿಯಾಂಕ ಗಾಂಧಿಯವರು ತಮ್ಮ ಮಹತ್ವಾಕಾಂಕ್ಷೆ ರಾಜಕಾರಣವನ್ನು ಭದ್ರಪಡಿಸಿಕೊಳ್ಳಲು, ಇಸ್ರೇಲ್ ದಾಳಿಯನ್ನು ಖಂಡಿಸಿ, 'ಇದೊಂದು ಜನಾಂಗೀಯ ಹತ್ಯೆ, ಮಾನವೀಯತೆಗೆ ಆದ ಅಪಮಾನ' ಎಂಬ ಆಕ್ರೋಶಭರಿತ ಹೇಳಿಕೆಯನ್ನು ನೀಡಿದರು. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಯುದ್ಧದ ಕುರಿತು ವಿಶ್ವಸಂಸ್ಥೆಯಲ್ಲಿ ಜಾರಿಗೊಳಿಸಿದ ನಿರ್ಣಯಕ್ಕೆ ಭಾರತ ಸಹಿ ಹಾಕಲಿಲ್ಲ ಎಂದು ಸೋನಿಯಾ ಗಾಂಧಿಯವರು ಭಾರತ ಸರಕಾರವನ್ನು ತೀವ್ರವಾಗಿ ಟೀಕಿಸಿದರು. ಇನ್ನು ಒವೈಸಿಯವರಂತೂ ಸಂಸತ್ತಿನಲ್ಲಿ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿ 'ಜೈ ಪ್ಯಾಲೆಸ್ತೀನ್' ಎಂದು ಜೈಕಾರ ಕೂಗಿದರು.

ವಿಪರ್ಯಾಸವೆಂದರೆ, ಹಮಾಸ್ ಉಗ್ರರು ಸುಖಾಸುಮ್ಮನೆ ಇಸ್ರೇಲನ್ನು ಕೆಣಕಿ, ಈಗ ಅದರ ಪ್ರತಿದಾಳಿಯನ್ನು ತಡೆದುಕೊಳ್ಳಲಾಗದೆ ಪರದಾಡುತ್ತಿದ್ದಾರೆ. ಪ್ಯಾಲೆಸ್ತೀನ್ ಮೇಲಿನ ದಾಳಿಗೆ ಭಾರತದ ಅನೇಕ ರಾಜಕಾರಣಿಗಳು, ಸೆಲೆಬ್ರಿಟಿಗಳು ಮತ್ತು ಉದಾರವಾದಿಗಳು ಮರುಗುತ್ತಿದ್ದಾರೆ; ಆದರೆ ನಮ್ಮ ಪಕ್ಕದಲ್ಲೇ ಇರುವ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಅಮಾನುಷ ದೌರ್ಜನ್ಯ, ಹಿಂಸಾಚಾರಗಳು ಇವರ ಮನಸ್ಸನ್ನು ಕಲಕುತ್ತಿಲ್ಲ, ಅವರ ರಕ್ಷಣೆಗಾಗಿ ಒತ್ತಡ ಹೇರಲು ಇವರ ಧ್ವನಿ ಹೊರಡುತ್ತಿಲ್ಲ.

1947ರ ಮೊದಲು ಬಾಂಗ್ಲಾದೇಶದಲ್ಲಿದ್ದ ಹಿಂದೂಗಳು ಭಾರತೀಯ ನಾಗರಿಕರೇ ಆಗಿದ್ದರು. ದೇಶ ವಿಭಜನೆಯಿಂದಾಗಿ, ಬೆಳಗು ಹರಿಯುವುದರೊಳಗೆ ಅವರೆಲ್ಲಾ ಪೂರ್ವ ಪಾಕಿಸ್ತಾನದ ಭಾಗವಾಗಿಬಿಟ್ಟರು. ಅಂದಿನ ಕಾಂಗ್ರೆಸ್ ನಾಯಕತ್ವವು ಪೂರ್ವ ಬಂಗಾಳದ ಹಿಂದೂಗಳನ್ನು ನಡುನೀರಿನಲ್ಲಿ ಕೈಬಿಟ್ಟಿತು. ದುರದೃಷ್ಟವಶಾತ್, 1947ರಲ್ಲಿ ದೇಶ ವಿಭಜನೆಯ ನಂತರ ಪೂರ್ವ ಬಂಗಾಳದಲ್ಲಿಯೇ ಉಳಿದ ಹಿಂದೂಗಳು ಮುಸಲ್ಮಾನರ ದೌರ್ಜನ್ಯಕ್ಕೆ ಬಲಿ ಬೀಳುತ್ತಲೇ ಬಂದಿದ್ದಾರೆ. 1971ರಲ್ಲಿ ನಡೆದ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿಯೂ ಹಿಂದೂಗಳು ಅಲ್ಲಿನ ಮೂಲಭೂತವಾದಿಗಳ ಹಿಂಸೆಗೆ ತುತ್ತಾಗಿ, ಲಕ್ಷಾಂತರ ನಿರಾಶ್ರಿತರು ಆಸರೆಗಾಗಿ ಭಾರತದ ಬಾಗಿಲು ಬಡಿಯಬೇಕಾಯಿತು. 1992ರಲ್ಲಿ, ವಿವಾದಿತ ಬಾಬರಿ ಕಟ್ಟಡ ನೆಲಸಮವಾದಾಗಲೂ ಹಿಂದೂಗಳ ಮೇಲೆ ಮತ್ತೆ ದೌರ್ಜನ್ಯ ನಡೆಯಿತು. 1971ರಲ್ಲಿ ಭಾರತದ ಸೇನೆಯು ಪಾಕ್ ಸೈನ್ಯವನ್ನು ಪರಾಭವಗೊಳಿಸಿ ಬಾಂಗ್ಲಾದೇಶ ನಿರ್ಮಾಣವಾಗಲು ಕಾರಣವಾಯಿತು. ಆದರೆ ಕೃತಜ್ಞತೆ ಇಲ್ಲದ ಬಾಂಗ್ಲಾ ನಾಗರಿಕರು ಮತ್ತು ಅಲ್ಲಿನ ಮೂಲಭೂತವಾದಿಗಳು ಅಲ್ಪಸಂಖ್ಯಾತ ಹಿಂದೂ ಸಮಾಜದ ಮೇಲೆ ಸತತವಾಗಿ ಹಿಂಸೆ ಮತ್ತು ದೌರ್ಜನ್ಯವನ್ನು ಎಸಗುತ್ತಿದ್ದಾರೆ. ಭಾರತದಿಂದ ಪ್ರತ್ಯೇಕವಾಗಿ 78 ವರ್ಷವಾದರೂ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಗೆ ರಾಜಕೀಯ ಸ್ಥಿರತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ; ರಕ್ತ ಹರಿದು ಅಧಿಕಾರ ಹಸ್ತಾಂತರವಾಗುವುದು ಎರಡೂ ದೇಶಗಳಲ್ಲಿ ಸಾಮಾನ್ಯ ಬೆಳವಣಿಗೆಯಾಗಿದೆ. ಇವರ ಇತಿಹಾಸ ಕೆದಕಿದರೆ, ರಾಜಕೀಯ ಅಸ್ಥಿರತೆ ಹಾಗೂ ಸರಕಾರದ ಬದಲಾವಣೆಯಲ್ಲಿ ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ನಡುವೆ ಸದಾ ಪೈಪೋಟಿ ನಡೆಯುವುದನ್ನು ಕಾಣಬಹುದು,

2024ರಲ್ಲಿ ಭುಗಿಲೆದ್ದ ರಾಜಕೀಯ ಅಸ್ಥಿರತೆಯ ಫಲವಾಗಿ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಸರಕಾರವು ನೆಲಕಚ್ಚಿ, ಮೊಹಮದ್ ಯೂನಸ್ ನೇತೃತ್ವದಲ್ಲಿ ಮಧ್ಯಂತರ ಸರಕಾರ ರಚನೆಯಾಗಿದೆ. ಬಾಂಗ್ಲಾದೇಶದಲ್ಲಿನ ಹಿಂದೂಗಳನ್ನು ಅವಾಮಿ ಲೀಗ್ ಪಕ್ಷದ ಬೆಂಬಲಿಗರೆಂದು ಪರಿಗಣಿಸಲಾಗಿರುವುದರಿಂದ, ಶೇಖ್ ಹಸೀನಾರವರು ದೇಶ ಬಿಟ್ಟು ಹೋದ ಮೇಲೆ ಹಿಂಸಾಚಾರಕ್ಕೆ ಹಿಂದೂಗಳೇ ಗುರಿಯಾಗಿದ್ದು. ಆಗಸ್ಟ್ 5ರಂದು ಶೇಖ್ ಹಸೀನಾ ಸರಕಾರದ ಪತನದ ನಂತರ 48 ಜಿಲ್ಲೆಗಳ 278 ಸ್ಥಳಗಳಲ್ಲಿ ಹಿಂದೂಗಳು ದಾಳಿ ಮತ್ತು ಬೆದರಿಕೆಯನ್ನು ಎದುರಿಸಿದರು.

ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಪರಿಸ್ಥಿತಿಯ ಬಗ್ಗೆ ಬಿಬಿಸಿ ಆನ್‌ಲೈನ್ ಸುದ್ದಿ ಪೋರ್ಟಲ್‌ನಲ್ಲಿ ಸೌತಿಕ್ ಬಿಸ್ವಾಸ್ ಅವರು, 'ಜನವರಿ 2013 ಮತ್ತು ಸೆಪ್ಟೆಂಬರ್ 2021ರ ನಡುವೆ, ವಿಧ್ವಂಸಕತೆ, ಬೆಂಕಿ ಹಚ್ಚುವಿಕೆ ಮತ್ತು ಉದ್ದೇಶಿತ ಹಿಂಸಾಚಾರ ಸೇರಿದಂತೆ ಹಿಂದೂ ಸಮುದಾಯದ ಮೇಲೆ ಕನಿಷ್ಠ 3,679 ದಾಳಿಗಳು ನಡೆದಿವೆ' ಎಂದು ಬರೆದಿದ್ದಾರೆ.

2021ರಲ್ಲಿ, ದೇಶದ ಅತಿದೊಡ್ಡ ಹಿಂದೂ ಹಬ್ಬವಾದ ದುರ್ಗಾಪೂಜೆಯ ಸಮಯದಲ್ಲಿ ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮನೆಗಳು ಮತ್ತು ದೇವಾಲಯಗಳ ಮೇಲೆ ಗುಂಪುದಾಳಿಯಾಯಿತು. ಹಿಂಸಾಚಾರ, ಮನೆಗಳು ಮತ್ತು ಪೂಜಾಸ್ಥಳಗಳ ನಾಶ ಇಲ್ಲಿ ಸಾಮಾನ್ಯವಾಗಿದೆ. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರನ್ನು ರಕ್ಷಿಸುವ ತನ್ನ ಕರ್ತವ್ಯದಲ್ಲಿ ಸರಕಾರ ವಿಫಲವಾಗಿದೆ ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿಯು ತಿಳಿಸುತ್ತದೆ. ವಾಸ್ತವ ಸಂಗತಿಯೆಂದರೆ ಶೇಖ್ ಹಸೀನಾರಾವರ ಆಡಳಿತದಲ್ಲಿಯೂ ಹಿಂದೂಗಳ ಪರಿಸ್ಥಿತಿ ಭಿನ್ನವಾಗಿರಲಿಲ್ಲ.

ಭಯದ ವಾತಾವರಣದಲ್ಲಿ ಬದುಕುತ್ತಿರುವ ಬಾಂಗ್ಲಾದೇಶದ ನೊಂದ ಹಿಂದೂಗಳಿಗೆ ನೈತಿಕ ಬೆಂಬಲ ನೀಡುವ ಬದಲು ಕಾಂಗ್ರೆಸ್ಸಿಗರು ಭಿನ್ನಪಥ ತುಳಿದಿದ್ದಾರೆ; ಅಲ್ಲಿನ ರಾಜಕೀಯ ಅಸ್ಥಿರತೆಯು ಕಾಂಗ್ರೆಸ್ ನಾಯಕರಿಗೆ ಪುನಃ 'ಮೋದಿ ವಿರೋಧಿ ಅಜೆಂಡಾಗೆ' ಬಳಸಿಕೊಳ್ಳುವ ಅಸ್ತ್ರವಾಗಿದೆ. ಮಾಜಿ ಕೇಂದ್ರ ಸಚಿವ ಸಲ್ಮಾನ್ ಖುರ್ಷಿದ್ ಅವರು, 'ಬಾಂಗ್ಲಾದೇಶದಲ್ಲಿ ನಡೆದ ಘಟನೆಗಳು ಭಾರತದಲ್ಲೂ ನಡೆಯಬಹುದು' ಎಂದು ಹೇಳಿದರೆ, ಮಣಿಶಂಕರ್ ಅಯ್ಯರ್ ಅವರು, 'ಭಾರತದಲ್ಲಿಯೂ ಬಾಂಗ್ಲಾದೇಶದ ಪರಿಸ್ಥಿತಿ ಇದೆ' ಎಂಬ ವಿವಾದಾಸ್ಪದ ಹೇಳಿಕೆ ನೀಡಿದರು. ಮಧ್ಯಪ್ರದೇಶದ ಕಾಂಗ್ರೆಸ್ ನಾಯಕ ಸಜ್ಜನ್ ವರ್ಮಾರವರು, 'ಮೋದಿಯವರೇ, ಜನರು ಒಂದು ದಿನ ನಿಮ್ಮ ಮನೆಗೂ ನುಗ್ಗಿ ಆಕ್ರಮಿಸಿಕೊಳ್ಳುತ್ತಾರೆ' ಎಂದು ಪ್ರಚೋದನಕಾರಿ ಭಾಷಣ ಮಾಡಿದರು.

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಮೊಹಮದ್ ಯೂನಸ್‌ರವರನ್ನು ಅಭಿನಂದಿಸಿ ಟ್ವೀಟ್ ಮಾಡಿದಾಗ, ಅಲ್ಲಿನ ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಕೊನೆಗಾಣಿಸಿ ಅವರಿಗೆ ರಕ್ಷಣೆ ಕೊಡಿ ಎಂದು ಕೇಳಲು ಅವರ ಬಳಿ ಪದವೇ ಇರಲಿಲ್ಲ. 'ಇಂಡಿಯ' ಮೈತ್ರಿಕೂಟದ ಯಾವೊಬ್ಬ ನಾಯಕನೂ 'ಬಾಂಗ್ಲಾದೇಶದ ಹಿಂದೂಗಳನ್ನು ರಕ್ಷಿಸಿ' ಎಂದು ಅವರ ಬೆಂಬಲಕ್ಕೆ ನಿಲ್ಲುವುದಿಲ್ಲ.

ಬಾಂಗ್ಲಾದೇಶದ ಇಸ್ಕಾನ್ ಮಂದಿರದ ಮೇಲೆ ದಾಳಿಯಾಗಿದೆ, ಹಲವಾರು ದೇವಾಲಯಗಳಿಗೆ ಬೆಂಕಿ ಹಚ್ಚಲಾಗಿದೆ. ಭಾರತದ ಸುದ್ದಿವಾಹಿನಿಗಳು ಈ ಸುದ್ದಿಯನ್ನು ಸಾಕ್ಷಿಸಮೇತ ಪ್ರಸಾರ ಮಾಡಿದ ನಂತರವೂ ಕೆಲವರು, 'ಅಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಯಾವ ದಾಳಿಯೂ ನಡೆದಿಲ್ಲ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಪ್ರಚಾರದಲ್ಲಿ ತೊಡಗಿದ್ದಾರೆ.

'ಫ್ಯಾಕ್ಟ್ ಚೆಕರ್' ಎಂದು ಬಿಂಬಿಸಿಕೊಳ್ಳುವ ಪತ್ರಕರ್ತ ಮೊಹಮದ್ ಜುಬೇರ್, 'ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ಹಿಂಸಾಚಾರವೇ ನಡೆಯುತ್ತಿಲ್ಲ; ಇವೆಲ್ಲಾ ಗೋದಿ ಮಾಧ್ಯಮಗಳ ಸೃಷ್ಟಿ. ಮೂರು-ನಾಲ್ಕು ದೇವಸ್ಥಾನಗಳ ಮುಂಭಾಗದಲ್ಲಿ ಮುಸ್ಲಿಂ ಯುವಕರೇ ರಕ್ಷಣೆ ಕೊಡುತ್ತಿದ್ದಾರೆ' ಎಂದು ಆಧಾರರಹಿತ ಚಿತ್ರ ಬಳಸಿ, ಧಾರ್ಮಿಕ ಮತಾಂಧರ ರಕ್ಷಣೆಗೆ ಗುರಾಣಿ ಹಿಡಿದರು. ಇವರೊಂದಿಗೆ ತಾಳಹಾಕಲು 'ದಿ ವೈರ್' ವರದಿಗಾರ್ತಿ ಆಫ್ರಾ ಖಾನಮ್, ಹಿರಿಯ ಪತ್ರಕರ್ತೆ ಸಬಾ ನಖ್ವಿ ಮತ್ತು ರಾಣಾ ಅಯೂಬ್‌ರವರು, 'ಬಾಂಗ್ಲಾದಲ್ಲಿನ ವಿದ್ಯಮಾನವು, ಚುನಾಯಿತ ಸರಕಾರವನ್ನು ಕೆಡವಿ ಪ್ರಜಾಪ್ರಭುತ್ವದ ಸ್ಥಾಪನೆಗೆ ನಡೆದಿರುವ ಕ್ರಾಂತಿ. ಅಲ್ಲಿ ಅಲ್ಪಸಂಖ್ಯಾತರ ಮೇಲೆ ಯಾವ ದಾಳಿಯೂ ನಡೆದಿಲ್ಲ' ಎಂದು ಸರ್ಟಿಫಿಕೇಟ್ ಕೊಟ್ಟರು. 'ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ಹಲ್ಲೆಯೇ ನಡೆದಿಲ್ಲ' ಎಂದು 'ಅಲ್ ಜಜೀರಾ' ಸುದ್ದಿವಾಹಿನಿ ಒಂದು ವರದಿ ಮಾಡಿತು. ಹಿಂದೂಗಳನ್ನು ರಕ್ಷಿಸುವಂತೆ ಒತ್ತಡ ಹೆಚ್ಚಾದಾಗ ಬಾಂಗ್ಲಾ ಪ್ರಧಾನಿ ಮೊಹಮದ್ ಯೂನಸ್ ಅವರು ಢಾಕಾದಲ್ಲಿನ ಢಾಕೇಶ್ವರಿ ದೇವಾಲಯಕ್ಕೆ ಭೇಟಿ ನೀಡಿ, 'ನಾವು ಹಿಂದೂಗಳ ರಕ್ಷಣೆಗೆ ಬದ್ಧರಿದ್ದೇವೆ' ಎಂದು ಆಶ್ವಾಸನೆ ನೀಡಿದರು.

1975ರಲ್ಲಿ ನಡೆದ ಸೇನಾಬಂಡಾಯದಲ್ಲಿ ಬಾಂಗ್ಲಾದೇಶದ ರೂವಾರಿ ಶೇಖ್ ಮುಜಿಬುರ್ ರೆಹಮಾನ್ ಅವರ ಕುಟುಂಬದ ಬಹುತೇಕ ಸದಸ್ಯರು ಅಮಾನುಷವಾಗಿ ಹತ್ಯೆಗೀಡಾಗಿ ಸೇನಾಧಿಕಾರದ ಸ್ಥಾಪನೆಯಾಯಿತು. ಈಗ ಮಗದೊಮ್ಮೆ ನೂರಾರು ಜನರ ಸಾವಿನ ನಂತರ ವಿದ್ಯಾರ್ಥಿಗಳ ಹೋರಾಟವು ಮುಜಿಬುರ್ ರೆಹಮಾನ್ ಪುತ್ರಿಯ ನೇತೃತ್ವದ ಸರಕಾರವನ್ನು ಕಿತ್ತೆಸೆದ ಪರಿಣಾಮ ಮಧ್ಯಂತರ ಸರಕಾರದ ರಚನೆಯಾಗಿದೆ.

ಬಾಂಗ್ಲಾದೇಶದಲ್ಲಿ ನಡೆದ ವಿದ್ಯಾರ್ಥಿಗಳ ಹೋರಾಟವು, ಸರಕಾರಿ ನೌಕರಿಗಳಲ್ಲಿ ಮೀಸಲಾತಿಯನ್ನು ವಿರೋಧಿಸಿ ಪ್ರಾರಂಭವಾಗಿದ್ದು. ಹೋರಾಟ ತೀವ್ರವಾಗಿ ಪೊಲೀಸ್ ಹಿಂಸಾಚಾರಕ್ಕೆ ನೂರಾರು ವಿದ್ಯಾರ್ಥಿಗಳು ಬಲಿಯಾದ ಮೇಲೆ, ಹೋರಾಟವು ಶೇಖ್ ಹಸೀನಾರವರ ಕುರ್ಚಿಗೆ ಕಂಟಕವಾಗಿ ಅವರು ದೇಶ ಬಿಟ್ಟು ಭಾರತಕ್ಕೆ ಬಂದು ಆಶ್ರಯ ಪಡೆಯುವಂತಾಯಿತು. ಬಾಂಗ್ಲಾದಲ್ಲಿ ರಾಜಕೀಯ ಬದಲಾವಣೆ ನಡೆದಿರುವುದು ಪ್ರಜಾತಂತ್ರದ ಸ್ಥಾಪನೆಗೆ ಎಂದು ತಪ್ಪಾಗಿ ವ್ಯಾಖ್ಯಾನಿಸಿ ಅಲ್ಲಿನ ಅರಾಜಕತೆಗೆ ಪರದೆ ಎಳೆದು, ಹಿಂದೂಗಳು ಎದುರಿಸುತ್ತಿರುವ ಸಂಕಷ್ಟವನ್ನು ಗೌಣ ಮಾಡುವ ಹುನ್ನಾರ ನಡೆದಿದೆ.

ಭಾರತದ ಪ್ರಧಾನಿ ಮೋದಿಯವರು, 'ಬಾಂಗ್ಲಾದೇಶದ ಹಿಂದೂಗಳಿಗೆ ರಕ್ಷಣೆ ನೀಡಿ' ಎಂದು ಹೊಸ ಸರಕಾರವನ್ನು ಒತ್ತಾಯಿಸಿದರು. ಸ್ವಾತಂತ್ರ್ಯ ದಿನದ ಕೆಂಪುಕೋಟೆಯ ಭಾಷಣದಲ್ಲಿ ಯೂ ಇದನ್ನು ಪುನರುಚ್ಚರಿಸಿ, ಬಾಂಗ್ಲಾದ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತ ರೊಂದಿಗೆ ಭಾರತವಿದೆ ಎಂಬ ಗಟ್ಟಿಯಾದ ಸಂದೇಶವನ್ನು ರವಾನೆ ಮಾಡಿದರು.

ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ಹಲ್ಲೆ ಮತ್ತು ಹತ್ಯೆಯನ್ನು ವಿಶ್ವಸಂಸ್ಥೆ ಖಂಡಿಸಿದೆ, ಅಮೆರಿಕ, ಬ್ರಿಟನ್ ಸರಕಾರಗಳೂ ಇದಕ್ಕೆ ದನಿಗೂಡಿಸಿವೆ. ಆದರೆ ಭಾರತದಲ್ಲಿ All eyes on Rafah ಎಂದು ಅಭಿಯಾನ ಕೈಗೊಂಡಿದ್ದ ಢೋಂಗಿಗಳು, ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ All eyes on Bangla Hindus ಎಂದು ಅಭಿಯಾನ ಕೈಗೊಳ್ಳಲಿಲ್ಲ, ಸಂಕಷ್ಟದಲ್ಲಿರುವ ಅವರ ಬೆಂಬಲಕ್ಕೆ ನಿಂತು ತಮ್ಮ ಸಂವೇದನಾಶೀಲತೆಯನ್ನು ಪ್ರಕಟ ಮಾಡಲೇ ಇಲ್ಲ. ಭಾರತದ ಉದಾರವಾದಿಗಳ ಮತ್ತು ಸೆಲೆಬ್ರಿಟಿಗಳ ಮನಸ್ಸು ಕೇವಲ ರಾಫಾಗೆ ಮಿಡಿಯಿತೇ ವಿನಾ, ಬಾಂಗ್ಲಾದ ಹಿಂದೂಗಳಿಗೆ ಮಿಡಿಯಲೇ ಇಲ್ಲ.

(ಲೇಖಕರು ಬಿಜೆಪಿ ವಕ್ತಾರರು)

ಅಭಿಮತ
ರಾಜು ಭೂಶೆಟ್ಟಿ

ಸ್ವದೇಶಿ ತಂತ್ರಜ್ಞಾನವೇ ನಿರ್ಣಾಯಕ

ಯಾವುದೇ ರಾಷ್ಟ್ರದ ಸಮಗ್ರ ಪ್ರಗತಿಯಲ್ಲಿ ಸ್ವದೇಶಿ ತಂತ್ರಜ್ಞಾನಗಳು ತುಂಬಾ ನಿರ್ಣಾಯಕವಾಗಿವೆ. ಇವು ಒಂದು ದೇಶ ಅಥವಾ ಪ್ರದೇಶದ ನಿರ್ದಿಷ್ಟ ಅಗತ್ಯಗಳು ಮತ್ತು ಸವಾಲುಗಳನ್ನು ಗಣನೆಗೆ ತೆಗೆದುಕೊಂಡು, ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ನಾವೀನ್ಯಗಳು ಮತ್ತು ಪರಿಹಾರೋಪಾಯಗಳಾಗಿವೆ; ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ, ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರತೆಯನ್ನು ಖಾತ್ರಿಪಡಿಸುವಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ದೇಶವು ಸಂಶೋಧನೆ ಮತ್ತು ನಾವೀನ್ಯದ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಹೂಡಿಕೆ ಮಾಡಿದಾಗ ಸ್ಥಳೀಯ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಬಹುದು.

ಸ್ವದೇಶಿ ತಂತ್ರಜ್ಞಾನಗಳು ಹೊಸ ಕೈಗಾರಿಕೆಗಳ ಸ್ಥಾಪನೆಗೆ ಕಾರಣವಾಗುವುದರ ಮೂಲಕ ಉದ್ಯೋಗವನ್ನು ಸೃಷ್ಟಿಸಲು ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಸಹಾಯಕವಾಗುತ್ತವೆ. ಸ್ವದೇಶಿ ತಂತ್ರಜ್ಞಾನಗಳು ಆರೋಗ್ಯ ರಕ್ಷಣೆಯ ಕ್ಷೇತ್ರದಲ್ಲಿ ಮಹತ್ತರ ಪಾತ್ರ ವಹಿಸಿ, ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ವೈದ್ಯಕೀಯ ಸೇವೆಗಳನ್ನು ದೊರಕಿಸಿಕೊಡಬಲ್ಲವು. ವಿಶೇಷವಾಗಿ ಪಟ್ಟಣ-ನಗರಗಳಿಂದ ದೂರದಲ್ಲಿರುವ ಪ್ರದೇಶಗಳಲ್ಲಿ ಟೆಲಿಮೆಡಿಸಿನ್ ಪರಿಹಾರಗಳು ಮತ್ತು ಸಾಂಪ್ರದಾಯಿಕ ಔಷಧಿ ವ್ಯವಸ್ಥೆಗಳಲ್ಲಿ ಬೇರೂರಿರುವ ಗಿಡಮೂಲಿಕೆಗಳ ಪರಿಹಾರದಂಥ ಆವಿಷ್ಕಾರಗಳು ಜನಸಾಮಾನ್ಯರಿಗೆ ದೊರೆತು ಅವರ ಆರೋಗ್ಯ ನಳನಳಿಸುವಂತಾಗಲು ಇವು ನೆರವಾಗುತ್ತವೆ. ಹವಾಮಾನ ಬದಲಾವಣೆಯು ಜಾಗತಿಕ ಮಟ್ಟದಲ್ಲಿ ಕೃಷಿ ಕ್ಷೇತ್ರವನ್ನು ಕಂಗಾಲಾಗುವಂತೆ ಮಾಡಿರುವುದಂತೂ ಕಟುಸತ್ಯ. ಹೀಗಾಗಿ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವುದರ ಜತೆಗೆ ಉತ್ತಮ ಬೆಳೆಯನ್ನು ಪಡೆಯುವ ನಿಟ್ಟಿನಲ್ಲಿ ಸ್ವದೇಶಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈಗಾಗಲೇ ಲಭ್ಯವಿರುವ ಸಾಂಪ್ರದಾಯಿಕ ಜ್ಞಾನವನ್ನು ಅತ್ಯಾಧುನಿಕ ವಿಧಾನಗಳೊಂದಿಗೆ ಸಂಯೋಜಿಸುವುದರತ್ತ ಚಿಂತನೆಗಳು ನಡೆಯಬೇಕಿವೆ.

ಸೌರಶಕ್ತಿ ಮತ್ತು ಪವನಶಕ್ತಿಯಂಥ ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸಿಕೊಳ್ಳುವಲ್ಲಿ ಸ್ವದೇಶಿ ತಂತ್ರಜ್ಞಾನಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಅದೇ ರೀತಿಯಲ್ಲಿ, ಸ್ಥಳೀಯ ವಿನ್ಯಾಸಗಳನ್ನು ಆಧರಿಸಿದ ಗಾಳಿಯಂತ್ರಗಳು ಮತ್ತು ಜೈವಿಕ ಅನಿಲ ಸ್ಥಾವರಗಳು ಗ್ರಾಮೀಣ ಸಮುದಾಯಗಳಿಗೆ ಶಕ್ತಿ/ಇಂಧನ ಸಂಬಂಧಿತ ಪರಿಹಾರಗಳನ್ನು ಒದಗಿಸಬಲ್ಲವು. ಭಾರತವು ತನ್ನ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಸಾಂಪ್ರದಾಯಿಕ ಕರಕುಶಲತೆಗೆ ಹೆಸರುವಾಸಿಯಾಗಿದೆ. ಕೈಮಗ್ಗದ ಉತ್ಪನ್ನಗಳಿಂದ ಮೊದಲ್ಗೊಂಡು ಕುಂಬಾರಿಕೆ, ಲೋಹದ ವಸ್ತುಗಳವರೆಗಿನ ಕರಕುಶಲ ವಲಯವನ್ನು ಸ್ವದೇಶಿ ತಂತ್ರಜ್ಞಾನದ ನೆರವಿನಿಂದ ಪುನರುಜ್ಜೀವನಗೊಳಿಸುವ ಮೂಲಕ ಸಾಂಪ್ರದಾಯಿಕ ಜೀವನೋಪಾಯವನ್ನು ಮಾತ್ರವಲ್ಲದೆ ಆರ್ಥಿಕ ಸಬಲೀಕರಣವನ್ನೂ ಉತ್ತೇಜಿಸಬಹುದಾಗಿದೆ. ಭಾರತವು ತನ್ನ ಸಾಂಸ್ಕೃತಿಕ ವೈವಿಧ್ಯ ಮತ್ತು ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ಇನ್ನಷ್ಟು ಬಿಂಬಿಸಿಕೊಳ್ಳಲು ಇದು ನೆರವಾಗಬಲ್ಲದು. ಜಾಗತಿಕವಾಗಿ ಸವಾಲಾಗಿ ಪರಿಣಮಿಸಿರುವ ಹಲವಾರು ಕಾಯಿಲೆಗಳಿಗೆ ವಿಶ್ವದಲ್ಲೇ ಮೊದಲ ಬಾರಿಗೆ ಭಾರತವು ಹಲವು ಲಸಿಕೆಗಳನ್ನು ಅಭಿವೃದ್ಧಿ ಪಡಿಸಿರುವುದು ಸ್ವದೇಶಿ ತಂತ್ರಜ್ಞಾನದ ನೆರವಿನಿಂದಲೇ ಎಂಬುದು ಕೂಡ ಅಭಿಮಾನಪಡುವ ಸಂಗತಿಯೇ.

ಸ್ವದೇಶಿ ತಂತ್ರಜ್ಞಾನವು ನಮಗೆ ಸ್ವಾವಲಂಬನೆಯನ್ನು ಕಲಿಸುತ್ತದೆ. ಅಂದರೆ ವಿವಿಧ ವಲಯಗಳ ಕಾರ್ಯಚಟುವಟಿಕೆಗಳಿಗೆ ಸಹಾಯಕ್ಕಾಗಿ ಇತರ ರಾಷ್ಟ್ರಗಳನ್ನು ಅವಲಂಬಿಸುವುದರಿಂದ ನಮಗೆ ಮುಕ್ತಿ ದೊರೆಯುತ್ತದೆ ಮತ್ತು ಇದು ರಾಷ್ಟ್ರದ ಆರ್ಥಿಕ ಬೆಳವಣಿಗೆಗೂ ಪೂರಕವಾಗುತ್ತದೆ. ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳು ಪರಿಸರ-ಸ್ನೇಹಿ ಆಗಿರುವುದರ ಜತೆಗೆ ನಮ್ಮ ಸಾಂಸ್ಕೃತಿಕ ಪರಂಪರೆಯನ್ನೂ ಸಂರಕ್ಷಿಸುತ್ತವೆ ಹಾಗೂ ಹೆಚ್ಚೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ನಿರುದ್ಯೋಗ ಸಮಸ್ಯೆಗೂ ಪರಿಹಾರ ಒದಗಿಸುತ್ತವೆ. ಒಟ್ಟಾರೆಯಾಗಿ ಹೇಳುವುದಾದರೆ, ವೈಜ್ಞಾನಿಕ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮತ್ತು ಮುಂಬರುವ ಪೀಳಿಗೆಗೆ ಉಜ್ವಲ ಭವಿಷ್ಯವನ್ನು ರೂಪಿಸುವಲ್ಲಿ ಸ್ವದೇಶಿ ತಂತ್ರಜ್ಞಾನಗಳಿಗೆ ಅಗಾಧ ಸಾಮರ್ಥ್ಯವಿದೆ. ಇವುಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವಂತಾಗಲು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಸಂಶೋಧನೆಗಳಾಗಬೇಕು, ಅದನ್ನು ಕೈಗೊಳ್ಳಲು ಅಧಿಕ ಬಂಡವಾಳದ ಹೂಡಿಕೆಯಾಗಬೇಕು. ಅದು ಈ ಕಾಲಘಟ್ಟದ ಅಗತ್ಯ ಮತ್ತು ಅನಿವಾರ್ಯತೆಯೂ ಹೌದು.

(ಲೇಖಕರು ಶಿಕ್ಷಕರು ಮತ್ತು ವಿಜ್ಞಾನ ಸಂವಹನಕಾರರು)

ರಾಕ್ಷಸಕೃತ್ಯ ಎಸಗುತ್ತಿದ್ದರೆ ಮಹಿಳೆ ಬದುಕುವುದೆಂತು!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಸಮುದ್ರದಲ್ಲಿ ಹಡಗು ಸಂಚರಿಸುವಾಗ ಬಿರುಗಾಳಿಗೆ ಹೊಯ್ದಾಡುತ್ತದೆ. ಆಗ ಮಾನವಸ್ನೇಹಿ ತಿಮಿಂಗಿಲವು ಬಿರುಗಾಳಿಗೆ ಹಡಗು ವಾಲದಂತೆ ತನ್ನ ಬೆನ್ನನ್ನೇ ಹಡಗಿಗೆ ಆನಿಸಿ, ಹಡಗನ್ನೂ ಅದರೊಳಗಿನ ಮಾನವರನ್ನೂ ರಕ್ಷಿಸುತ್ತದೆ. ಆದರೆ ಅದೇ ಮಾನವ, ಉಪಕಾರದ ಆಶಯದೊಂದಿಗೆ ತಿಮಿಂಗಿಲವು ಹಡಗಿನ ಬಳಿ ಬಂದು ಬೆನ್ನೊಡ್ಡಿ ನಿಂತಾಗ, ಮತ್ಸ್ಯಬೇಟೆಯ ನೆಪದಲ್ಲಿ ಹಡಗನ್ನು ಅಲುಗಾಡಿಸಿ ಅದನ್ನೇ ಬೇಟೆಯಾಡಿ ಬಲಿಪಡೆಯುತ್ತಾನೆ ಎಂಬ ವಿಚಾರವನ್ನು ಹಿಂದೆ ಎಲ್ಲೋ ಓದಿದ್ದು ಮನದಂಚಿಗೆ ಬಂದುಹೋಯಿತು. ನಿಸ್ವಾರ್ಥ ಸೇವೆ ಸಲ್ಲಿಸುವ, ಜನರ ಪ್ರಾಣ ಉಳಿಸುವ ವೈದ್ಯರ ಪಾಡೂ ಇದಕ್ಕೆ ಹೊರತಲ್ಲ!

'ಒಬ್ಬ ವೈದ್ಯೆಯಾಗಿ, ಆರೋಗ್ಯ ರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಎದುರಿಸುತ್ತಿರುವ ಭಯಾನಕ ವಾಸ್ತವದ ವಿರುದ್ಧ ನಾನು ಮಾತನಾಡುತ್ತಿದ್ದೇನೆ. ನಾವು ದಣಿವರಿಯದೆ ಅಧ್ಯಯನ ಮಾಡುತ್ತೇವೆ, ಇತರರಿಗೆ ಸೇವೆ ಸಲ್ಲಿಸಲು ನಮ್ಮ ಜೀವನವನ್ನು ಪಣಕ್ಕಿಡುತ್ತೇವೆ. ಆದರೆ ನಮ್ಮ ಸುರಕ್ಷತೆಗೆ ಧಕ್ಕೆಯಾಗಿದೆ. ಮಹಿಳಾ ವೈದ್ಯರ ವಿರುದ್ಧದ ಇತ್ತೀಚಿನ ಹಿಂಸಾಚಾರ ಮತ್ತು ಅತ್ಯಾಚಾರದ ಘಟನೆಗಳು ನಮಗೆ ಹಾನಿಯನ್ನುಂಟುಮಾಡುವ ವ್ಯವಸ್ಥಿತ ವೈಫಲ್ಯಗಳಿಗೆ ಹಿಡಿದ ಕೈಗನ್ನಡಿ' ಎಂದು ಮಹಿಳಾ ವೈದ್ಯರೊಬ್ಬರು ತಮ್ಮ ನೋವು ಹೇಳಿಕೊಂಡರು.

ಮೊನ್ನೆ ಮೊನ್ನೆ ನಡೆದ, ವಿಶ್ವದ ಅದ್ದೂರಿ ವಿವಾಹವೆಂದು ಬಣ್ಣಿಸಲ್ಪಟ್ಟ ಅಂಬಾನಿ ಮನೆ ಮದುವೆಯಲ್ಲಿ ನೀತಾ ಅಂಬಾನಿಯವರು ಮಗಳು/ಸ್ತ್ರೀ ಕುರಿತು ಆಡಿದ ಮಾತುಗಳು ಅದೆಷ್ಟು ಉತ್ಕೃಷ್ಟವಾಗಿದ್ದವು ಎಂದು ನಾವೆಲ್ಲಾ ಕೊಂಡಾಡಿ ತಲೆದೂಗಿ ಚಪ್ಪಾಳೆ ತಟ್ಟಿದೆವು. ಆದರೆ ಇದರ ಬೆನ್ನಿಗೇ ನಡೆದ ಕೋಲ್ಕೊತ್ತಾದ ಘಟನೆ, ಬೆಂಗಳೂರಿನಲ್ಲಿ ನಡೆದ ಘಟನೆ ನಮ್ಮ ನಿದ್ರೆಗೆಡಿಸಿ ಆಘಾತವನ್ನುಂಟುಮಾಡಿದವು.

'ತುರ್ತುಕರೆ ಬಂದಾಗ, ಕರೆ ಮಾಡಿದಾತನ ಜಾತಿ-ಮತ-ಧರ್ಮ ಕೇಳುವುದಿಲ್ಲ. ಆತ ರೌಡಿಯೇ, ಉಗ್ರವಾದಿಯೇ, ಆತನಿಗೆ ಕ್ರಿಮಿನಲ್ ಹಿನ್ನೆಲೆಯಿದೆಯೇ ಎಂದು ಯೋಚಿಸುತ್ತ ಕೂರದೆ ನಮ್ಮ ಪ್ರಾಣ ಪಣಕ್ಕಿಟ್ಟು ಮತ್ತೊಬ್ಬರ ಉಳಿವಿಗಾಗಿ ನಾವು ಹೋರಾಡುವುದೇ ತಪ್ಪಾ? ಸ್ವಂತ ಕೆಲಸದ ಸ್ಥಳವಾದ, ಇನ್ನೊಬ್ಬರನ್ನು ಬದುಕಿಸುವ ಜಾಗವಾದ ಆಸ್ಪತ್ರೆಯಲ್ಲಿ ಅತ್ಯಾಚಾರಕ್ಕೊಳಗಾಗುವುದೆಂದರೆ ಮಹಿಳೆಯರು ಸುರಕ್ಷಿತವಾಗಿ ಎಲ್ಲಿ ಬದುಕಬೇಕು? ನಾವು ಕಷ್ಟಪಟ್ಟು ಓದುತ್ತಿರುವುದು ನಮ್ಮ ಪ್ರಾಣವನ್ನು ಪಣಕ್ಕಿಟ್ಟು ಹಿಂಸೆ ಮತ್ತು ಅತ್ಯಾಚಾರವನ್ನು ಎದುರಿಸುವುದಕ್ಕಾ?' ಎಂದು ನೊಂದು ನುಡಿದ, ಸಮಸ್ತ ವೈದ್ಯರ ಪ್ರತಿನಿಧಿಯಂತೆ ತಮ್ಮ ಆತಂಕ ವ್ಯಕ್ತಪಡಿಸಿದ ಯುವವೈದ್ಯೆಯ ಮಾತು ನಿಜವಲ್ಲವೇ?

ಸ್ತ್ರೀಯರ ವಿಚಾರದಲ್ಲಿ ವ್ಯಕ್ತಿಯನ್ನು, ಊರುಗಳನ್ನೇ ದಹಿಸಿದ ಉದಾಹರಣೆಗಳು ನಮ್ಮ ರಾಮಾಯಣ, ಮಹಾಭಾರತದಂಥ ಕೃತಿಗಳಲ್ಲಿ ದಾಖಲಾಗಿವೆ. ಹೀಗಿರುವಾಗ, ಮೇಣದಬತ್ತಿ ಉರಿಸಿ ಮೆರವಣಿಗೆ ಮಾಡುವ ಸಂಸ್ಕೃತಿಯಿಂದ ನಾವು ಏನು ಬದಲಾವಣೆ ತರಲು ಸಾಧ್ಯ? ಇಂಥ ಅಮಾನವೀಯ ಘಟನೆಗಳಿಗೆ 'ಕಣ್ಣಿಗೆ ಕಣ್ಣು' ಎಂಬಂಥ, ಹಮ್ಮುರಬಿ ಶಾಸನದಷ್ಟೇ ಕಠೋರವಾಗಿರುವ ಕ್ರಮಗಳು ಜಾರಿಯಾಗಬೇಕು. ಆಗ ಮಾತ್ರವೇ ಸಮಾಜದಲ್ಲಿನ ರಾಕ್ಷಸ ಮನಸ್ಥಿತಿ ಬದಲಾದೀತು!

ಈ ಹಿಂದೆ ನಡೆದ ದಿಲ್ಲಿಯ 'ನಿರ್ಭಯಾ' ಅತ್ಯಾಚಾರ ಪ್ರಕರಣ ಇಡೀ ಜಗತ್ತನ್ನು ಬೆಚ್ಚಿಬೀಳಿಸಿದ್ದಲ್ಲದೆ, ಭಾರತೀಯ ಜನಸಾಮಾನ್ಯರು ಈ ಪ್ರಕರಣವನ್ನು ಖಂಡಿಸಿ, ಆಕ್ರೋಶದಿಂದ ಕೆರಳಿ ಬೀದಿಗಿಳಿದು ಪ್ರತಿಭಟಿಸುವಂತೆ ಮಾಡಿತ್ತು. ಡಿಸೆಂಬರ್ 16ಕ್ಕೆ ನಿರ್ಭಯಾ ಘಟನೆ ನಡೆದು 11 ವರ್ಷವಾದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಡಿಸಿಡಬ್ಲ್ಯು ಮುಖ್ಯಸ್ಥೆ ಭಾಗವಹಿಸಿ, 'ದಿಲ್ಲಿಯಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು ಹೆಚ್ಚುತ್ತಲೇ ಇವೆ. ಕ್ರೂರ ಸಾಮೂಹಿಕ ಅತ್ಯಾಚಾರ ಮತ್ತು ಹಲ್ಲೆ ಪ್ರಕರಣಗಳು ಸಾಮಾನ್ಯವಾಗಿಬಿಟ್ಟಿವೆ' ಎಂದರು.

2012ರ ಡಿಸೆಂಬರ್ 16ರಂದು ದಕ್ಷಿಣ ದಿಲ್ಲಿಯ ಬಸ್ಸಿನೊಳಗೆ, 'ನಿರ್ಭಯಾ' ಎಂದು ಕರೆಯಲ್ಪಡುವ 23 ವರ್ಷದ ಫಿಸಿಯೋಥೆರಪಿ ಇಂಟರ್ನ್ ಯುವತಿಯ ಮೇಲೆ ಆರು ಜನರು ಸೇರಿ ಕ್ರೂರ ಅತ್ಯಾಚಾರ ಮತ್ತು ಹಲ್ಲೆ ನಡೆಸಿದರಲ್ಲದೇ, ಚಲಿಸುವ ಬಸ್‌ನಿಂದ ಹೊರಗೆ ಆಕೆಯನ್ನು ಎಸೆದುಹೋದರು. ತನಗಾದ ತೀವ್ರ ಗಾಯಗಳಿಂದಾಗಿ ಡಿಸೆಂಬರ್ 29ರಂದು ಆಕೆ ಸಿಂಗಾಪುರದ ಮೌಂಟ್ ಎಲಿಜಬೆತ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದಳು.

ಈ ಘಟನೆಯ ತರುವಾಯ, ದೇಶದ ಕಾನೂನಿನಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕೆಂದು ಆಗ್ರಹಿಸಿ ಜನರು ಬೀದಿಗೆ ಬಂದರು. ಆದರೆ ಆ ದುರಂತ ನಡೆದು ವರ್ಷಗಳ ನಂತರವೂ ನಾವು ಅದೇ ಸ್ಥಳದಲ್ಲಿ ನಿಂತಿದ್ದೇವೆ. ಮಹಿಳೆಯರ ಮೇಲಿನ ಅಪರಾಧಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಅಪರಾಧಿಗಳು ಭಯಪಡುವಂತೆ ಆಗುವವರೆಗೆ ಏನೂ ಬದಲಾಗುವುದಿಲ್ಲ. ಆದರೆ ಅಂಥ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗುವುದನ್ನು ಈ ವ್ಯವಸ್ಥೆ ತಡೆಹಿಡಿಯುತ್ತದೆ, ಹಾಗಾಗಿ ಅತ್ಯಾಚಾರಿಗಳು ನಿರ್ದಾಕ್ಷಿಣ್ಯವಾಗಿ ಇಂಥ ಕೃತ್ಯಗಳನ್ನು ಮತ್ತೆ ಮತ್ತೆ ಎಸಗುತ್ತಾರೆ ಎಂಬುದಕ್ಕೆ ಕೋಲ್ಕೊತ್ತಾದ ಕರ್ತವ್ಯನಿರತ ಯುವವೈದ್ಯೆಯ ಮೇಲಾದ ಅತ್ಯಾಚಾರ ಪ್ರಕರಣವೇ ಸಾಕ್ಷಿ.

ಇಂಥ ಅಮಾನವೀಯ ಘಟನೆಗಳು ನಡೆದಾಗ, ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ವಿಷಯದಲ್ಲಿ ಖಚಿತತೆ, ತ್ವರಿತತೆ ಬೇಕು ಮತ್ತು ಅಂಥ ವಿಷಯಗಳನ್ನು ಸರಕಾರಗಳು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸ್ ಬಲದ ಜತೆಗೆ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಸಂತ್ರಸ್ತರು ನ್ಯಾಯವನ್ನು ತ್ವರಿತವಾಗಿ ಮತ್ತು ವ್ಯವಸ್ಥಿತವಾಗಿ ಪಡೆಯುವಂತಾಗುವ ಭರವಸೆಯನ್ನು ಅವರಿಗೆ ನೀಡುವ ವ್ಯವಸ್ಥೆಯ ಅಗತ್ಯವಿದೆ.

ದಿಲ್ಲಿಯ 'ನಿರ್ಭಯಾ' ಪ್ರಕರಣದ ವಿಚಾರಣೆ ಆರಂಭವಾದ ಕೆಲವೇ ದಿನಗಳಲ್ಲಿ, ಆರು ಮಂದಿ ಆರೋಪಿಗಳ ಪೈಕಿ ರಾಮ್ ಸಿಂಗ್ ಎಂಬಾತ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡರೆ, ಅಪ್ರಾಪ್ತ ಆರೋಪಿಯೊಬ್ಬ ಸುಧಾರಣಾ ಗೃಹದಲ್ಲಿ 3 ವರ್ಷ ಕಳೆದ ನಂತರ 2015ರಲ್ಲಿ ಬಿಡುಗಡೆಗೊಂಡ. ಉಳಿದ ನಾಲ್ವರಾದ ಮುಖೇಶ್ ಸಿಂಗ್ (32), ಪವನ್ ಗುಪ್ತಾ (25), ವಿನಯ್ ಶರ್ಮಾ (26) ಮತ್ತು ಅಕ್ಷಯ್ ಕುಮಾರ್ ಸಿಂಗ್ (31) ಶಿಕ್ಷೆಗೊಳಗಾದರು. 2020ರ ಮಾರ್ಚ್ 20ರಂದು ಅವರನ್ನು ತಿಹಾರ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

'ನಿರ್ಭಯಾ ಘಟನೆಯ ನಂತರ, ಕೆಲವು ಬದಲಾವಣೆಗಳನ್ನು ಮಾಡಿ ಕಠಿಣ ಕಾನೂನನ್ನು ಪರಿಚಯಿಸಲಾಯಿತು. ಅತ್ಯಾಚಾರದ ಸಂತ್ರಸ್ತೆಯ ದೂರನ್ನು ಪೊಲೀಸರು ಸ್ವೀಕರಿಸದಿದ್ದರೆ, ಅವರ ವಿರುದ್ಧವೂ ಎಫ್‌ಐಆರ್ ಅನ್ನು ದಾಖಲಿಸಬಹುದು. ಇಷ್ಟಾಗಿಯೂ 2022ರಲ್ಲಿ ದಿಲ್ಲಿಯಲ್ಲಿಯೇ ಮಹಿಳೆಯರ ವಿರುದ್ಧದ ಅಪರಾಧಗಳು ಹೆಚ್ಚಾಗಿವೆ; 2021ರಲ್ಲಿ 13,982ರಷ್ಟಿದ್ದುದು 14,158 ಪ್ರಕರಣಗಳಿಗೆ (ಅಂದರೆ 1.25 ಪ್ರತಿಶತದಷ್ಟು) ಹೆಚ್ಚಾಗಿದೆ' ಎಂದು ಎನ್‌ಸಿಆರ್‌ಬಿ ಡೇಟಾ ತಿಳಿಸಿದೆ.

ಶಾಲೆಗಳ ಪಠ್ಯಕ್ರಮದಲ್ಲಿ ಅಂಥ ವಿಷಯಗಳನ್ನು ಪರಿಚಯಿಸಬೇಕು. ಹುಡುಗರು ಮಹಿಳೆಯರಲ್ಲಿ ಹೇಗೆ ಸುರಕ್ಷಿತ ಭಾವನೆ ಮೂಡಿಸಬೇಕು ಮತ್ತು ಅವರನ್ನು ಹೇಗೆ ಗೌರವಿಸಬೇಕು ಎಂಬುದನ್ನು ಈ ಪಠ್ಯಕ್ರಮದಲ್ಲಿ ಕಲಿಸುವುದರಿಂದ ಇಂದಿನ ಯುವಕರಲ್ಲಿ, ಸಮಾಜದ ವಿಚಾರಧಾರೆಯಲ್ಲಿ ಸ್ವಲ್ಪವಾದರೂ ಬದಲಾವಣೆ ತರಬಹುದು.

ಇವೆಲ್ಲದರ ನಡುವೆ, ಇದೇ ಆಗಸ್ಟ್ 9ರಂದು, ಕೋಲ್ಕತ್ತಾದ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯೆಯೊಬ್ಬರು ಗಾಯಗೊಂಡವರಿಗೆ ಚಿಕಿತ್ಸೆ ನೀಡುವಾಗ ಭೀಕರ ಅತ್ಯಾಚಾರಕ್ಕೊಳಗಾದ ಘಟನೆ ನಡೆದಿದೆ. 36 ಗಂಟೆಗಳ ಪಾಳಿಯಲ್ಲಿದ್ದ ಆ ವೈದ್ಯೆ ನಿಗದಿತ ಡ್ಯೂಟಿ ರೂಮ್ ಇಲ್ಲದ ಕಾರಣ ವಿಶ್ರಾಂತಿ ಪಡೆಯಲು ಮಧ್ಯಾಹ್ನ 2 ಗಂಟೆ ಸುಮಾರಿಗೆ ಸೆಮಿನಾರ್ ಕೊಠಡಿಗೆ ತೆರಳಿದ್ದರು. ಆಗ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ನಂತರ ಆಕೆ ಸಾವನ್ನಪ್ಪಿದ್ದಾರೆ ಎಂದು ಪ್ರಾಥಮಿಕ ತನಿಖೆಗಳು ತಿಳಿಸಿವೆ. ಈ ಪ್ರಕರಣದಲ್ಲಿ ಪ್ರಮುಖ ಶಂಕಿತ ಸಂಜೋಯ್ ರಾಯ್ ಎಂಬಾತನನ್ನು ಕೋಲ್ಕತ್ತಾ ಪೊಲೀಸರು ಬಂಧಿಸಿದ್ದಾರೆ. ಆತ ಕೋಲ್ಕತ್ತಾ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ವಿಚಾರ, ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪೊಲೀಸ್ ಔಟ್‌ಪೋಸ್ಟ್‌ನಲ್ಲಿ ನೆಲೆಸಿದ್ದು ಎಲ್ಲಾ ಕಡೆಗೂ ಓಡಾಡಿಕೊಂಡಿದ್ದ ಎಂಬ ಮಾಹಿತಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ವೈದ್ಯೆಯನ್ನು ಕೊಲೆ ಮಾಡಿರುವ ಕೋಣೆಯೊಳಗೆ ಸಂಜೋಯ್ ರಾಯ್ ಪ್ರವೇಶಿಸಿದ ಸಿಸಿಟಿವಿ ದೃಶ್ಯಾವಳಿಯ ಆಧಾರದ ಮೇಲೆ ಆತನನ್ನು ಬಂಧಿಸಲಾಗಿದೆ. ಆಕೆಯ ಶವದ ಪಕ್ಕದಲ್ಲಿ ಬ್ಲೂಟೂತ್ ಹೆಡ್‌ಸೆಟ್ ಪತ್ತೆಯಾಗಿದ್ದು, ಸಿಸಿಟಿವಿ ದೃಶ್ಯಾವಳಿಯಲ್ಲಿ ಅದು ಆತನ ಕುತ್ತಿಗೆಯಲ್ಲಿರುವುದು ಕಂಡುಬಂದಿದೆ. ಇದು ಆತನ ಫೋನ್‌ನೊಂದಿಗೆ ಕನೆಕ್ಟ್ ಆಗಿರುವುದು ಕೂಡ ಗೊತ್ತಾಗಿದೆ. ಈ ಪ್ರಕರಣದಲ್ಲಿ ಅಪರಾಧಿಗಳನ್ನು ರಕ್ಷಿಸಲು ಪೊಲೀಸರು ಯತ್ನಿಸುತ್ತಿದ್ದಾರೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಆರೋಪಿಸಿದೆ. ಪುಂಡರ ಗುಂಪೊಂದು ಆಗಸ್ಟ್ 15ರಂದು ಆಸ್ಪತ್ರೆಯ ಮೇಲೆ ದಾಳಿ ಮಾಡಿ, ತುರ್ತುಚಿಕಿತ್ಸಾ ವಿಭಾಗವನ್ನು ಧ್ವಂಸಗೊಳಿಸಿ, ಸಾಕ್ಷ್ಯವನ್ನು ನಾಶಪಡಿಸುವ ಮತ್ತೊಂದು ಪ್ರಯತ್ನ ಮಾಡಿದ್ದು, ಇದು ರಾಜ್ಯದ ಆಡಳಿತದ ಸ್ಪಷ್ಟ ವೈಫಲ್ಯ ಎಂದು ಅಲ್ಲಿನ ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಈ ಮಧ್ಯೆ, 2012ರ ದಿಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆ 'ನಿರ್ಭಯಾ'ಳ ತಾಯಿ ಆಶಾದೇವಿ ಅವರು ಮಮತಾ ಬ್ಯಾನರ್ಜಿ ಅವರ ರಾಜೀನಾಮೆಗೆ ಆಗ್ರಹಿಸಿ, 'ಕೋಲ್ಕತ್ತಾದ ಆಸ್ಪತ್ರೆಯಲ್ಲಿ ಟ್ರೇನಿ ವೈದ್ಯೆಯ ಮೇಲಿನ ಕ್ರೂರ ಅತ್ಯಾಚಾರ ಮತ್ತು ಹತ್ಯೆಯ ವಿರುದ್ಧ ಪ್ರತಿಭಟನೆಗಳು ಭುಗಿಲೆದ್ದಾಗ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ದೀದಿ ವಿಫಲರಾಗಿದ್ದಾರೆ. ದಿಲ್ಲಿ ಪ್ರಕರಣದಲ್ಲಿ ಅಪರಾಧಿಗಳಿಗೆ ಗಲ್ಲುಶಿಕ್ಷೆಯಾಗಬೇಕು ಎಂದು ಮಮತಾ ಬ್ಯಾನರ್ಜಿ ಹಿಂದೆ ರ‍್ಯಾಲಿ ನಡೆಸಿದ್ದರು. ಈಗ, ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಗ್ಯ ಮತ್ತು ಗೃಹಖಾತೆಗಳೆರಡನ್ನೂ ಮಮತಾ ತಮ್ಮ ಅಧೀನದಲ್ಲೇ ಇಟ್ಟುಕೊಂಡು, ತಮ್ಮ ವಿರುದ್ಧವೇ ಪ್ರತಿಭಟನೆ ನಡೆಸುತ್ತಿರುವುದು ಮಾತ್ರ ಪ್ರಸ್ತುತ ವ್ಯವಸ್ಥೆಯ ವಿಡಂಬನೆ. ಮೇಲಾಗಿ ಮಮತಾಗೆ ನಾಚಿಕೆಯಾಗಬೇಕು' ಎಂದಿದ್ದಾರೆ.

ಕೋಲ್ಕತ್ತಾದ ಘೋರಕೃತ್ಯವು ದೇಶಾದ್ಯಂತ ತೀವ್ರ ಪ್ರತಿಭಟನೆಗೆ ಕಾರಣವಾಗಿ, ಮಹಿಳೆಯರ ಸುರಕ್ಷತೆ ಬಗ್ಗೆ ಪ್ರಶ್ನೆಗಳು ಎದ್ದಿರುವುದರ ನಡುವೆಯೇ, ಬೆಂಗಳೂರಿನಲ್ಲೂ ಮೊನ್ನೆ ರಾತ್ರಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ನಡೆದಿದೆ; ಇದು ಕಾನೂನು-ಸುವ್ಯವಸ್ಥೆ ಹದಗೆಟ್ಟಿರುವುದರ ಮತ್ತು ರೌಡಿ-ಗೂಂಡಾಗಳಿಗೆ, ಅತ್ಯಾಚಾರಿಗಳಿಗೆ ಆಡಳಿತದ ಭಯವಿಲ್ಲದಿರುವುದರ, ಕಾನೂನಿನ ಬಿಸಿ ತಾಗದಿರುವುದರ ದ್ಯೋತಕ. ಸರಕಾರವು ಇದಕ್ಕೆ ತಲೆ ತಗ್ಗಿಸಬೇಕಿದೆ. ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಅನ್ಯರಾಜ್ಯದ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಲಾಗಿದೆ. ತೀವ್ರವಾಗಿ ಅಸ್ವಸ್ಥಗೊಂಡಿರುವ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿ ಐಸಿಯು ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅತ್ಯಾಚಾರ ಪ್ರಕರಣದ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಆರೋಪಿಯ ಸುಳಿವು ಪತ್ತೆಯಾಗಿದೆ ಮತ್ತು ಆತನ ಬಂಧನಕ್ಕೆ 5 ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಂಥ ದುರ್ಘಟನೆಗಳು ನಡೆಯುವ ಮೊದಲೇ ಸಾರ್ವಜನಿಕರ ಸುರಕ್ಷತೆಯ ವಿಚಾರದಲ್ಲಿ ಎಚ್ಚರಿಕೆ ವಹಿಸಿದರೆ, ಜನರಿಗೆ ಕಾನೂನು ವ್ಯವಸ್ಥೆ ಮತ್ತು ಸರಕಾರದ ಮೇಲೆ ವಿಶ್ವಾಸ ಬಂದೀತು. ಆದರೆ, ಜನರ ಸೇವೆಗೆ ಬದ್ಧವಾಗಿರಬೇಕಾದ ಸರಕಾರವು ತನ್ನನ್ನೇ ಕಾಪಾಡಿಕೊಳ್ಳಲು ಹೆಣಗುತ್ತಿರುವಾಗ, ಜನರನ್ನು ಹೇಗೆ ಕಾಪಾಡಬಲ್ಲದು ಎಂದು ರಾಜ್ಯದ ಜನರು ಕುಹಕವಾಡುತ್ತಿದ್ದಾರೆ.



ನಾರದ ಸಂಚಾರ
ಕಲಹಪ್ರಿಯ
naadigru@gmail.com

ವಾಹನ ಸವಾರರಿಗೆ 'ಗುಂಡಿಭಾಗ್ಯ'

ಸಿಲಿಕಾನ್ ಸಿಟಿ, ಉದ್ಯಾನನಗರಿ ಎಂದೆಲ್ಲಾ ಕರೆಸಿಕೊಳ್ಳುವ ಬೆಂಗಳೂರಿನ ಪರಿಸ್ಥಿತಿಯು ಮಳೆಗಾಲದಲ್ಲಿ ಎಷ್ಟೊಂದು ಬಿಗಡಾಯಿಸುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಭಾರಿ ಮಳೆಯಾದಾಗ, ಈ ಮಹಾನಗರಿಯ ವಿವಿಧೆಡೆಗಳಲ್ಲಿ ರೂಪಿಸಲಾಗಿರುವ ಅಂಡರ್‌ಪಾಸ್‌ಗಳ ಪೈಕಿ ಕೆಲವದರಲ್ಲಿ ಆಳುದ್ದದ ನೀರು ಜಮೆಯಾಗುವುದು, ಅದರಲ್ಲಿ ವಾಹನ ಸವಾರರು ಸಿಕ್ಕಿಕೊಂಡು ಪಡಿಪಾಟಲು ಪಡುವುದು ಇದಕ್ಕೊಂದು ಉದಾಹರಣೆ. ಇಷ್ಟು ಸಾಲದೆಂಬಂತೆ ರಸ್ತೆಗಳಲ್ಲಿ ಮುಖಕ್ಕೆ ರಾಚುವಂತೆ ರೂಪುಗೊಂಡಿರುವ ಗುಂಡಿಗಳೂ ಅವರನ್ನು ಸಾಕಷ್ಟು ಹೈರಾಣು ಮಾಡುವುದಿದೆ. 'ರಸ್ತೆಗಳಲ್ಲಿ ಗುಂಡಿಗಳಿವೆಯೋ ಅಥವಾ ಗುಂಡಿಗಳ ನಡುವೆ ರಸ್ತೆಯನ್ನು ರೂಪಿಸಲಾಗಿದೆಯೋ?' ಎಂದು ಅವರು ಗೊಣಗಿಕೊಳ್ಳುವಷ್ಟರ ಮಟ್ಟಿಗೆ ಮಹಾನಗರಿಯಲ್ಲಿ ಗುಂಡಿಗಳ ಸಾಮ್ರಾಜ್ಯವಿದೆ. ಲಭ್ಯ ಅಂಕಿ-ಅಂಶಗಳ ಪ್ರಕಾರ, ಈವರೆಗೆ ಒಟ್ಟು 2,302 ರಸ್ತೆಗುಂಡಿಗಳು ಪತ್ತೆಯಾಗಿದ್ದು, ಈ ಪೈಕಿ 155 ಗುಂಡಿಗಳನ್ನು ಮಾತ್ರ ಮುಚ್ಚಲಾಗಿದೆಯಂತೆ. ಮಳೆ ನಿಂತ ಕೂಡಲೇ ಗುಂಡಿ ಮುಚ್ಚುವ ಕಾರ್ಯವನ್ನು ಆರಂಭಿಸಲಾಗುತ್ತದೆ ಎಂಬುದು ತ್ರಿಲೋಕ ಸಂಚಾರಿ ನಾರದರಿಗೆ ದಕ್ಕಿರುವ ಸುದ್ದಿ. ಅಲ್ಲಿಯವರೆಗೂ ವಾಹನ ಸವಾರಿಗರು ಈ 'ಗುಂಡಿಭಾಗ್ಯ'ದ ಫಲಾನುಭವಿಗಳಾಗೇ ಮುಂದುವರಿಯಬೇಕು, ವಿಧಿಯಿಲ್ಲ!

ಬಚ್ಚಿಡುವ ಬದಲು ಕಚ್ಚುವುದೇ?

ರಮೇಶ್ ಅಭಿನಯದ 'ಸೌಂದರ್ಯ' ಚಿತ್ರದ 'ಹೃದಯದ ಮಾತು ಕೇಳು ಕೇಳು ನನ್ನ ಒಲವೇ' ಎಂಬ ಗೀತೆಯನ್ನು ನೀವು ಕೇಳಿದ್ದೀರಿ, ವೀಕ್ಷಿಸಿದ್ದೀರಿ. ಅದರಲ್ಲಿ, 'ನಿನ್ನ ಚಿವುಟು ಎನ್ನುತಿದೆ ನನ್ನ ಬುದ್ಧಿ, ಅಯ್ಯೋ ಹೂವು ಬೇಡೆಂದಿದೆ ಈ ಹೃದಯ; ಕಚ್ಚಿ ತಿನ್ನು ಎನ್ನುತಿದೆ ನನ್ನ ಹಸಿವು, ಬೇಡ ಮುಚ್ಚಿ ಬಚ್ಚಿಡು ಎಂದಿದೆ ಹೃದಯ' ಎಂಬ ಸಾಲು ಬರುತ್ತದೆ. ಅಂದರೆ, ಬುದ್ಧಿ ಬಯಸಿದ್ದನ್ನು ಹೃದಯ ನಯವಾಗಿ ನಿರಾಕರಿಸಿ, ಬೇರೊಂದು 'ನವಿರುಮಾರ್ಗ'ವನ್ನು ತೋರಿದ್ದನ್ನು ಕಥಾನಾಯಕ ರಮೇಶ್ ಹೀಗೆ ಹಾಡಿಕೊಂಡಿದ್ದಾರೆ. ಆದರೆ ಬೆಂಗಳೂರು ಮಹಾನಗರಿಯ ಆಸಾಮಿಯೊಬ್ಬ ಇಂಥ ಬುದ್ಧಿವಾದ ಕೇಳಿಸಿಕೊಳ್ಳುವ ಗೋಜಿಗೇ ಹೋಗದೆ, ತನಗನ್ನಿಸಿದ್ದನ್ನು ಮಾಡಿದ ಘಟನೆ ವರದಿಯಾಗಿದೆ. ಬೆಟ್ಟದಾಸನಪುರದ ಸಾಯಿ ಸ್ಪೆಷಾಲಿಟಿ ಆಸ್ಪತ್ರೆಗೆ ಬಂದಿದ್ದ ಮಾದಕವಸ್ತುವಿನ ವ್ಯಸನಿಯೊಬ್ಬ ಅಲ್ಲಿನ ವೈದ್ಯರ ಮೇಲೆ ಏಕಾಏಕಿ ದಾಳಿ ಮಾಡಿ ಕಚ್ಚಿ, ನರ್ಸ್‌ಗಳ ಮೇಲೂ ಹಲ್ಲೆ ಮಾಡಿದನಂತೆ! ಇದಕ್ಕೂ ಮುನ್ನ ಅವನು ಹಾದಿಬೀದಿಯಲ್ಲಿ ಹೋಗುತ್ತಿದ್ದವರ ಮೇಲೆಲ್ಲಾ ಇದೇ ಚೇಷ್ಟೆ ಮಾಡುತ್ತಿದ್ದುದರಿಂದ ಸಾರ್ವಜನಿಕರು ಅವನನ್ನು ಎತ್ತಾಕಿಕೊಂಡು ಆಸ್ಪತ್ರೆಗೆ ಕರೆತಂದಿದ್ದರಂತೆ. ಆದರೆ ಅಲ್ಲೂ ಆತ ಹೀಗೆ ತನ್ನ ಚೇಷ್ಟೆ ಮುಂದುವರಿಸಿದ್ದರಿಂದ, ವೈದ್ಯರ ಮಾಹಿತಿಯ ಮೇರೆಗೆ ಸ್ಥಳಕ್ಕಾಗಮಿಸಿದ ಪೊಲೀಸರು ಅವನನ್ನು ಎತ್ತಾಕಿ ಕೊಂಡು ಹೋಗಿ ವಿಚಾರಣೆ ನಡೆಸುತ್ತಿದ್ದಾರಂತೆ! ನಶೆ ಅನ್ನೋದು ಏನೆಲ್ಲಾ ಕೆಲಸ ಮಾಡಿಸುತ್ತೆ, ಅಲ್ವಾ?

ನಾರಾಯಣ ನಾರಾಯಣ!

ಕೇಂದ್ರ ಸರಕಾರದ ಆಯಕಟ್ಟಿನ ಹುದ್ದೆಗಳಿಗೆ 'ಲ್ಯಾಟರಲ್ ಎಂಟ್ರಿ' ಮೂಲಕ ಅರ್ಹರನ್ನು ನೇರ ನೇಮಕ ಮಾಡಿಕೊಳ್ಳುವ ಕಸರತ್ತಿಗೆ ಬ್ರೇಕ್ ಬಿದ್ದಿದೆ. ಈ ಉಪಕ್ರಮವು ಮೀಸಲಾತಿ ನಿಯಮವನ್ನು ಧಿಕ್ಕರಿಸಲು ಹೊರಟಿದೆ ಎಂಬ ವಿಪಕ್ಷಗಳ ಹುಯಿಲೇ ಇದಕ್ಕೆ ಕಾರಣ ಎಂಬುದು ಗಮನಾರ್ಹ. 'ಲ್ಯಾಟರಲ್' ಎಂಬ ಪದಕ್ಕೆ- 'ಪಕ್ಕಕ್ಕಿರುವ', 'ಪಕ್ಕದ', 'ಪಾರ್ಶ್ವದ' ಎಂಬೆಲ್ಲಾ ಅರ್ಥಗಳಿವೆ. 'ಲ್ಯಾಟರಲ್ ಎಂಟ್ರಿ' ಮೂಲಕ ಹೀಗೆ ನೇಮಕಾತಿಗೆ ಮುಂದಾಗುವಾಗ, ಈ ಉಪಕ್ರಮಕ್ಕೆ ಹೀಗೊಂದು 'ಪಾರ್ಶ್ವ' ಪರಿಣಾಮವೂ ಒದಗುತ್ತದೆ ಎಂಬುದು ಅದರ ನೇಪಥ್ಯದಲ್ಲಿರುವ 'ಚಿಂತನ-ಚಿಲುಮೆ'ಗಳಿಗೆ ಪ್ರಾಯಶಃ ಗೊತ್ತಿರಲಿಲ್ಲವೇನೋ?!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 241

ಸಮಾಚಾರ ಸಣ್ಣದಲ್ಲ

ರಾಮಮಾಧವ್, ರೆಡ್ಡಿಗೆ ಚುನಾವಣೆ ಹೊಣೆ

ದೆಹಲಿ: ಮುಂಬರುವ ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಗೆ ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮಮಾಧವ್ ಮತ್ತು ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ನೇಮಕ ಆದೇಶ ಹೊರಡಿಸಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹೇಳಿದ್ದಾರೆ.

ಆಂಧ್ರ ಔಷಧ ಕಂಪನಿ ಸ್ಫೋಟ:13 ಮಂದಿ ಸಾವು

ಅನಕಪಲ್ಲಿ: ಆಂಧ್ರಪ್ರದೇಶದ ಅನಕಪಲ್ಲಿಯಲ್ಲಿರುವ ಪ್ರತಿಷ್ಠಿತ ಔಷಧ ಕಂಪನಿಯಲ್ಲಿ ಬುಧವಾರ ಸ್ಫೋಟ ಸಂಭವಿಸಿ 13 ಮಂದಿ ಸಾವನ್ನಪ್ಪಿದ್ದಾರೆ. 30 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಚ್ಚುತ್ತಪುರಂ ವಿಶೇಷ ಆರ್ಥಿಕ ವಲಯಲ್ಲಿರುವ 'ಎಸೆನ್ಷಿಯ' ಕಂಪನಿಯಲ್ಲಿ ಊಟದ ವೇಳೆ ಸ್ಫೋಟವಾಗಿದೆ. ಊಟ ಮಾಡುತ್ತಿದ್ದವರಲ್ಲಿ 13 ಮಂದಿ ಸುಟ್ಟು ಕರಕಲಾಗಿದ್ದಾರೆ. ಆದರೆ, ಸ್ಫೋಟಕ್ಕೆ ಕಾರಣ ತಿಳಿದುಬಂದಿಲ್ಲ. ರಿಯಾಕ್ಟರ್‌ನಿಂದ ಹೊಗೆ ಬರುತ್ತಿರುವುದು ಕಂಡುಬಂದಿದೆ. ಸುತ್ತಲಿನ ಹಳ್ಳಿಗಳನ್ನು ಹೊಗೆ ಆವರಿಸಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ, ಎಸ್‌ಪಿ ದೌಡಾಯಿಸಿ ಪರಿಸ್ಥಿತಿ ಅವಲೋಕಿಸಿದ್ದಾರೆ. ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆದಿದೆ.

ಬಸ್ ಪಲ್ಟಿ : 35 ಪಾಕ್ ಯಾತ್ರಿಕರ ಸಾವು

ಯಾಜ್ದಾ: ಪಾಕಿಸ್ತಾನದಿಂದ ಇರಾಕ್‌ಗೆ ಸಾಗುತ್ತಿದ್ದ ಬಸ್ ಇರಾನ್‌ನಲ್ಲಿ ಅಪಘಾತಕ್ಕೀಡಾಗಿದ್ದು, 35 ಪ್ರಯಾಣಿಕರು ಸಾವಿ ಗೀಡಾಗಿದ್ದಾರೆ. 18 ಮಂದಿ ಗಾಯಗೊಂಡಿದ್ದಾರೆ. ಗಾಯಾಳು ಗಳನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ. 7 ಜನರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪಾಕಿಸ್ತಾನದ 'ಡಾನ್ ನ್ಯೂಸ್' ಬುಧವಾರ ವರದಿ ಪ್ರಕಟಿಸಿದೆ. ಪಾಕ್‌ನಿಂದ ಇರಾಕ್‌ಗೆ ಯಾತ್ರಾರ್ಥಿ ಗಳನ್ನು ಕರೆದೊಯ್ಯುತ್ತಿದ್ದ ಬಸ್ ಇರಾ ನಿನ ಯಾಜ್ದಾ ಪ್ರಾಂತ್ಯದಲ್ಲಿ ಮಂಗಳವಾರ ರಾತ್ರಿ ಪಲ್ಟಿಯಾಗಿದೆ. ಬಸ್‌ನಲ್ಲಿ 53 ಶಿಯಾ ಯಾತ್ರಿಕರು ಇದ್ದರು. ಹೆಚ್ಚಿನವರು ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಲರ್ಕಾನಾ ನಗರದವರು. ಎಲ್ಲರೂ ಇರಾನ್‌ನ ಪವಿತ್ರ ನಗರ ಕರ್ಬಲಾಕ್ಕೆ ತೆರಳಿದ್ದರು ಎಂದು ಇರಾನ್ ಸರಕಾರಿ ಸುದ್ದಿಸಂಸ್ಥೆ ವರದಿ ಮಾಡಿದೆ. ಬಸ್ ಬ್ರೇಕ್ ಸರಿಯಾಗಿ ಹಾಕದಿರುವುದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಇಮಾಮ್ ಹುಸೇನ್ ಅವರು ಹುತಾತ್ಮರಾದ 40ನೇ ದಿನದ ಸ್ಮರಣಾರ್ಥ ಅರ್ಬೈನ್ ಆಚರಣೆಗಾಗಿ ಲಕ್ಷಾಂತರ ಶಿಯಾಗಳು ಪ್ರತಿ ವರ್ಷ ಕರ್ಬಲಾಕ್ಕೆ ಭೇಟಿ ನೀಡುತ್ತಾರೆ.

ಲೈಂಗಿಕ ಕಿರುಕುಳ ಎನ್‌ಸಿಡಬ್ಲ್ಯು ಪ್ರಕರಣ

ಚೆನ್ನೈ: ಕೃಷ್ಣಗಿರಿ ಜಿಲ್ಲೆಯಲ್ಲಿನ ಶಾಲೆಯ ಶಿಕ್ಷಕರು ಸೃಷ್ಟಿಸಿದ ನಕಲಿ ಎನ್‌ಸಿಸಿ ಕ್ಯಾಂಪ್ ಹಗರಣದಲ್ಲಿ ಬಾಲಕಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಘಟನೆಗೆ ಕಿಡಿಕಾರಿರುವ ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. ನಿಷ್ಪಕ್ಷಪಾತ, ತ್ವರಿತ ತನಿಖೆ ಕೈಗೊಳ್ಳುವಂತೆ ಚೆನ್ನೈ ಪೊಲೀಸರಿಗೆ ಸೂಚಿಸಿದೆ. ಎನ್‌ಸಿಸಿ ಹೆಸರಲ್ಲಿ ನಕಲಿ ಕ್ಯಾಂಪ್ ಆಯೋಜಿಸಿ 13 ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ. ಘಟನೆ ಕುರಿತು ತನಿಖೆಗೆ ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ತನಿಖೆಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದ್ದಾರೆ. ಐಪಿಎಸ್ ಅಧಿಕಾರಿ ಕೆ.ಭವಾನೀಶ್ವರಿ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿದೆ. 60 ದಿನಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಪ್ರಕರಣ ಸಂಬಂಧ ಪ್ರಾಂಶುಪಾಲ, ಇಬ್ಬರು ಶಿಕ್ಷಕರು, ಒಬ್ಬ ಜನಪ್ರತಿನಿಧಿ ಸೇರಿದಂತೆ ಒಟ್ಟು 11 ಮಂದಿಯನ್ನು ಬಂಧಿಸಲಾಗಿದೆ.

4 ವರ್ಷದ ಮಕ್ಕಳಿಗೆ ಲೈಂಗಿಕ ಕಿರುಕುಳ | ಆರೋಪಿ ಪರ ವಾದಕ್ಕೆ ವಕೀಲರ ನಕಾರ | ಬದ್ಲಾಪುರ ಪ್ರತಿಭಟನೆ-70 ಜನರ ಸೆರೆ

ಬದ್ಲಾಪುರ ಆಕ್ರೋಶ: 24ಕ್ಕೆ ಮಹಾರಾಷ್ಟ್ರ ಬಂದ್

ಬದ್ಲಾಪುರ: ಮಹಾರಾಷ್ಟ್ರದ ಬದ್ಲಾಪುರದಲ್ಲಿ ಪ್ರತಿಷ್ಠಿತ ಶಾಲೆಯ ನರ್ಸರಿ ವಿಭಾಗದ ಇಬ್ಬರು 4 ವರ್ಷದ ಹೆಣ್ಣು ಮಕ್ಕಳ ಮೇಲೆ ಸ್ವಚ್ಛತಾ ಸಿಬ್ಬಂದಿಯೊಬ್ಬ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣ ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆ ನಡೆಯುತ್ತಿದ್ದು, ಆ.24ರ ಶನಿವಾರ ರಾಜ್ಯ ಬಂದ್‌ಗೆ ಕರೆ ನೀಡಲಾಗಿದೆ.

ಮಹಿಳೆಯರ ಸುರಕ್ಷತೆಗೆ ಆಗ್ರಹಿಸಿ ಮಹಾ ವಿಕಾಸ್ ಅಘಾಡಿ ಮಹಾರಾಷ್ಟ್ರ ಬಂದ್‌ಗೆ ಕರೆ ನೀಡಿದೆ. ವಿಧಾನಸಭೆ ಚುನಾವಣೆ ಸೀಟು ಹಂಚಿಕೆ ವಿಚಾರವಾಗಿ ಸಭೆ ನಡೆಸಿದ್ದ 'ಮಹಾ ವಿಕಾಸ್ ಅಘಾಡಿ' ಬದ್ಲಾಪುರದ ಲೈಂಗಿಕ ಕಿರುಕುಳ ವಿಚಾರವಾಗಿ ಗಂಭೀರ ಚರ್ಚೆ ನಡೆಸಿ ಹೋರಾಟಕ್ಕೆ ಕರೆ ನೀಡಿದೆ. ರಾಜ್ಯದಲ್ಲಿ ಕಾನೂನು- ಸುವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಮಹಿಳೆಯರು, ಪುಟ್ಟ ಹೆಣ್ಣು ಮಕ್ಕಳಿಗೂ ರಕ್ಷಣೆ ಇಲ್ಲದಂತಾಗಿದೆ ಎಂದು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. ಅದೇ ಕಾರಣವಾಗಿ ರಾಜ್ಯ ಬಂದ್‌ಗೆ ಕರೆ ನೀಡಿದೆ. ಕಾಂಗ್ರೆಸ್, ಶಿವಸೇನೆ(ಉದ್ಧವ್ ಬಣ) ಮತ್ತು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಶರದ್ ಬಣ) ಒಕ್ಕೂಟದ 'ಮಹಾ ವಿಕಾಸ್ ಅಘಾಡಿ' ಪುಟ್ಟ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಖಂಡಿಸಿ ಆ.24 ರಂದು ಮಹಾರಾಷ್ಟ್ರ ಬಂದ್‌ಗೆ ಕರೆ ನೀಡಿದೆ. ಮಹಾರಾಷ್ಟ್ರದ ದಾದರ್ ಸೇರಿ ಹಲವೆಡೆ ಮೂರೂ ಪಕ್ಷಗಳ ನಾಯಕರು ಎನ್‌ಡಿಎ ಸರಕಾರದ ವಿರುದ್ಧ ಪ್ರತಿಭಟನೆಗಿಳಿದಿದ್ದಾರೆ. ಮುಗ್ಧ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಸುದ್ದಿ ತಿಳಿದು ಇಡೀ ರಾಜ್ಯ ಕ್ರುದ್ಧವಾಗಿದ್ದು, ಜನತೆ ಗಲ್ಲು ಶಿಕ್ಷೆಗೆ ಆಗ್ರಹಿಸಿದ್ದಾರೆ. ರಾಜ್ಯದೆಲ್ಲೆಡೆ ಮೂರು ದಿನಗಳಿಂದ ಭಾರಿ ಪ್ರತಿಭಟನೆ ನಡೆಯುತ್ತಿದೆ. ಬುಧವಾರವೂ ಅನೇಕ ಸಂಘಟನೆಗಳು, ರಾಜಕೀಯ ನಾಯಕರು ಕೂಡ ಪ್ರತಿಭಟನೆಗೆ ಕೈಜೋಡಿಸಿದ್ದಾರೆ.

ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್!

ಬದ್ಲಾಪುರ ರೈಲ್ವೆ ನಿಲ್ದಾಣದಲ್ಲಿ ಮಂಗಳವಾರ ರೈಲು ನಡೆದು 10 ಗಂಟೆಗಳ ಕಾಲ ಪ್ರತಿಭಟನೆ ನಡೆಸಲಾಗಿದೆ. 2 ಸಾವಿರಕ್ಕೂ ಅಧಿಕ ಪ್ರತಿಭನಟಾಕಾರರು ಪೊಲೀಸ್ ಲಾಠಿ ಚಾರ್ಜ್ ನಡುವೆಯೂ ಪ್ರತಿಭಟನೆ ನಡೆಸಿದ್ದಾರೆ. ಕಲ್ಲು ತೂರಾಟ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆರೋಪಿಗೆ ಕಠಿಣಾತಿಕಠಿಣ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಆದರೆ, ಪೊಲೀಸರು ಪ್ರತಿಭಟನೆ ನಡೆಸಿದ 70 ಜನರನ್ನು ಬಂಧಿಸಿ, 200-300 ಪ್ರತಿಭಟನಾಕಾರರ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ. ಪ್ರತಿಭಟನಾಕಾರರು 10 ಗಂಟೆಗಳ ಕಾಲ ರೈಲು ಹಳಿಗಳ ಮೇಲೆಯೇ ಕುಳಿತಿದ್ದರಿಂದ ಬದ್ಲಾಪುರ ಮಾರ್ಗದ ರೈಲ್ವೆ ಸಂಚಾರ ಪೂರ್ಣ ಸ್ಥಗಿತವಾಗಿತ್ತು.

ದೇಶದಲ್ಲೆಲ್ಲೂ ಅತ್ಯಾಚಾರದ್ದೇ ಸುದ್ದಿ

- **ಆಗಸ್ಟ್ 9 :** ಕೋಲ್ಕತ್ತದ ಆರ್ ಜಿಕರ್ ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಮೇಲೆ ಅತ್ಯಾಚಾರ, ಕೊಲೆ
- **ಆಗಸ್ಟ್ 11 :** ಬಿಹಾರದ ಮುಜಾಫರ್‌ಪುರ್‌ನಲ್ಲಿ 14 ವರ್ಷದ ದಲಿತ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ
- **ಆಗಸ್ಟ್ 14 :** ಮಹಾರಾಷ್ಟ್ರದ ಬದ್ಲಾಪುರದಲ್ಲಿ 4 ವರ್ಷದ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ
- **ಆಗಸ್ಟ್ 17 :** ಉತ್ತರಪ್ರದೇಶದ ಮೊರಾದಾಬಾದ್‌ನ ಆಸ್ಪತ್ರೆಯಲ್ಲಿ ನರ್ಸ್ ಮೇಲೆ ವೈದ್ಯನಿಂದ ಅತ್ಯಾಚಾರ
- **ಆಗಸ್ಟ್ 19 :** ತಮಿಳುನಾಡು ಕೃಷ್ಣಗಿರಿಯ ಶಾಲೆಯಲ್ಲಿ 13 ವಿದ್ಯಾರ್ಥಿಯರಿಗೆ ಲೈಂಗಿಕ ಕಿರುಕುಳ
- **ಆಗಸ್ಟ್ 19 :** ಛತ್ತೀಸ್‌ಗಢದಲ್ಲಿ ಬುಡಕಟ್ಟು ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ಆರೋಪಿ ಪರ ವಾದಿಸಲು ನಕಾರ

ನರ್ಸರಿ ಶಾಲೆಯಲ್ಲೆ ಇಬ್ಬರು ಪುಟ್ಟ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಿ ಪರ ವಾದಿಸಲು ಮಹಾರಾಷ್ಟ್ರ ರಾಜ್ಯದ ವಕೀಲರ ಸಮೂಹ ನಿರಾಕರಿಸಿದೆ. '4 ವರ್ಷದ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಕಾಮುಕನ ಪರ ವಾದಿಸಲು ನಾವು ಸಿದ್ಧರಿಲ್ಲ' ಎಂದು ಮಹಾರಾಷ್ಟ್ರ ವಕೀಲರ ಸಂಘ ಹೇಳಿದೆ. ಕೋಲ್ಕತ್ತ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ವಿಚಾರಣೆ ನಡೆಸಿದಂತೆ ಬಾಂಬೆ ಹೈಕೋರ್ಟ್ ಕೂಡ ಬದ್ಲಾಪುರದಲ್ಲಿನ ಪುಟ್ಟ ಮಕ್ಕಳಿಬ್ಬರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಬೇಕು ಎಂದು ವಕೀಲರು ಆಗ್ರಹಿಸಿದ್ದಾರೆ. ಮಹಾರಾಷ್ಟ್ರ ಸರಕಾರ ಪ್ರಕರಣದಲ್ಲಿ ಸರಕಾರದ ಪರ ವಾದಿಸಲು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಹಿರಿಯ ವಕೀಲ ಉಜ್ವಲ್ ನಿಕಮ್ ಅವರನ್ನು ನೇಮಕ ಮಾಡಿದೆ.

ಆರೋಪಿ ಅಕ್ಷಯ್ ಶಿಂದೆ

ಬದ್ಲಾಪುರದ ಶಾಲೆಯಲ್ಲಿ 4 ವರ್ಷದ ಇಬ್ಬರು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಆರೋಪಿಯನ್ನು ಅಕ್ಷಯ್ ಶಿಂದೆ (24)ಎಂದು ಗುರುತಿಸಲಾಗಿದೆ. ಸ್ವಚ್ಛತಾ ಕಾರ್ಮಿಕನಾಗಿ ಆಗಸ್ಟ್ 1 ರಂದು ಗುತ್ತಿದೆ ಆಧಾರದ ಮೇಲೆ ಕೆಲಸಕ್ಕೆ ಸೇರಿದ್ದ ಈತ ಮಕ್ಕಳನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಸದ್ಯ ಈತನನ್ನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಎಫ್‌ಐಆರ್ ದಾಖಲು ವಿಳಂಬವೇಕೆ?

ಲೈಂಗಿಕ ಕಿರುಕುಳ ಘಟನೆ ವಿರುದ್ಧ ಪ್ರತಿಭಟನೆ ನಡೆಸಿದವರನ್ನು ತಕ್ಷಣವೇ ಬಂಧಿಸಲಾಗಿದೆ. ಆದರೆ ಪುಟ್ಟ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿ ಸಲು 12 ಗಂಟೆ ವಿಳಂಬ ಮಾಡಲಾಗಿದೆ ಎಂದು ಪ್ರತಿಪಕ್ಷಗಳು 'ಎನ್‌ಡಿಎ' ಸರಕಾರದ ವಿರುದ್ಧ ಕಿಡಿಕಾರಿವೆ. ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಮಹಾವಿಕಾಸ್ ಅಘಾಡಿ ನಾಯಕರು, ಮಕ್ಕಳ ಮೇಲಿನ ಲೈಂಗಿನ ದೌರ್ಜನ್ಯ ವಿರುದ್ಧ ದೂರು ನೀಡಲು ಬಂದ ಪೋಷಕರನ್ನು ಠಾಣೆಯಲ್ಲೇ 12 ಗಂಟೆ ಕಾಯುವಂತೆ ಮಾಡಲಾಗಿದೆ. ಲೈಂಗಿಕ ಕಿರುಕುಳಕ್ಕೆ ಒಳಗಾದ ಪುಟ್ಟ ಮಕ್ಕಳ ವೈದ್ಯಕೀಯ ತಪಾಸಣೆಗೆ 10 ಗಂಟೆ ವಿಳಂಬ ಮಾಡಲಾಗಿದೆ. ರಾಜ್ಯದಲ್ಲಿ ಮಹಿಳೆಯರಷ್ಟೇ ಅಲ್ಲ, 4 ವರ್ಷದ ಪುಟ್ಟ ಹೆಣ್ಣುಮಕ್ಕಳಿಗೆ ಭದ್ರತೆ ಇಲ್ಲವಾಗಿದೆ. ರಾಜ್ಯ ಸರಕಾರ ಕಾನೂನು- ಸುವ್ಯವಸ್ಥೆಯಲ್ಲಿ ಪೂರ್ಣ ಸೋತಿದೆ ಎಂದು ಆರೋಪಿಸಿದ್ದಾರೆ.

ಇಂಥ ಹೀನ ಕೃತ್ಯ ಮಾಡಿದವನಿಗೆ

ಗಲ್ಲು ಶಿಕ್ಷೆ ನೀಡಬೇಕು. ಆಗ ಬೇರೆ ಯಾರೂ ಇಂತಹ ಹೀನ ಕೃತ್ಯಕ್ಕೆ ಮುಂದಾಗುವುದಿಲ್ಲ ಎಂದು ಎನ್‌ಸಿಪಿ(ಶರದ್ ಬಣ) ನಾಯಕ ಅನಿಲ್ ದೇಶ್‌ಮುಖ್ ಆಗ್ರಹಿಸಿದ್ದಾರೆ. ರಾಜಕೀಯ ಪ್ರೇರಿತ: ಈಗ ರಾಜ್ಯದಲ್ಲಿ ನಡೆದಿರುವ ಪ್ರತಿಭಟನೆ ರಾಜಕೀಯ ಪ್ರೇರಿತವಾಗಿದೆ. ರಾಜ್ಯ ಸರಕಾರವನ್ನು ದೂಷಿಸಲೆಂದೇ ಪ್ರತಿಭಟನೆ ನಡೆಸಲಾಗುತ್ತಿದೆ. ಪ್ರತಿಭಟನಾಕಾರರು ರಾಜ್ಯದ ಹೊರಗಿನಿಂದ ಬಂದವರು. ಗಂಭೀರ ಪ್ರಕರಣದಲ್ಲೂ ರಾಜಕೀಯ ಮಾಡಲು ನಾಚಿಕೆಯಾಗಬೇಕು ಎಂದು ಸಿಎಂ ಏಕನಾಥ ಶಿಂದೆ ಪ್ರತಿಪಕ್ಷಗಳ ಮೇಲೆ ಕಿಡಿಕಾರಿದ್ದಾರೆ.

ವಿಚಾರಣೆ ವೇಳೆ ತಡವರಿಸಿದ ಮಾಜಿ ಪ್ರಾಂಶುಪಾಲ

ಡಾ.ಘೋಷ್‌ಗೆ ಪಾಲಿಗ್ರಫಿ ಪರೀಕ್ಷೆ

ಕೋಲ್ಕತ್ತ: ಆರ್‌ಜಿ ಕರ್ ಕಾಲೇಜು-ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್‌ಗೆ ಪಾಲಿಗ್ರಫಿ ಪರೀಕ್ಷೆ ನಡೆಸಲು ಸಿಬಿಐ ಚಿಂತನೆ ನಡೆಸಿದೆ. ಈಗಾಗಲೇ ಆರೋಪಿ ಸಂಜಯ್ ರೇ ಗೆ ಪಾಲಿಗ್ರಫಿ ಪರೀಕ್ಷೆ (ಲೈ ಡಿಟೆಕ್ಟರ್ ಟೆಸ್ಟ್) ನಡೆಸಲು ಕೋರ್ಟ್‌ನಿಂದ ಅನುಮತಿ ಪಡೆಯಲಾಗಿತ್ತು. ಭಾನುವಾರದಿಂದ ಸಂದೀಪ್ ಘೋಷ್‌ರನ್ನು ಸತತವಾಗಿ ವಿಚಾರಣೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು, ಕೆಲವು ಪ್ರಶ್ನೆಗಳಿಗೆ ಘೋಷ್ ನೀಡಿದ ಉತ್ತರದಲ್ಲಿ ವ್ಯತ್ಯಾಸ ಕಂಡು ಬಂದಿದೆ ಎಂದು ತಿಳಿಸಿದ್ದಾರೆ. ಮಾಜಿ ಪ್ರಾಂಶುಪಾಲರ ಹೇಳಿಕೆಗಳನ್ನು ಆಸ್ಪತ್ರೆ-ಕಾಲೇಜು ಸಿಬ್ಬಂದಿಗಳ ಹೇಳಿಕೆಗಳೊಂದಿಗೆ ಹೋಲಿಸಿ ನೋಡಲಾಗುತ್ತಿದೆ. ಘೋಷ್ ಮಾತಿನಲ್ಲಿ ವ್ಯತ್ಯಾಸವಿರುವುದನ್ನು ಸಿಬಿಐ ಕಂಡುಕೊಂಡಿದೆ. ಹಾಗಾಗಿ ಪಾಲಿಗ್ರಫಿ ಪರೀಕ್ಷೆ ನಡೆಸುವುದು ಅಗತ್ಯ ಎಂದು ಸಿಬಿಐ ಅಭಿಪ್ರಾಯ ವ್ಯಕ್ತಪಡಿಸಿದೆ.

ಇ.ಡಿ ತನಿಖೆಗೆ ಆಗ್ರಹ: ಡಾ.ಸಂದೀಪ್ ಘೋಷ್ ವಿರುದ್ಧ ಜಾರಿ ನಿರ್ದೇಶನಾಲಯದಿಂದ(ಇ.ಡಿ) ತನಿಖೆ ಆಗಬೇಕಿದೆ ಎಂದಿರುವ ಆರ್‌ಜಿ ಕರ್ ಕಾಲೇಜು-ಆಸ್ಪತ್ರೆ ಮಾಜಿ ಡೆಪ್ಯೂಟಿ ಸೂಪರಿಂಟೆಂಡೆಂಟ್ ಅಖ್ತರ್ ಅಲಿ, ಈ ಸಂಬಂಧ ಕೋಲ್ಕತ್ತ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಘೋಷ್ ಹಣಕಾಸು ಅವ್ಯವಹಾರ ನಡೆಸಿದ್ದ, ಹಣದಾಸೆಗೆ ಮೃತದೇಹಗಳನ್ನು ಮಾರಾಟ ಮಾಡುತ್ತಿದ್ದ ಎಂದು ಅಲಿ ಗಂಭೀರ ಆರೋಪ ಮಾಡಿದ್ದರು.

ವೈದ್ಯರಿಗೆ ಭದ್ರತೆ ನೀಡುವಲ್ಲಿ ವಿಫಲ | ಪೊಲೀಸ್ ಇಲಾಖೆಗೆ ಸುಪ್ರೀಂ ಕೋರ್ಟ್, ಹೈಕೋರ್ಟ್ ಛೀಮಾರಿ

ಕೋಲ್ಕತ್ತ: 3 ಪೊಲೀಸ್ ಅಧಿಕಾರಿಗಳ ಅಮಾನತು

ಕೋಲ್ಕತ್ತ: ನಗರದಲ್ಲಿನ 'ಆರ್‌ಜಿ ಕರ್ ಸರಕಾರಿ ಕಾಲೇಜು-ಆಸ್ಪತ್ರೆ'ಯಲ್ಲಿನ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ವೈದ್ಯರ ಮೇಲೆ ಗೂಂಡಾಗಳು ದಾಳಿ ನಡೆಸಿ, ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೂ ನುಗ್ಗಿ ದಾಂಧಲೆ ನಡೆಸಿದಾಗಲೂ ಸುಮ್ಮನೇ ಇದ್ದು ಕರ್ತವ್ಯ ಲೋಪವೆಸಗಿದ ಆರೋಪದ ಮೇಲೆ ಮೂವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಆರೋಪಿ ಸಂಜಯ್

ಪ್ರತಿಭಟನಾ ನಿರತ ವೈದ್ಯರ ಸಮೂಹಕ್ಕೆ ಸೂಕ್ತ ಭದ್ರತೆ ನೀಡುವಲ್ಲಿ ವಿಫಲವಾದ ಕೋಲ್ಕತ್ತ ಪೊಲೀಸ್ ಇಲಾಖೆಗೆ ಸುಪ್ರೀಂ ಕೋರ್ಟ್, ಕೋಲ್ಕತ್ತಾ ಹೈಕೋರ್ಟ್‌ಗಳೆರಡೂ ಛೀಮಾರಿ ಹಾಕಿದ್ದವು. ಆ ಬಳಿಕ ಎಚ್ಚೆತ್ತ ರಾಜ್ಯ ಸರಕಾರ ಕರ್ತವ್ಯ ಲೋಪ ಆರೋಪದ ಮೇಲೆ ಇಬ್ಬರು ಸಹಾಯಕ ಪೊಲೀಸ್ ಆಯುಕ್ತರು(ಎಸಿಪಿ) ಮತ್ತು ಒಬ್ಬರು ಪೊಲೀಸ್ ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಿದೆ. ಈ ಮಧ್ಯೆ, ಕೋಲ್ಕತ್ತ ನಗರ ಹಾಗೂ ದೆಹಲಿ ಸೇರಿದಂತೆ ದೇಶದ ವಿವಿಧೆಡೆ ವೈದ್ಯರು, ಶುಶ್ರೂಷಾ ಸಿಬ್ಬಂದಿ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು, ಸಾರ್ವಜನಿಕರು ಪ್ರತಿಭಟನೆ ಮುಂದುವರಿಸಿದ್ದಾರೆ. ದೆಹಲಿ 'ಏಮ್ಸ್'ನ ಕ್ಯಾಂಪಸ್‌ನಲ್ಲಿ ವೈದ್ಯರ ಭದ್ರತೆಯ ಪರಿಶೀಲನೆಗೆ ಎರಡು ಸಮಿತಿಗಳನ್ನು ರಚಿಸಲಾಗಿದೆ. ಪ್ರತಿಭಟನಾ ನಿರತ ವೈದ್ಯರು ಕರ್ತವ್ಯಕ್ಕೆ ಹಾಜರಾಗಲು ಏಮ್ಸ್ ಸೂಚನೆ ನೀಡಿದೆ.

ಆರೋಪಿ ನೀಲಿಚಿತ್ರ ವ್ಯಸನಿ: ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣದ ಆರೋಪಿ ಸಂಜಯ್ ರೇ, ಅಶ್ಲೀಲ ವಿಡಿಯೋ ವ್ಯಸನಿಯಾಗಿದ್ದ. ಕೃತ್ಯ ನಡೆಯುವ ಹಿಂದಿನ ದಿನ ಲೈಂಗಿಕ ಕಾರ್ಯಕರ್ತರ 2 ಮನೆಗಳಿಗೆ ಭೇಟಿ ನೀಡಿದ್ದ ಎಂಬ ಮಾಹಿತಿ ಲಭ್ಯವಾಗಿದೆ. ಅಲ್ಲದೇ, ಆಸ್ಪತ್ರೆಯಲ್ಲಿ ರೋಗಿಗಳ ಕಡೆಯವರಿಂದ ಹಣ ಸುಲಿಗೆ ಮಾಡುತ್ತಿದ್ದ. ಮಗಳು ಗರ್ಭಿಣಿಯಾಗಿದ್ದಾಗಲೇ ಆಕೆ ಮೇಲೆ ಹಲ್ಲೆ ನಡೆಸಿದ್ದ. ಪರಿಣಾಮ ಗರ್ಭಪಾತವಾಗಿತ್ತು. ಈಗಲೂ ಆಕೆ ಅನಾರೋಗ್ಯದಿಂದ ಬಳಲುತ್ತಿದ್ದಾಳೆ. ಆತ ಅತ್ಯಂತ ನೀಚ ಎಂದು ಸಂಜಯ್‌ನ ಅತ್ತೆ ದುರ್ಗಾದೇವಿ ಆರೋಪ ಮಾಡಿದ್ದಾರೆ.

ಕಿರಿಯ ವೈದ್ಯೆ 'ಅಭಯ'(ಮಾಧ್ಯಮಗಳು ಇಟ್ಟ ಹೆಸರು) ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸೂಚನೆ ನೀಡಿದ ಬಳಿಕ ಆರ್‌ಜಿ ಕರ್ ಸರಕಾರಿ ಕಾಲೇಜು-ಆಸ್ಪತ್ರೆಯ ಭದ್ರತೆಯನ್ನು ಸಿಐಎಸ್‌ಎಫ್ ಪರಿಶೀಲಿಸಿದೆ. ಬುಧವಾರ ಸಿಐಎಸ್‌ಎಫ್ ಡಿಐಜಿ ಕೆ ಪ್ರತಾಪ್ ಸಿಂಗ್ ನೇತೃತ್ವದ ತಂಡ ಸ್ಥಳಕ್ಕಾಗಮಿಸಿ ಪರಿಶೀಲನೆ ಕೈಗೊಂಡಿದೆ. ಪ್ರತಿಭಟನಾಕಾರರ ಸೋಗಿನಲ್ಲಿ ದುಷ್ಕರ್ಮಿಗಳು ನಡೆಸಿದ ದಾಳಿ ಬಳಿಕ ಕಾಲೇಜು ಮತ್ತು ಆಸ್ಪತ್ರೆಗೆ ಭದ್ರತೆ ಹೆಚ್ಚಿಸಲು ಸುಪ್ರೀಂ ಸೂಚನೆ ನೀಡಿತ್ತು.

ಆಸ್ಪತ್ರೆಗೆ ಸಿಐಎಸ್‌ಎಫ್ ಭದ್ರತೆ

ಕೋಲ್ಕತ್ತ: 'ಊರು ಕೊಳ್ಳೆಯಾದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ' ಎಂಬ ಗಾದೆ ಮಾತು ಕೋಲ್ಕತ್ತ ಪ್ರಕರಣದಲ್ಲಿ ನಿಜವಾಗಿದೆ. ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರತವಾಗಿದ್ದ 31 ವರ್ಷಗಳ ಕಿರಿಯ ವೈದ್ಯೆಯ ಭೀಕರ ಅತ್ಯಾಚಾರ, ಬಳಿಕ ಬರ್ಬರವಾಗಿ ಕೊಲೆ ಮಾಡಿದ ಪ್ರಕರಣದಿಂದ ತಡವಾಗಿ ಎಚ್ಚರಗೊಂಡಿರುವ ಸರಕಾರ, ಕಳಂಕಿತ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ಈಗ 'ಕೇಂದ್ರ ಕೈಗಾರಿಕಾ ಭದ್ರತಾ ಪಡೆ'(ಸಿಐಎಸ್‌ಎಫ್) ಸಿಬ್ಬಂದಿಗಳನ್ನು ಭದ್ರತೆಗೆ ನಿಯೋಜಿಸಿದೆ.

ಬುಡಕಟ್ಟು ಮಹಿಳೆ ಸಾಮೂಹಿಕ ಅತ್ಯಾಚಾರ

ರಾಯಪುರ: ಛತ್ತೀಸ್‌ಗಢದ ರಾಯಪುರದಲ್ಲಿ ಬುಡಕಟ್ಟು ಸಮುದಾಯದ ಮಹಿಳೆ ಮೇಲೆ 8 ಜನರಿಂದ ಸಾಮೂಹಿಕ ಅತ್ಯಾಚಾರ ನಡೆದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪುಸೌರ್ ಪ್ರದೇಶದಲ್ಲಿ ರಕ್ಷಾ ಬಂಧನ ಹಬ್ಬದ ದಿನ ಗ್ರಾಮದ ಜಾತ್ರೆ ಮುಗಿಸಿ ವಾಪಸಾಗುತ್ತಿದ್ದ 27 ವರ್ಷದ ಮಹಿಳೆ ಮೇಲೆ 8 ಜನರಿಂದ ಅತ್ಯಾಚಾರ ನಡೆದಿದೆ ಎಂದು ವರದಿಯಾಗಿದೆ. ಮನೆಗೆ ವಾಪಸಾಗುವಾಗ ಜತೆಗಿದ್ದ ಗ್ರಾಮದ ಯುವಕನೇ ಸಂಚು ರೂಪಿಸಿ ಗೆಳೆಯರ ಜತೆಗೂಡಿ ಅತ್ಯಾಚಾರ ನಡೆಸಿದ ಎಂದು ಮಹಿಳೆ ಆರೋಪಿಸಿದ್ದಾರೆ. ಪೊಲೀಸರು 6 ಮಂದಿ ಯನ್ನು ಬಂಧಿಸಿದ್ದಾರೆ. 20-25 ವರ್ಷದ ಯುವಕರಿಂದ ಈ ಕೃತ್ಯ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಓಕ್‌ಲ್ಯಾಂಡ್‌ನಲ್ಲಿ ಸಾವಿರಾರು ವಿಡಿಯೊ ಪತ್ತೆ

ನಗ್ನ ವಿಡಿಯೊ ಚಿತ್ರೀಕರಣ: ಭಾರತೀಯ ವೈದ್ಯ ಬಂಧನ

ಓಕ್‌ಲ್ಯಾಂಡ್: ಚಿಕಿತ್ಸೆಗೆಂದು ಬಂದ ಮಹಿಳೆಯರು, ಹೆಣ್ಣು ಮಕ್ಕಳ ನಗ್ನ-ಅರೆನಗ್ನ ಚಿತ್ರಗಳನ್ನು ಹಲವು ವರ್ಷಗಳಿಂದ ರಹಸ್ಯವಾಗಿ ತೆಗೆಯುತ್ತಿದ್ದ, ವಿಡಿಯೋ ಚಿತ್ರೀಕರಣ ಮಾಡುತ್ತಿದ್ದ ಆರೋಪದಡಿ ಅಮೇರಿಕದಲ್ಲಿ ವೈದ್ಯನಾಗಿದ್ದ ಭಾರತ ಮೂಲದ ಮಧ್ಯವಯಸ್ಕ ಬಂಧನಕ್ಕೊಳಗಾಗಿದ್ದಾನೆ.

ಓಮೈರ್ ಏಜಾಜ್(40) ವೈದ್ಯನಾಗಿದ್ದು, ಆಸ್ಪತ್ರೆಯ ಕೊಠಡಿಗಳು, ಶೌಚಗೃಹ, ಮಹಿಳಾ ರೋಗಿಗಳು, ಬಟ್ಟೆ ಬದಲಿಸುವ ಜಾಗಗಳಲ್ಲಿ, ಅಷ್ಟೇ ಅಲ್ಲದೇ ತನ್ನದೇ ಮನೆಯಲ್ಲೂ ಗೌಪ್ಯ ಕ್ಯಾಮರಾಗಳನ್ನು ಇರಿಸಿದ್ದ. ಆತನ ಕೃತ್ಯ ಕಂಡುಕೊಂಡ ಪತ್ನಿಯೇ ಪತಿಯ ದುಷ್ಕೃತ್ಯವನ್ನು ಬಯಲಿಗೆಳೆದಿದ್ದಾರೆ. ನಗ್ನ ಚಿತ್ರಗಳು-ವಿಡಿಯೊ ಸಾಕ್ಷ್ಯಗಳ ಸಮೇತ ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ. ಆ ಬಳಿಕ ವೈದ್ಯ ಓಮೈರ್ ಏಜಾಜ್‌ನ ವಿಕೃತಿ ಬಯಲಾಗಿದೆ. ರೋಗಿಗಳು ಪ್ರಜ್ಞಾಹೀನರಾಗಿದ್ದಾಗ, ನಿದ್ರಿಸುತ್ತಿದ್ದಾಗ ಅವರನ್ನು ನಗ್ನಗೊಳಿಸಿ ಚಿತ್ರೀಕರಿಸಿದ್ದಾನೆ ಎಂದು ಓಕ್‌ಲ್ಯಾಂಡ್ ಕೌಂಟಿ ಪೊಲೀಸ್ ಅಧಿಕಾರಿ ಮೈಕ್ ಬೌಚರ್ಡ್ ಹೇಳಿದ್ದಾರೆ. ಮಿಚಿಗನ್ ರಾಜ್ಯದ ಓಕ್‌ಲ್ಯಾಂಡ್ ಕೌಂಟಿಯಲ್ಲಿನ ರೋಚೆಸ್ಟರ್ ಹಿಲ್ಸ್‌ನಲ್ಲಿರುವ ವೈದ್ಯ ಎಜಾಜ್ ಮನೆಯಲ್ಲಿ ಸಾವಿರಾರು ವೀಡಿಯೊಗಳು, ಫೋಟೊಗಳು ಪತ್ತೆಯಾಗಿದೆ. ವರ್ಷಗಳ ಕಾಲ ಸಾವಿರಾರು ಮಂದಿಯ ಚಿತ್ರೀಕರಣವಾಗಿರುವ ಸಾಧ್ಯತೆ ಇದೆ. ಏಜಾಜ್‌ನ ಅಪರಾಧಗಳ ಪ್ರಮಾಣ ಬಹಳ ದೊಡ್ಡದಿದೆ. ಸಂಪೂರ್ಣ ತನಿಖೆಗೆ ತಿಂಗಳುಗಳೇ ತೆಗೆದುಕೊಳ್ಳುತ್ತದೆ. ವೈದ್ಯನ ಕಾಮಲಾಲಸೆಗೆ ಸಾವಿರಾರು ಮಂದಿ ಬಲಿಪಶುಗಳಾಗಿ ರಬಹುದು ಎಂದು ಮೈಕ್ ಶಂಕಿಸಿದ್ದಾರೆ.

ಹ್ಯಾರಿಸ್ ಅಧ್ಯಕ್ಷತೆಗೆ ಅಮೆರಿಕ ಕಾಯುತ್ತಿದೆ

ಕಮಲಾ ಸಮರ್ಥರು: ಒಬಾಮಾ

ಚಿಕಾಗೊ: ಕಮಲಾ ಹ್ಯಾರಿಸ್ ಅವರಿಗೆ ಉರಿ ಯುವ ಬೆಳಕಿನ ದೀಪ ಹಸ್ತಾಂತರಿಸಲಾಗಿದೆ. ಅವರ ಅಧ್ಯಕ್ಷತೆಗೆ ಅಮೆರಿಕ ಸಜ್ಜಾಗಿದೆ ಎಂದು ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಹೇಳುವ ಮೂಲಕ ಭರ್ಜರಿ ಪ್ರಚಾರ ಆರಂಭಿಸಿದ್ದಾರೆ.

ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಕಮಲಾ ಹ್ಯಾರಿಸ್ ಅವರನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದ್ದು, ಚಿಕಾಗೊದಲ್ಲಿ ಸಾರ್ವಜನಿಕ ಭಾಷಣ ಮಾಡಿದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಕಮಲಾ ಅವರ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಿಕ್ಕಿರಿದಿದ್ದ ಬಯಲು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪಕ್ಷದ ನಾಮನಿರ್ದೇಶನ ಸಮಾವೇಶದಲ್ಲಿ ಭಾರೀ ಚಪ್ಪಾಳೆ ಮತ್ತು ಹರ್ಷೋದ್ಗಾರಗಳ ಮಧ್ಯೆ ಮಾತನಾಡಿದ ಒಬಾಮಾ, ಈಗಾಗಲೇ ಉಪಾಧ್ಯಕ್ಷೆಯಾಗಿ ಬಹಳ ಅನುಭವ ಪಡೆದಿರುವ ಕಮಲಾ ಹ್ಯಾರಿಸ್, ಅಧ್ಯಕ್ಷೆಯಾಗಿ ಚುನಾಯಿತರಾದ ಬಳಿಕ ಅಮೆರಿಕನ್ನರಿಗಾಗಿ ಸಮರ್ಥವಾಗಿ ಹೋರಾಡುತ್ತಾರೆ ಎಂದು ಹೇಳಿದರು.

ಕಮಲಾ ಜನರಿಗಾಗಿ ಕೆಲಸ ಮಾಡಲು ಸಿದ್ಧರಾಗಿದ್ದಾರೆ, ಅವರ ಧ್ವನಿ ಸದಾ ಅಮೆರಿಕನ್ನರ ಪರವಾಗಿರುತ್ತದೆ. ನಿಮ್ಮಗಾಗಿ ಪ್ರತಿದಿನ ಹೋರಾಡುವವರು ಯಾರಾದರೂ ಇದ್ದರೆ ಅವರು ಕಮಲಾ ಹ್ಯಾರಿಸ್ ಎಂದು ಬಣ್ಣಿಸಿದ್ದಾರೆ. ಅದಕ್ಕೂ ಮುನ್ನ ಮಾತನಾಡಿದ ಮಿಷೆಲ್ ಒಬಾಮ, ಇಲ್ಲೇನೋ ಅದ್ಭುತವಾದದ್ದು ನಡೆಯುತ್ತಿದೆ. ಪತಿ ಒಬಾಮಾ 2008ರಲ್ಲಿ ಗೆದ್ದ ರೀತಿಯಲ್ಲೇ ಕಮಲಾ ಗೆಲುವಿನ ವಿಶ್ವಾಸವಿದೆ ಎಂದಿದ್ದರು.

32 ವರ್ಷ ಹಿಂದೆ 250ಕ್ಕೂ ಅಧಿಕ ಬಾಲೆಯರ ಲೈಂಗಿಕ ದೌರ್ಜನ್ಯ

ಅಜ್ಮೀರ್ ಸರಣಿ ಅತ್ಯಾಚಾರಿಗಳಿಗೆ ಜೀವಾವಧಿ

ದೆಹಲಿ: 250ಕ್ಕೂ ಹೆಚ್ಚು ಬಾಲಕಿಯರು, ಯುವತಿಯರ ಮೇಲೆ ಸರಣಿಯೋಪಾದಿ ಅತ್ಯಾಚಾರ ನಡೆಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ, 'ಅಜ್ಮೀರ್ ಸರಣಿ ಅತ್ಯಾಚಾರ' ಎಂದೇ ಭಾರಿ ಸುದ್ದಿಯಾಗಿದ್ದ ಪ್ರಕರಣದಲ್ಲಿ ಪೋಕ್ಸೊ ನ್ಯಾಯಾಲಯ 6 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಅಲ್ಲದೇ, ತಲಾ 5 ಲಕ್ಷ ರು. ದಂಡ ವಿಧಿಸಿದೆ. 32 ವರ್ಷಗಳ ಸುದೀರ್ಘ ವಿಚಾರಣೆ ನಂತರ 6 ಕಾಮುಕರಿಗೆ ಶಿಕ್ಷೆಯಾಗಿದೆ.

ನಫೀಸ್ ಚಿಶ್ತಿ, ನಸೀಮ್ ಅಲಿಯಾಸ್ ಟಾರ್ಜನ್, ಸಲೀಂ ಚಿಶ್ತಿ, ಇಕ್ಬಾಲ್ ಭಾಟಿ, ಸೊಹೈಲ್ ಗನಿ ಮತ್ತು ಸೈಯದ್ ಜಮೀರ್ ಹುಸೇನ್ ಎಂಬವರನ್ನು ಶಿಕ್ಷೆಗೆ ಗುರಿಪಡಿ ಸಲಾಗಿದೆ ಎಂದು ಪ್ರಾಸಿಕ್ಯೂಷನ್ ವಕೀಲ ವೀರೇಂದ್ರ ಸಿಂಗ್ ಹೇಳಿದ್ದಾರೆ.

ಪ್ರಕರಣದಲ್ಲಿ 18 ಅಪರಾಧಿಗಳು ಭಾಗಿ ಯಾಗಿದ್ದರು. 12 ಮಂದಿಗೆ ಈ ಮೊದಲೇ ಶಿಕ್ಷೆ ವಿಧಿಸಲಾಗಿದೆ. ಪ್ರಕರಣದಲ್ಲಿ ಮೊದಲ ಚಾರ್ಜ್‌ಶೀಟ್ ಕೋರ್ಟ್‌ಗೆ ಸಲ್ಲಿಕೆಯಾದಾಗ ತನಿಖೆ ಪೂರ್ಣಗೊಂಡಿಲ್ಲದ ಕಾರಣ 6 ಆರೋಪಿಗಳ ವಿಚಾರಣೆ ತಡವಾಗಿ ಪ್ರತ್ಯೇಕ ನಡೆಸಲಾಯಿತು. ಹಾಗಾಗಿ ಈಗ 6 ಮಂದಿಗೆ ಶಿಕ್ಷೆ ವಿಧಿಸಲಾಗಿದೆ ಎಂದು ಸರಕಾರಿ ವಕೀಲರು ಹೇಳಿದ್ದಾರೆ.

ಆರೋಪಿ ನಜೀಮ್ 1994ರಿಂದ ಪರಾರಿ ಯಾಗಿದ್ದ. ಜಹೂರ್ ಚಿಶ್ತಿ ಐಪಿಸಿ ಸೆಕ್ಷನ್ 377ರಡಿ(ಅಸ್ವಾಭಾವಿಕ ಲೈಂಗಿಕತೆ) ತಪ್ಪಿತಸ್ಥ ಎಂದಾಗಿದ್ದರಿಂದ ಪ್ರಕರಣ ಬೇರೆ ನ್ಯಾಯಾಲಯಕ್ಕೆ ವರ್ಗವಾಗಿತ್ತು. ಆರೋಪಿ ಫಾರೂಕ್ ಚಿಶ್ತಿ ಸ್ಕಿಜೋಫ್ರೇನಿಯ ರೋಗಿ ಎಂಬ ಕಾರಣಕ್ಕೆ ಪ್ರತ್ಯೇಕ ವಿಚಾರಣೆ ನಡೆದು 2007ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಒಬ್ಬ ಆರೋಪಿ ವಿಚಾರಣೆ ಅವಧಿಯಲ್ಲೇ ಆತ್ಮಹತ್ಯೆ ಮಾಡಿಕೊಂಡ. 8 ಆರೋಪಿಗಳಿಗೆ 1998ರಲ್ಲೇ ಜೀವಾವಧಿ ಶಿಕ್ಷೆಯಾಗಿದೆ.

32 ವರ್ಷ ಹಿಂದೆ ಸರಣಿ ಅತ್ಯಾಚಾರ

ಹತ್ತಾರು ವರ್ಷಗಳಿಂದ ನಡೆದು ಬಂದಿದ್ದ 'ಅಜ್ಮೀರ್ ಸರಣಿ ಅತ್ಯಾಚಾರ' ಪ್ರಕರಣ 1992ರಲ್ಲಿ ಬೆಳಕಿಗೆ ಬಂದಾಗ ಅಷ್ಟರಲ್ಲಾಗಲೇ 250ಕ್ಕೂ ಅಧಿಕ ಬಾಲಕಿಯರು, ಯುವತಿಯರು ಈ 18 ಕಾಮುಪಿಶಾಚಿಗಳಿಗೆ ಲೈಂಗಿಕ ದಾಹಕ್ಕೆ ಬಲಿಪಶುಗಳಾಗಿದ್ದರು. ಅಜ್ಮೀರ್ ನಗರದ ವಿವಿಧ ಶಾಲೆ-ಕಾಲೇಜುಗಳ 11ರಿಂದ 20 ವರ್ಷ ವಯೋಮಾನದ ವಿದ್ಯಾರ್ಥಿನಿಯರನ್ನು ಸ್ನೇಹದ ನೆಪದಲ್ಲಿ ಬಲೆಗೆ ಬೀಳಿಸಿಕೊಳ್ಳುತ್ತಿದ್ದ 18 ಕಾಮ ಪಿಶಾಚಿಗಳು, ಬಳಿಕ ನಗರದ ಹೊರವಲಯದ ತೋಟದ ಮನೆಗೆ ಕರೆದೊಯ್ದು ಅತ್ಯಾಚಾರ ನಡೆಸುತ್ತಿದ್ದರು. ದೈಹಿಕ ಸಂಪರ್ಕ ವೇಳೆ ಫೋಟೊಗಳನ್ನು ತೆಗೆದು, ನಂತರ ಅವನ್ನು ಬಹಿರಂಗಪಡಿಸುವುದಾಗಿ ಹೆದರಿಸುತ್ತಾ ಸತತವಾಗಿ ಅತ್ಯಾಚಾರ ನಡೆಸುತ್ತಿದ್ದರು. 1992ರಲ್ಲಿ ಪ್ರಕರಣ ಬೆಳಕಿಗೆ ಬಂದಾಗ ಇಡೀ ದೇಶವೇ ಕುದ್ದು ಹೋಗಿತ್ತು. ಅತ್ಯಾಚಾರಿಗಳಿಗೆ ಬಲಿಯಾದವರೆಲ್ಲಾ ಹಿಂದೂ ಧರ್ಮದ ಬಾಲಕಿಯರು ಎಂಬುದು ತಿಳಿಯುತ್ತಿದ್ದಂತೆಯೇ, ಇದೊಂದು ದುರುದ್ದೇಶ ಪೂರಿತ ಜಾಲ ಎಂದು ಜನ ಸಿಟ್ಟಿಗೆದ್ದಿದ್ದರು. ರಾಜಸ್ಥಾನವಷ್ಟೇ ಅಲ್ಲದೇ, ದೇಶದ ಹಲವೆಡೆ ಕೋಮುಗಲಭೆಗೂ ಕಾರಣವಾಗಿತ್ತು.

ಮೊಟ್ಟೆ ಪಪ್ಸ್‌ಗಾಗಿ ಮಾಜಿ ಸಿಎಂ 3.6 ಕೋಟಿ ವೆಚ್ಚ

ಅಮರಾವತಿ: ವೈ.ಎಸ್.ಜಗನ್ ಮೋಹನ್ ರೆಡ್ಡಿ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ 5 ವರ್ಷಗಳಲ್ಲಿ ಮೊಟ್ಟೆ ಪಪ್ಸ್ ತಿನ್ನುವುದಕ್ಕಾಗಿಯೇ ಒಟ್ಟು 3.6 ಕೋಟಿ ರು. ವೆಚ್ಚ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ವೈ.ಎಸ್.ಜಗನಮೋಹನ್ ರೆಡ್ಡಿ ಅಧಿಕಾರವಧಿಯಲ್ಲಿ ಮುಖ್ಯಮಂತ್ರಿ ಕಚೇರಿಯಿಂದ ಪ್ರತಿದಿನ 993 ಮೊಟ್ಟೆ ಪಪ್ಸ್ ಖರೀದಿಸಲಾಗಿದೆ. ವರ್ಷಕ್ಕೆ ತಲಾ 72 ಲಕ್ಷ ರು.ಗಳಂತೆ 5 ವರ್ಷವೂ ವೆಚ್ಚ ಮಾಡಲಾಗಿದೆ. 5 ವರ್ಷಗಳಲ್ಲಿ ಹೀಗೆ 3.62 ಕೋಟಿ ರು. ಖರ್ಚು ಮಾಡ ಲಾಗಿದೆ. ಸರಕಾರದ ಹಣ ದುಂದುವೆಚ್ಚ ಮಾಡಿದ ಬಗ್ಗೆ ಟಿಡಿಪಿ-ಜನಸೇನಾ-ಬಿಜೆಪಿ ಮೈತ್ರಿ ಸರಕಾರ ತನಿಖೆಗೆ ಮುಂದಾಗಿದೆ ಎಂದು ಖಾಸಗಿ ವಾಹಿನಿ ಪತ್ರಕರ್ತೆ ಎಕ್ಸ್ ಸಂದೇಶದಲ್ಲಿ ಹೇಳಿದ್ದಾರೆ. ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿರುವ ವೈಎಸ್‌ಆರ್ ಕಾಂಗ್ರೆಸ್ ಪಕ್ಷ, ಮೊಟ್ಟೆ ಪಪ್ಸ್ ಖರೀದಿ ಆರೋಪವನ್ನು ತಳ್ಳಿ ಹಾಕಿದೆ. ಸತ್ಯಾಸತ್ಯತೆ ಪರಿಶೀಲಿ ಸದೆ, ನಂಬಲರ್ಹ ಮೂಲಗಳನ್ನು ಉಲ್ಲೇಖಿಸದೇ ಪತ್ರಕರ್ತರು ಆಧಾರರಹಿತ ವರದಿ ಮಾಡ ಬಾರದು. ವದಂತಿಯನ್ನೇ ನಿಜವೆಂಬಂತೆ ಬಿಂಬಿಸುತ್ತಿರು ವುದು ನಿರಾಶಾದಾಯಕ. ದೃಢೀಕರಣ ಅಥವಾ ಪುರಾವೆ ಇಲ್ಲದೇ ತಪ್ಪು ಮಾಹಿತಿ ಟ್ವೀಟ್ ಮಾಡುವುದು ವೃತ್ತಿಧರ್ಮವಲ್ಲ. ಇದು ನೈಜ ಪತ್ರಿಕೋದ್ಯಮಕ್ಕೆ ಅಪಚಾರ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ

ಕ್ರ.ಸಂ: ಬಿಜಿಎಂ:ಡಿಯುಡಿಸಿ:5:ಸಿಆರ್-25:2021-22 ದಿನಾಂಕ: 21-08-2024

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW-3 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.
ರೂ. ಲಕ್ಷಗಳಲ್ಲಿ

ಕ್ರ ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ	ಕರೆ ನಂ.
1	ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No. DMA/2024-25/RD/WORK_INDENT27309)	306.36	4.60	1 ನೇ
2	ಚಿಕ್ಕೋಡಿ ಪುರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 08 ರಲ್ಲಿ ಖಣಿ ಹತ್ತಿರ ಕಂಪೌಂಡ ಗೋಡೆ (Tender No. DMA/2024-25/BD/WORK_INDENT27314)	84.40	1.69	1 ನೇ
3	ಕಲ್ಲೋಳಿ ಪ.ಪಂ. ವ್ಯಾಪ್ತಿಯ ವಾರ್ಡ್ ಸಂಖ್ಯೆ10ರ ಫಿಲ್ಟರ್ ಹೌಸ್ ಅಭಿವೃದ್ಧಿಪಡಿಸುವುದು. (Tender No. DMA/2023-24/WS/WORK_INDENT15395/Call-3)	16.60	0.35	3 ನೇ
4	ಕಲ್ಲೋಳಿ ಪ.ಪಂ. ವ್ಯಾಪ್ತಿಯ ವಿದ್ಯುತ್ ಕಂಬ ಮತ್ತು ಟಿ.ಸಿ ಅಳವಡಿಸುವುದು. (Tender No. DMA/2023-24/EL/WORK_INDENT15392/Call-3)	7.50	0.16	3 ನೇ

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರ.ಸಂ. 01	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	21-09-2024ರಂದು 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	23-09-2024ರಂದು 10-30 ಘಂಟೆ ನಂತರ
ಕ್ರ.ಸಂ. 02 ರಿಂದ 04	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	06-09-202400 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	09-09-2024ರಂದು 10-30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು, ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPR /BGM/RO-NO -662/2023-24

ಶಾಸಕ ವಿಶ್ವನಾಥ್‌ಗೆ ಮಾದಿಗ ಸಮುದಾಯದಿಂದ ಸನ್ಮಾನ



ಯಲಹಂಕ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲು ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ಸ್ವಾಗತಿಸಿರುವ ಯಲಹಂಕ ಕ್ಷೇತ್ರದ ಮಾದಿಗ ಜನಾಂಗದ ಮುಖಂಡರು, ಶಾಸಕ ಎಸ್.ಆರ್ ವಿಶ್ವನಾಥ್ ಅವರನ್ನು ಸನ್ಮಾನಿಸಿದರು.

ಈ ವೇಳೆ ಯಲಹಂಕ ಗ್ರಾಮಾಂತರ ಮಂಡಲ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಲಿಂಗನಹಳ್ಳಿ ವೆಂಕಟೇಶ್ ಮಾತನಾಡಿ, 'ಜನಸಂಖ್ಯೆ ಆಧಾರಿತ ಒಳಮೀಸಲು ಜಾರಿಗೆ ರಾಜ್ಯ ಸರಕಾರಗಳಿಗೆ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪಿನ ಮೂಲಕ ಸೂಚಿಸಿರುವುದು ಸ್ವಾಗತಾರ್ಹ ವಾದ ಬೆಳವಣಿಗೆ ಎಂದರು.

ಒಳ ಮೀಸಲಾತಿ ಜಾರಿ ಕುರಿತಂತೆ ಮಾಜಿ ಕೇಂದ್ರ ಸಚಿವ ನಾರಾಯಣ ಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಇತ್ತೀಚೆಗೆ ನಿಧನರಾದ ಎಸ್ಸಿ ಮೋರ್ಚಾ ರಾಜ್ಯ ಪ್ರ.ಕಾರ್ಯದರ್ಶಿ ಬೆಟ್ಟಹಳ್ಳಿ ಜಗದೀಶ್‌ರವರ ಕೊಡುಗೆ ಸ್ಮರಣೀಯ. ಈ ಸಂದರ್ಭದಲ್ಲಿ ಅವರಿಗೂ ಸಹ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ ಅವರು ರಾಜ್ಯ ಸರಕಾರ ಸುಪ್ರೀಂ ಕೋರ್ಟ್ ನ ತೀರ್ಪಿನ ಮೇರೆಗೆ ಕೂಡಲೇ ಜನಸಂಖ್ಯೆ ಆಧಾರಿತ ಒಳಮೀಸಲಾತಿ ಯನ್ನು ಕೂಡಲೇ ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಈ ವೇಳೆ ಮಾದಿಗ ಸಮಯದಾಯದ ಮುಖಂಡರಾದ ಆವಲಹಳ್ಳಿ ಸುರೇಶ್, ವೀರಸಾಗರ ನಾಗೇಶ್, ದೇವಿಕುಮಾರ್, ಕುಂಬಾರಹಳ್ಳಿ ಶ್ರೀನಿವಾಸ್, ಮುತ್ತುಗದಹಳ್ಳಿ ಮುನಿರಾಜು, ಮಾರಸಂದ್ರ ಮುನಿದಾಸಪ್ಪ ಸೇರಿದಂತೆ ಅನೇಕರಿದ್ದರು.

ಎಸ್‌ಸಿ–ಎಸ್‌ಟಿ ಒಳಮೀಸಲು ತೀರ್ಪಿಗೆ ವಿರೋಧ

ಭಾರತ್ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ದೆಹಲಿ: ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ(ಎಸ್‌ಟಿ) ಉಪ ವರ್ಗೀಕರಣ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪನ್ನು ವಿರೋಧಿಸಿ ರಿಸರ್ವೇಶನ್ ಬಚಾವೋ ಸಂಘರ್ಷ್ ಸಮಿತಿ ಸೇರಿದಂತೆ ಹಲವು ಸಂಘಟನೆಗಳು ನೀಡಿದ್ದ ಭಾರತ್ ಬಂದ್ ಕರೆಗೆ ಬುಧವಾರ ಉತ್ತರ ಭಾರತದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಂದ್ ಕರೆಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಜಾರ್ಖಂಡ್‌ನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದರೆ, ರಾಜಸ್ಥಾನದ ಕೆಲ ಜಿಲ್ಲೆಗಳಲ್ಲಿ ಬಂದ್ ಯಶಸ್ವಿಯಾಗಿದೆ. ವಾಣಿಜ್ಯ ಚಟುವಟಿಕೆ ಪೂರ್ಣ ಸ್ಥಗಿತಗೊಂಡಿತ್ತು. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಬೆಂಬಲದ ಹೊರತಾಗಿಯೂ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಡಿಶಾದಲ್ಲಿ ರೈಲು ಮತ್ತು ರಸ್ತೆ ಸೇವೆಗಳಲ್ಲಿ ಭಾಗಶಃ ಅಡೆತಡೆ ಕಂಡಿದೆ. ಪ್ರತಿಭಟನಾಕಾರರು ಭುವನೇಶ್ವರ ಮತ್ತು ಸಂಬಲ್‌ಪುರದಲ್ಲಿ ರೈಲು ತಡೆದರು. ಬಿಹಾರದಲ್ಲಿ ಬಂದ್‌ನಿಂದ ಕೆಲ ಜಿಲ್ಲೆಗಳಲ್ಲಷ್ಟೇ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಪಟನಾದಲ್ಲಿ ಪ್ರತಿಭಟನಾಕಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿ ಚದುರಿಸಿದರು.

Aadhar Housing Finance Ltd

GHAR BANEGA, TOH DESH BANEGA

ನೋಂದಾಯಿತ ವಿಳಾಸ: 2ನೇ ಮಹಡಿ, ನಂ. 3, ಜೆವಿಟಿ ಟವರ್ಸ್, 8ನೇ ಎ ಮುಖ್ಯ ರಸ್ತೆ, ಸಂಪಂಗಿ ರಾಮ ನಗರ ಹಡ್ಸನ್ ವೃತ್ತ, ಬೆಂಗಳೂರು, ಕರ್ನಾಟಕ, ಭಾರತ–560027.
ಟೋಲ್‌ಫ್ರೀ ಸಂಖ್ಯೆ : 1800 3004 20202 CIN: L6601KA1990PLC011409
ಇ–ಮೇಲ್: customercare@aadharhousing.com, ವೆಬ್‌ಸೈಟ್ : https://aadharhousing.com

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ 34ನೇ (ಮೂವತ್ತನಾಲ್ಕನೇ) ವಾರ್ಷಿಕ ಮಹಾಸಭೆಯ ಸೂಚನೆ

1. ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ನ ("ದಿ ಕಂಪನಿ/ನಿಮ್ಮ ಕಂಪನಿ") **34ನೇ (ಮೂವತ್ತನಾಲ್ಕನೇ) ವಾರ್ಷಿಕ ಮಹಾಸಭೆಯು (ಎಜಿಎಂ) ದಿನಾಂಕ ಸೆಪ್ಟಂಬರ್ 14, 2024ರ ಶನಿವಾರದಂದು ಮಧ್ಯಾಹ್ನ 3.00 ಗಂಟೆಗೆ** (ಭಾರತೀಯ ಕಾಲಮಾನ) ವಿಡಿಯೋ ಕಾನ್ಫರೆನ್ಸಿಂಗ್ ('ವಿಸಿ')/ಇತರೆ ಆಡಿಯೊ ವಿಷುಯಲ್ ಮೀನ್ಸ್ ('ಒಎವಿಎಂ') ಮೂಲಕ ನಡೆಯಲಿದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (ಎಂಸಿಎ) ಕ್ರಮವಾಗಿ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂ. 8ನೇ ಏಪ್ರಿಲ್ 2020, 13ನೇ ಏಪ್ರಿಲ್ 2020, 05 ಮೇ 2020 ಮತ್ತು 25ನೇ ಸೆಪ್ಟಂಬರ್, 2023 ಹಾಗೂ ಕಂಪನಿಗಳ ಕಾಯಿದೆ, 2013 ರಂತೆ ಅನ್ವಯವಾಗುವ ಎಲ್ಲಾ ನಿಯಂತ್ರಣಗಳು, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ("ಸೆಬಿ") (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣಗಳು, 2015 ಮತ್ತು ಸೆಬಿಯಿಂದ ನೀಡಲಾದ ಇತರೆ ಅನ್ವಯವಾಗುವ ಸುತ್ತೋಲೆಗಳು (ಎಲ್ಲವನ್ನೂ ಒಟ್ಟಾಗಿ "ಸೂಕ್ತ ಸುತ್ತೋಲೆಗಳು" ಎನ್ನಲಾಗುವುದು) ಎಜಿಎಂ ಸೂಚನೆಯಲ್ಲಿ ಹೇಳಲಾದ ವ್ಯವಹಾರಗಳನ್ನು ನಡೆಸಲಾಗುವುದು. ಸೆಕ್ಷನ್ 103 ರ ಕಂಪನಿಗಳ ಕಾಯಿದೆ, 2013 ರಂತೆ ವಿಸಿ/ಒಎವಿಎಂ ಸೌಲಭ್ಯದ ಮೂಲಕ ಹಾಜರಾಗುವ ಸದಸ್ಯರನ್ನು ಕೋರಂ ಉದ್ದೇಶಕ್ಕಾಗಿ ಲೆಕ್ಕ ಹಾಕಲಾಗುವುದು.
2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ಎಜಿಎಂ ಸೂಚನೆಯನ್ನು ಹಾಗೂ ಹಣಕಾಸು ವರ್ಷ 2023–24ರ ವಾರ್ಷಿಕ ವರದಿಯನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರವರಲ್ಲಿ ತಮ್ಮ ಇ-ಮೇಲ್ ಐಡಿಯನ್ನು ನೋಂದಾಯಿಸಿದ ಸದಸ್ಯರಿಗೆ ಇ–ಮೇಲ್ ಮೂಲಕ ಬುಧವಾರ, 21ನೇ ಆಗಸ್ಟ್ 2024ರಂದು ಕಳುಹಿಸಲಾಗಿದೆ. ಕಂಪನಿಯು ಎಜಿಎಂ ಸೂಚನೆ ಹಾಗೂ 2023–24 ರ ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು ಸದಸ್ಯರ ಕೋರಿಕೆ ಮೇರೆ ಕಳುಹಿಸಿಕೊಡಲಿದೆ.
3. ಮೇಲೆ ಹೇಳಲಾದ ದಾಖಲೆಗಳು ಕಂಪನಿಯ ವೆಬ್‌ಸೈಟ್ **https://aadharhousing.com/disclosures-under-regulation-62-of-the-sebi-lodr-regulation-2015-pdf/annual-report** ರಲ್ಲಿ ಹಾಗೂ ಕ್ರಮವಾಗಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ನ **www.bseindia.com** ಮತ್ತು **www.nseindia.com** ನಲ್ಲಿ ಲಭ್ಯವಿರುತ್ತದೆ, ಮತ್ತು ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ("ಕೆಫಿನ್ ಟೆಕ್") ನ **https://evoting.kfintech.com** ನಲ್ಲಿ ಸಹ ಲಭ್ಯವಿರುತ್ತದೆ.
4. ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಿದಂತೆ ದಾಖಲೆಗಳು ವಿದ್ಯುನ್ಮಾನ ರೀತಿಯಲ್ಲಿ ಪರಿಶೀಲನೆ ನಡೆಸಲು ಯಾವುದೇ ಶುಲ್ಕವಿಲ್ಲದೆ ಎಜಿಎಂ ಸೂಚನೆ ಪ್ರಸಾರವಾದ ದಿನದಿಂದ ಎಜಿಎಂ ದಿನಾಂಕದವರೆಗೆ ಸದಸ್ಯರಿಗೆ ಲಭ್ಯವಿರುತ್ತದೆ. ಸದಸ್ಯರು ಅಂತಹ ದಾಖಲೆಗಲನ್ನು ಪರಿಶೀಲನೆ ನಡೆಸಲು ಇಚ್ಚಿಸಿದಲ್ಲಿ ಅವುಗಳಿಗೆ **complianceofficer@aadharhousing.com** ಗೆ ಇ–ಮೇಲ್ ಕಳುಹಿಸಬಹುದು.
5. ರಿಮೋಟ್ ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಇ–ಮತದಾನಕ್ಕೆ ಸೂಚನೆಗಳು

ಸೆಕ್ಷನ್ 108 ರ ಕಂಪನಿಗಳ ಕಾಯಿದೆ, 2013ಮತ್ತು ನಿಯಮ 20 ನ್ನು ಓದಿಕೊಂಡಂತೆ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014 ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ ನಿಯಂತ್ರಣ 44 ರ ಸೆಬಿ (ಎಲ್‌ಒಡಿಆರ್) ನಿಯಂತ್ರಣಗಳು, 2015 ರಂತೆ ಷೇರುದಾರರಿಗೆ ಕೆಫಿನ್ ಮೂಲಕ 34ನೇ ಎಜಿಎಂ ಸಂದರ್ಭದಲ್ಲಿ ಎಲ್ಲಾ ನಡಾವಳಿಗಳ ಮೇಲೆ ತಮ್ಮ ಮತವನ್ನು ಎಲೆಕ್ಟ್ರಾನಿಕ್ ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇ–ಮತದಾನ ಪದ್ಧತಿಯ ಮೂಲಕ ("ಇನ್ಸ್ಟಾ ಪೋಲ್") ಮತಚಲಾಯಿಸಲು 34ನೇ ಎಜಿಎಂ ಸೂಚನೆಯಲ್ಲಿ ತಿಳಿಸಿದಂತೆ ಅವಕಾಶ ಮಾಡಿಕೊಡಲಾಗಿದೆ. ರಿಮೋಟ್ ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಇ–ಮತದಾನದ ಪ್ರಕ್ರಿಯೆಗಳನ್ನು 34ನೇ ಎಜಿಎಂ ಸೂಚನೆಯಲ್ಲಿ ನೀಡಲಾಗಿದೆ. ಷೇರುದಾರರ ಇ–ಮತದಾನದ ಅರ್ಹತೆಗೆ ಕಟ್ ಆಫ್ ದಿನಾಂಕ ಸೋಮವಾರ, 9ನೇ ಸೆಪ್ಟಂಬರ 1024 ಆಗಿರುತ್ತದೆ. ರಿಮೋಟ್ ಇ–ಮತದಾನ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ.

6. ಕಟ್ ಆಫ್ ದಿನಾಂಕ ಅಂದರೆ ಸೋಮವಾರ, 9ನೇ ಸೆಪ್ಟಂಬರ್, 2024ರವರೆಗೆ ಒಬ್ಬ ವ್ಯಕ್ತಿಯ ಹೆಸರು ಕಂಪನಿಯ ಸದಸ್ಯರ ಪಟ್ಟಿಯಲ್ಲಿ ದಾಖಲಾಗಿ, ಅಥವಾ ಡೆಪಾಸಿಟರಿಗಳು ಲಾಭದಾಯಕ ಮಾಲೀಕರ ಪಟ್ಟಿಯಲ್ಲಿದ್ದರೆ, ಅಂಥವರು, ರಿಮೋಟ್ ಇ–ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇನ್ಸ್ಟಾಪೋಲ್ ಮೂಲಕ ಮತದಾನದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
7. ಇ–ಮೇಲ್ ವಿಳಾಸ ನೋಂದಾಯಿಸುವುದು/ಅಪ್‌ಡೇಟ್ ಮಾಡುವ ವಿಧಾನ :

ಎ) ಸದಸ್ಯರು ತಮ್ಮ ಇ–ಮೇಲ್ ಐಡಿಯನ್ನು ಕಂಪನಿ/ಡೆಪಾಸಿಟರಿಗಳ ಬಳಿ ನೋಂದಾಯಿಸದೆ/ಅಪ್‌ಡೇಟ್ ಮಾಡದೆ ಇದ್ದಲ್ಲಿ, ಅಂಥಹ ಸದಸ್ಯರು ತಮ್ಮ ಇ–ಮೇಲ್ ವಿಳಾಸವನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಬಳಿ ನೋಂದಾಯಿಸುವುದು/ಅಪ್‌ಡೇಟ್ ಮಾಡಲು (ಡಿಮೆಟೀರಿಯಲೈಸ್ಡ್ ರೂಪದಲ್ಲಿದ್ದರೆ) ಅಥವಾ ಕೆಫಿನ್ (ಒಂದು ವೇಳೆ ಷೇರುಗಳು ಭೌತಿಕ ರೂಪದಲ್ಲಿದ್ದರೆ) ನಮೂನೆ ಐಎಸ್‌ಆರ್–1 ಜೊತೆಗೆ ವಿನಂತಿಯನ್ನು ಸೂಕ್ತ ದಾಖಲೆಗಳೊಂದಿಗೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಯುನಿಟ್ ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಸೆಲಿನಿಯಂ ಟವರ್–ಬಿ, ಪ್ಲಾಟ್ ನಂ. 31 7 32, ಫೈನಾನ್ಶಿಯಲ್ ಜಿಲ್ಲೆ, ನನಕ್ರಂಗುಡ, ಸೆರಿಲಿಂಗಂಪಲ್ಲಿ, ಹೈದರಾಬಾದ್–500 032 ಇಲ್ಲಿ ಅಥವಾ ಡಿಜಿಟಲ್ ಸಹಿ ಮಾಡಿದ ದಾಖಲೆಗಳನ್ನು **ein.ris@kfintech.com** ಗೆ ವಿನಂತಿಯೊಂದಿಗೆ ಸಲ್ಲಿಸಲು ಕೋರಲಾಗಿದೆ.

8. ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಇಜಿಎಂಗೆ ಹಾಜರಾಗಬಹುದು. ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ನಿರ್ಣಯದ ಮೇಲಿನ ಮತವನ್ನು ಷೇರುದಾರರಿಂದ ಚಲಾಯಿಸಿದ ನಂತರ, ಅವನು/ಅವಳು ಅದನ್ನು ತರುವಾಯ ಬದಲಾಯಿಸಲು ಅಥವಾ ಪುನಃ ಮತ ಚಲಾಯಿಸಲು ಅನುಮತಿ ನೀಡಲಾಗುವುದಿಲ್ಲ.
9. ಯಾವುದೇ ವ್ಯಕ್ತಿ ನೋಟೀಸ್ ಕಳುಹಿಸಿದ ನಂತರ ಅಂದರೆ ಕಟ್ ಆಫ್ ದಿನಾಂಕ ಅಂದರೆ ಸೋಮವಾರ 9ನೇ ಸೆಪ್ಟಂಬರ್ 2024ರ ನಂತರ ಷೇರುಗಳನ್ನು ಪಡೆದು ಸದಸ್ಯರಾದಲ್ಲಿ ಅಂಥವರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳಿಗಾಗಿ evoting@kfintech.com.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಅಥವಾ ಕೆಫಿನ್ ನ ಟೋಲ್‌ಫ್ರೀ ಸಂ. 1800 309 4001 ಗೆ ಕರೆ ಮಾಡಬಹುದು. ಆದಾಗ್ಯೂ, ಈಗಾಗಲೇ ಕೆಫಿನ್ ನೊಂದಿಗೆ ರಿಮೋಟ್ ಇ–ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದರೆ, ಅಂಥವರು ಈಗಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ ಮತದಾನ ಮಾಡಬಹುದು.
10. ಇ–ವೋಟಿಂಗ್ ಸೌಲಭ್ಯ ಮತ್ತು / ಅಥವಾ ವಿಸಿ/ಒಎವಿಎಂ ಸೌಲಭ್ಯದ ಮೂಲಕ ಇಜಿಎಂಗೆ ಹಾಜರಾಗುವ ಬಗ್ಗೆ ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳಿದ್ದಲ್ಲಿ ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (ಎಫ್‌ಎಕ್ಯು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ಡ್ರಾಪ್‌ಡೌನ್ ಮೆನು ವಿನ "ಡೌನ್‌ಲೋಡ್" ವಿಭಾಗದಲ್ಲಿ ಕೆಫಿನ್ ವೆಬ್‌ಸೈಟ್ https://.evoting.kfintech/com/ ನ್ನು ಆಧಾರ ಮಾಡಿಕೊಳ್ಳಿ. ಇ–ವೋಟಿಂಗ್ ಬಗ್ಗೆ ಸಂಬಂಧಿಸಿದ ಎಲ್ಲಾ ಕುಂದುಕೊರತೆಗೆಳಿಗಾಗಿ ಶ್ರೀ ಭಾಸ್ಕರ್ ರಾಯ್, ಸಹಾಯಕ ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲಿನಿಯಂ ಟವರ್–ಬಿ, ಪ್ಲಾಟ್ ನಂ. 31 & 32, ಫೈನಾನ್ಶಿಯಲ್ ಜಿಲ್ಲೆ, ನನಕ್ರಂಗುಡ, ಸೆರಿಲಿಂಗಂಪಲ್ಲಿ, ಹೈದರಾಬಾದ್–500032 ಇ–ಮೇಲ್ : einward.ris@kfintech.com, ಇವರನ್ನು ಸಂಪರ್ಕಿಸಿ ಅಥವಾ ಟೋಲ್‌ಫ್ರೀ ಸಂ. 1800–309–4001 ಗೆ ಕರೆಮಾಡಿ.
11. ಸದಸ್ಯರು ಎಜಿಎಂ ಸೂಚನೆಯನ್ನು ಅದರಲ್ಲೂ ನಿರ್ದಿಷ್ಟವಾಗಿ 34ನೇ ಎಜಿಎಂ ಗೆ ಹಾಜರಾಗುವ ಸೂಚನೆಗಳು, ರಿಮೋಟ್ ಇ–ಮತದಾನದ ಮೂಲಕ ಮತಚಲಾಯಿಸುವುದು ಅಥವಾ ಎಜಿಎಂ ಸಂದರ್ಭದಲ್ಲಿ ಇನ್ಸ್ಟಾ ಪೋಲ್ ಮೂಲಕ ಮತದಾನದ ಬಗ್ಗೆ ಎಜಿಎಂ ಸೂಚನೆಯ ಟಿಪ್ಪಣಿಯಲ್ಲಿ ನೀಡಲಾದ ವಿವರಗಳನ್ನು ಜಾಗರೂಕತೆಯಿಂದ ಓದಿ ತಿಳಿದುಕೊಳ್ಳಲು ವಿನಂತಿಸಲಾಗಿದ
12. ವಾರ್ಷಿಕ ವರದಿ ಬಗ್ಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ಸದಸ್ಯರು ಕೆಫಿನ್ ಗೆ ಇ–ಮೇಲ್ ಐಡಿ einward.ris@kfintech.com, ಅಥವಾ complianceofficer@aadharhousing.comಇವರಿಗೆ ಬರೆಯಬಹುದು

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಹರ್ಷದ ಪಾಠಕ್
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ
ಎಸಿಎಸ್:19534

ಸ್ಥಳ: ಮುಂಬಯಿ
ದಿನಾಂಕ: 21ನೇ ಆಗಸ್ಟ್ 2024

ಮೋದಿ ಪೋಲೆಂಡ್ ಪ್ರವಾಸ: ಭಾರತೀಯರ ಸಂತಸ

ವಾರ್ಸ್: 3 ದಿನಗಳ ಅಧಿಕೃತ ಭೇಟಿಗಾಗಿ ಪೋಲೆಂಡ್ ಮತ್ತು ಉಕ್ರೇನ್‌ಗೆ ಪ್ರಯಾಣ ಬೆಳೆಸಿ ರುವ ಪ್ರಧಾನಿ ನರೇಂದ್ರ ಮೋದಿ ಬುಧವಾರ ಪೋಲೆಂಡ್ ರಾಜಧಾನಿ ವರ್ಸಾವ್ ನಗರ ತಲುಪಿದರು. ಮೋದಿ ಅವರಿಗೆ ವರ್ಸಾವ್‌ನಲ್ಲಿನ ಭಾರತೀಯ ಸಮುದಾಯ ದಿಂದ ಅದ್ದೂರಿ ಸ್ವಾಗತ ಸಿಕ್ಕಿದೆ.

ಭಾರತ–ಪೋಲೆಂಡ್ ರಾಜತಾಂತ್ರಿಕ ಸಂಬಂಧದ 70ನೇ ವಾರ್ಷಿಕೋತ್ಸವ ಸಂದರ್ಭ ಮೋದಿ ಭೇಟಿ ಬಹಳ ನಿರೀಕ್ಷೆ ಹುಟ್ಟಿಸಿದೆ. ಆರ್ಥಿಕ ಒಪ್ಪಂದ, ಆರೋಗ್ಯ–ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಎರಡೂ ದೇಶಗಳ ನಡುವೆ ಸಹಕಾರ ಹೆಚ್ಚಿಸುವ ಬಗ್ಗೆ ಮಾತುಕತೆ ನಡೆಯಲಿದೆ. 45 ವರ್ಷಗಳಲ್ಲಿ ಪೋಲೆಂಡ್‌ಗೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆ ಮೋದಿಯವರದ್ದಾಗಿದೆ. ಪ್ರಧಾನಿ ಡೊನಾಲ್ಡ್ ಟಸ್ಕ್, ಅಧ್ಯಕ್ಷ ಆ್ಯಂಡ್ರೆಡೂಡ್ ಜತೆ ದ್ವಿಪಕ್ಷೀಯ ಸಭೆ, ಉದ್ಯಮಿಗಳ ಜತೆಗೂ ಪ್ರಧಾನಿ ಮೋದಿ ಚರ್ಚೆ ನಡೆಸಲಿದ್ದಾರೆ. ನವನಗರದ ಜಾಮ್ ಸಾಹೇಬ್ ಸ್ಮಾರಕಕ್ಕೆ ಪುಷ್ಪಾರ್ಚನೆ ಮತ್ತು ಮಾಂಟೆ ಕ್ಯಾಸಿನೊ ಕದನದ ಸ್ಮಾರಕ ಮತ್ತು ಅದರ ಪಕ್ಕದಲ್ಲಿರುವ ಕೊಲ್ಹಾಪುರ ಸ್ಮಾರಕಕ್ಕೆ ಭೇಟಿ ನೀಡಲಿದ್ದಾರೆ. ವಿಮಾನ ನಿಲ್ದಾಣದಲ್ಲಿ ಪೋಲೆಂಡ್ ಅಧಿಕಾರಿಗಳಿಂದ ಸಾಂಪ್ರದಾಯಿಕ ಸ್ವಾಗತ ಬಳಿಕ ಭಾರತೀಯ ಸಮುದಾಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಭರ್ಜರಿ ಸ್ವಾಗತ ಕೋರಿತು. ಮಹಿಳೆಯರು ಪ್ರಧಾನಿಗೆ ರಾಖಿ ಕಟ್ಟಿ ಸಂಭ್ರಮಿಸಿದ್ದಾರೆ. ಪುಟ್ಟ ಮಕ್ಕಳ ಜತೆ ಮೋದಿ ಮಾತುಕತೆ ನಡೆಸಿದರು.

ನಾಳೆ ಉಕ್ರೇನ್‌ಗೆ ರೈಲಿನಲ್ಲಿ ಪ್ರಯಾಣ

ದೆಹಲಿ: ಸದ್ಯ ಪೋಲೆಂಡ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಆ.23ರಂದು ಉಕ್ರೇನ್‌ಗೆ ಭೇಟಿ ನೀಡಲಿದ್ದಾರೆ. ಉಕ್ರೇನ್ –ರಷ್ಯಾ ಸಂಘರ್ಷ ಕೊನೆಗಾಣಿಸುವ ಕುರಿತು ಭಾರತದ ವಿಚಾರಗಳನ್ನು ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಜೆಲೆನ್‌ಸ್ಕಿ ಜತೆ ಹಂಚಿಕೊಳ್ಳುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ. 'ಭಾರತ ಉತ್ತಮ ಸ್ನೇಹಿತನಾಗಿ ಹಾಗೂ ಪ್ರಮುಖ ಪಾಲುದಾರ ದೇಶವಾಗಿ ಉಕ್ರೇನ್‌ನಲ್ಲಿ ಶೀಘ್ರ ಶಾಂತಿ ಸ್ಥಾಪನೆ ಆಶಿಸುತ್ತದೆ' ಎಂದು ಮೋದಿ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities.
Not for release, publication or distribution directly or indirectly, outside India.
INITIAL PUBLIC OFFERING OF EQUITY SHARES ON THE MAIN BOARD OF THE STOCK EXCHANGES IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED.

PUBLIC ANNOUNCEMENT

(Please scan the QR Code to view the DRHP)

Manjushree ADVANCED PACKAGING SOLUTIONS

MANJUSHREE TECHNOPACK LIMITED

Manjushree Technopack Limited (our **"Company"** or the **"Issuer"**) was originally incorporated as "Manjushree Extrusions Private Limited" at Guwahati, as a private limited company under the Companies Act, 1956, pursuant to a certificate of incorporation dated November 13, 1987, issued by the Registrar of Companies, Assam, Meghalaya, Manipur, Tripura, Nagaland, Arunachal Pradesh & Mizoram situated at Shillong. Subsequently, our Company was converted into a public limited company and consequently our name was changed to "Manjushree Extrusions Limited" and our certificate of incorporation was endorsed to that effect. Further, pursuant to a special resolution passed by the Shareholders, which was confirmed by an order of the Company Law Board, Eastern Region Bench, Kolkata, dated May 23, 2003, the registered office of our Company was shifted from the state of Assam, India to Karnataka, India with effect from July 31, 2003 and a certificate of registration of the order of the company law board confirming transfer of the registered office from one state to another was issued by the RoC on September 25, 2003. Further, pursuant to a special resolution dated August 30, 2008, our Shareholders approved the change in the name of our Company from "Manjushree Extrusions Limited" to "Manjushree Global Limited" or such other name as may be approved by the RoC and the Central Government, subject to discretion of our Board. Pursuant to our letter dated May 4, 2009 to the RoC and a fresh certificate of incorporation consequent upon change of name dated May 21, 2009 issued by the RoC, the name of our Company was changed to "Manjushree Technopack Limited". For further details of the change in the name and the registered office address of our Company, see *"History and Certain Corporate Matters"* on page 282 of the Draft Red Herring Prospectus dated August 20, 2024 ("**DRHP**"), filed with the Securities and Exchange Board of India ("**SEBI**") and the Stock Exchanges on August 20, 2024.

Registered and Corporate Office: MBH Tech Park, 2nd floor, Survey No. 46(P) and 47(P), Begur Hobli, Electronic City Phase-II, Bangalore 560100, Karnataka, India;
Contact Person: Rasmi Ranjan Naik, Company Secretary and Compliance Officer; **Telephone:** +91 80 4343 6200;
E-mail: ipo@manjushreeindia.com; **Website:** https://www.manjushreeindia.com/; **Corporate Identity Number:** U67120KA1987PLC032636

OUR PROMOTER: AI LENARCO MIDCO LIMITED

INITIAL PUBLIC OFFERING OF UP TO [●] EQUITY SHARES OF FACE VALUE OF ₹ 2 EACH ("EQUITY SHARES") OF MANJUSHREE TECHNOPACK LIMITED ("OUR COMPANY" OR "ISSUER") FOR CASH AT A PRICE OF ₹ [●] PER EQUITY SHARE (INCLUDING A PREMIUM OF ₹ [●] PER EQUITY SHARE) ("OFFER PRICE") AGGREGATING UP TO ₹ 30,000.00 MILLION ("OFFER") COMPRISING A FRESH ISSUE OF UP TO [●] EQUITY SHARES AGGREGATING UP TO ₹ 7,500.00 MILLION BY OUR COMPANY (THE "FRESH ISSUE") AND AN OFFER FOR SALE OF UP TO [•] EQUITY SHARES ("OFFERED SHARES") AGGREGATING UP TO ₹ 22,500.00 MILLION BY AI LENARCO MIDCO LIMITED (THE "PROMOTER SELLING SHAREHOLDER", AND SUCH OFFER FOR SALE BY THE PROMOTER SELLING SHAREHOLDER, THE "OFFER FOR SALE").

THIS OFFER INCLUDES A RESERVATION OF UP TO [●] EQUITY SHARES AGGREGATING UP TO ₹ [●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL OF OUR COMPANY) FOR SUBSCRIPTION BY ELIGIBLE EMPLOYEES (THE "EMPLOYEE RESERVATION PORTION"). OUR COMPANY, IN CONSULTATION WITH THE BOOK RUNNING LEAD MANAGERS, MAY OFFER A DISCOUNT OF UP TO [●] % (EQUIVALENT OF ₹ [●] PER EQUITY SHARE) TO THE OFFER PRICE TO ELIGIBLE EMPLOYEES BIDDING UNDER THE EMPLOYEE RESERVATION PORTION ("EMPLOYEE DISCOUNT"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]%, RESPECTIVELY OF THE POST-OFFER PAID-UP EQUITY SHARE CAPITAL OF OUR COMPANY.

OUR COMPANY, IN CONSULTATION WITH THE BRLMS, MAY CONSIDER A FURTHER ISSUE OF EQUITY SHARES THROUGH A PRIVATE PLACEMENT, PREFERENTIAL OFFER OR ANY OTHER METHOD AS MAY BE PERMITTED UNDER APPLICABLE LAW TO ANY PERSON(S), AGGREGATING UP TO ₹ 1,500.00 MILLION, AT ITS DISCRETION, PRIOR TO FILING OF THE RED HERRING PROSPECTUS WITH THE ROC ("PRE-IPO PLACEMENT"). THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLMS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO COMPLIANCE WITH RULE 19(2)(B) OF THE SECURITIES CONTRACTS (REGULATION) RULES, 1957, AS AMENDED ("SCRR"). THE PRE-IPO PLACEMENT, IF UNDERTAKEN, SHALL NOT EXCEED 20% OF THE SIZE OF THE FRESH ISSUE. PRIOR TO THE COMPLETION OF THE OFFER AND ALLOTMENT PURSUANT TO THE PRE-IPO PLACEMENT, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER OR THE OFFER MAY BE SUCCESSFUL AND WILL RESULT IN THE LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND PROSPECTUS.

THE PRICE BAND, EMPLOYEE DISCOUNT (IF ANY) AND THE MINIMUM BID LOT WILL BE DECIDED BY OUR COMPANY IN CONSULTATION WITH THE BRLMS AND WILL BE ADVERTISED IN ALL EDITIONS OF [●] (A WIDELY CIRCULATED ENGLISH NATIONAL DAILY NEWSPAPER), ALL EDITIONS OF [●] (A WIDELY CIRCULATED HINDI NATIONAL DAILY NEWSPAPER) AND [●] EDITIONS OF [●] (A WIDELY CIRCULATED KANNADA DAILY NEWSPAPER, KANNADA BEING THE REGIONAL LANGUAGE OF KARNATAKA WHERE OUR REGISTERED AND CORPORATE OFFICE IS LOCATED), AT LEAST TWO WORKING DAYS PRIOR TO THE BID/OFFER OPENING DATE AND SHALL BE MADE AVAILABLE TO BSE LIMITED ("BSE") AND NATIONAL STOCK EXCHANGE OF INDIA LIMITED ("NSE", TOGETHER WITH BSE, THE "STOCK EXCHANGES") FOR THE PURPOSES OF UPLOADING ON THEIR RESPECTIVE WEBSITES IN ACCORDANCE WITH THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED (THE "SEBI ICDR REGULATIONS").

In case of any revision in the Price Band, the Bid/Offer Period will be extended by at least three additional Working Days after such revision in the Price Band, subject to the Bid/Offer Period not exceeding 10 Working Days. In cases of force majeure, banking strike or similar unforeseen circumstances, our Company may, in consultation with the BRLMs, for reasons to be recorded in writing, extend the Bid /Offer Period for a minimum of one Working Day, subject to the Bid/Offer Period not exceeding 10 Working Days. Any revision in the Price Band and the revised Bid/Offer Period, if applicable, shall be widely disseminated by notification to the Stock Exchanges, by issuing a public notice, and also by indicating the change on the respective websites of the BRLMs and at the terminals of the Members of the Syndicate and by intimation to Designated Intermediaries and the Sponsor Bank(s), as applicable.

The Offer is being made in terms of Rule 19(2)(b) of the Securities Contracts (Regulation) Rules, 1957, as amended (**"SCRR"**) read with Regulation 31 of the SEBI ICDR Regulations. This Offer is being made through the Book Building Process in accordance with Regulation 6(1) of the SEBI ICDR Regulations wherein not more than 50% of the Net Offer shall be available for allocation on a proportionate basis to Qualified Institutional Buyers (**"QIBs"** and such portion, "QIB Portion"), provided that our Company in consultation with the BRLMs may allocate up to 60% of the QIB Portion to Anchor Investors on a discretionary basis (**"Anchor Investor Portion"**). One-third of the Anchor Investor Portion shall be reserved for domestic Mutual Funds, subject to valid Bids being received from the domestic Mutual Funds at or above the Anchor Investor Allocation Price in accordance with the SEBI ICDR Regulations. In the event of under-subscription, or non-allocation in the Anchor Investor Portion, the balance Equity Shares shall be added to the QIB Portion (other than Anchor Investor Portion) ("Net QIB Portion"). Further, 5% of the Net QIB Portion shall be available for allocation on a proportionate basis to Mutual Funds only, and the remainder of the Net QIB Portion shall be available for allocation on a proportionate basis to all QIBs (other than Anchor Investors), including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining Net QIB Portion for proportionate allocation to QIBs. Further, (a) not less than 15% of the Net Offer shall be available for allocation to Non-Institutional Bidders (out of which one third shall be reserved for Bidders with Bids exceeding ₹ 0.20 million and up to ₹ 1.00 million and two-thirds shall be reserved for Bidders with Bids exceeding ₹ 1.00 million) and (b) not less than 35% of the Net Offer shall be available for allocation to Retail Individual Bidders (**'RIBs'**) in accordance with the SEBI ICDR Regulations, subject to valid Bids being received from them at or above the Offer Price. All potential Bidders, other than Anchor Investors, are mandatorily required to participate in the Offer through the Application Supported by Blocked Amount (**"ASBA"**) process by providing details of their respective ASBA Account (as defined hereinafter) and UPI ID in case of UPI Bidders (defined hereinafter), which will be blocked by the Self Certified Syndicate Banks (**"SCSBs"**) or the Sponsor Bank(s), as the case may be, to the extent of their respective Bid Amounts. Anchor Investors are not permitted to participate in the Anchor Investor Portion through the ASBA process. For details, see the section titled *"Offer Procedure"* on page 455 of the DRHP.

This public announcement is being made in compliance with of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to undertake initial public offering of its Equity Shares pursuant to the Issue and has filed the DRHP dated August 20, 2024 with SEBI on August 20, 2024.

Pursuant to Regulation 26(1) of the SEBI ICDR Regulations, the DRHP filed with SEBI shall be made available to the public for comments, if any, for a period of at least 21 days, from the date of such filing by hosting it on the websites of SEBI at www.sebi.gov.in, the Stock Exchanges i.e., BSE at www.bseindia.com, NSE at www.nseindia.com, website of the Company at www.manjushreeindia.com and the websites of the book running lead managers to the Offer i.e. JM Financial Limited at www.jmfl.com, Avendus Capital Private Limited at http://www.avendus.com, Citigroup Global Markets India Private Limited at www.online.citibank.co.in/rhtm/citigroupglobalscreen1.htm, Goldman Sachs (India) Securities Private Limited at www.goldmansachs.com and ICICI Securities Limited at www.icicisecurities.com (collectively the **"BRLMs"**). Our Company hereby invites the members of the public to give comments on the DRHP dated August 20, 2024 filed with SEBI with respect to disclosures made in the DRHP. The public is requested to send a copy of the comments sent to SEBI, to the Company Secretary and Compliance Officer of our Company and the BRLMs at their respective addresses mentioned herein. All comments must be received by SEBI, the Company and/or the BRLMs and/or the Company Secretary and Compliance Officer of our Company in relation to the Issue on or before 5:00 p.m. on the 21st day from the aforesaid date of filing the DRHP with SEBI.

Investments in equity and equity-related securities involves a degree of risk and investors should not invest any funds in the Issue unless they can afford to take the risk of losing their entire investment. Investors are advised to read the risk factors carefully before taking an investment decision in the Issue. For taking an investment decision, investors must rely on their own examination of our Company and the Issue, including the risks involved. The Equity Shares in the Issue have not been recommended or approved by the SEBI, nor does SEBI guarantee the accuracy or adequacy of the contents of the DRHP. Specific attention of the investors is invited to "*Risk Factors*" on page 31 of the DRHP.

Any decision to invest in the Equity Shares described in the DRHP may only be made after the red herring prospectus (**"RHP"**) has been filed with the RoC and must be made solely on the basis of such RHP as there may be material changes in the RHP from the DRHP. The Equity Shares, when offered, through the RHP, are proposed to be listed on the Stock Exchanges.

The liability of the members of our Company is limited by shares. For details of the main objects of our Company as contained in its Memorandum of Association, see "*History and Certain Corporate Matters*" on page 282 of the DRHP.

For details of the share capital and capital structure of our Company and the names of the signatories to the Memorandum of Association and the number of shares of our Company subscribed by them, see "*Capital Structure*" on page 92 of the DRHP.

BOOK RUNNING LEAD MANAGERS

JM FINANCIAL	Avendus	citi	Goldman Sachs	ICICI Securities
JM Financial Limited 7th Floor, Cnergy, Appasaheb Marathe Marg Prabhadevi, Mumbai 400 025, Maharashtra, India **Telephone:** (+91 22) 6630 3030/ 3262 **E-mail:** Mtl.ipo@jmfl.com **Investor grievance e-mail:** grievance.ibd@jmfl.com **Website:** www.jmfl.com **Contact person:** Prachee Dhuri **SEBI registration number :** INM000010361	**Avendus Capital Private Limited** Platina Building, 9th Floor, 901, Plot No C-59 Bandra-Kurla Complex, Bandra (East), Mumbai - 400 051, Maharashtra, India **Telephone:** (+91 22) 6648 0050 **Email:** Manjushree.ipo@avendus.com **Investor grievance email:** investorgrievance@avendus.com **Website:** http://www.avendus.com **Contact person:** Sarthak Sawa/ Adithya K **SEBI registration number:** INM000011021	**Citigroup Global Markets India Private Limited** 1202, 12th Floor, First International Financial Center G –Block Bandra Kurla Complex, Bandra (East), Mumbai 400 098, Maharashtra, India **Telephone:** +91 22 6175 9999 **E-mail:** manjushreeipo@citi.com **Investor grievance E-mail:** investors.cgmib@citi.com **Website:** www.online.citibank.co.in/rhtm/ citigroupglobalscreen1.htm **Contact person:** Jitesh Agarwal **SEBI registration number:** INM000010718	**Goldman Sachs (India) Securities Private Limited** 951-A, Rational House Appasaheb Marathe Marg, Prabhadevi Mumbai 400 025 Maharashtra, India **Telephone:** +91 22 6616 9000 **E-mail:** mtlipo@gs.com **Investor grievance e-mail:** india-client-support@gs.com **Website:** www.goldmansachs.com **Contact person:** Mukarram Rajkotwala **SEBI registration number:** INM000011054	**ICICI Securities Limited** ICICI Venture House, Appasaheb Marathe Marg, Prabhadevi Mumbai 400 025 Maharashtra, India **Telephone:** +91 91 22 6807 7100 **Email:** Manjushree.ipo@icicisecurities.com **Investor grievance email:** customercare@icicisecurities.com **Website:** www.icicisecurities.com **Contact person:** Sohail Puri/ Abhijit Diwan **SEBI registration number:** INM000011179

REGISTRAR TO THE OFFER

KFINTECH EXPERIENCE TRANSFORMATION

KFin Technologies Limited
Selenium, Tower B, Plot No- 31 and 32, Financial District, Nanakramguda, Serilingampally, Hyderabad, Rangareddi 500 032, Telangana, India **Telephone:** +91 40 6716 2222/ 18003094001
E-mail: manjushree.ipo@kfintech.com; **Investor grievance E-mail:** einward.ris@kfintech.com; **Website:** www.kfintech.com; **Contact person:** M Murali Krishna
SEBI registration number: INR000000221

All capitalized terms used herein and not specifically defined shall have the same meaning as ascribed to them in the DRHP.

MANJUSHREE TECHNOPACK LIMITED
On behalf of the Board of Directors
Sd/-
Rasmi Ranjan Naik
Company Secretary and Compliance Officer

Place : Bangalore
Date : August 21, 2024

MANJUSHREE TECHNOPACK LIMITED is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the DRHP dated August 20, 2024 with SEBI on August 20, 2024. The DRHP shall be available on the website of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com and is available on website of the company i.e. https://www.manjushreeindia.com, websites of the BRLMs, i.e. JM Financial Limited at www.jmfl.com, Avendus Capital Private Limited at http://www.avendus.com, Citigroup Global Markets India Private Limited at www.online.citibank.co.in/rhtm/ citigroupglobalscreen1.htm, Goldman Sachs (India) Securities Private Limited at www.goldmansachs.com and ICICI Securities Limited at www.icicisecurities.com. Potential investors should note that investment in equity shares involves a high degree of risk and for details relating to such risks, please see the section entitled *"Risk Factors"* on page 31 of the DRHP and the details set out in the RHP, when filed. Potential investors should not rely on the DRHP filed with SEBI for making any investment decision.

The Equity Shares have not been and will not be registered under the United States Securities Act of 1933, as amended (the **"U.S. Securities Act"**) or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold (a) in the United States only to "qualified institutional buyers" (as defined in Rule 144A under the U.S. Securities Act and referred to in the Draft Red Herring Prospectus as "U.S. QIBs"), in private transactions exempt from the registration requirements of the U.S. Securities Act, and (b) outside of the United States in offshore transactions as defined in and in compliance with Regulation S and the applicable laws of the jurisdiction where those offers and sales are made. There will be no public offering in the United States.

CONCEPT

@vishwavaninews

ವಿಶ್ವವಾಣಿ
ಆರಾಮ

ಬೆಂಗಳೂರು
ಗುರುವಾರ
22 | 08 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ತಮ್ಮ ಕೆಂಪು ಜೀಪನ್ನು ಚಲಾಯಿಸಿಕೊಂಡು ವಾನಳ್ಳಿಯ ಆಲೆಮನೆ ಹಬ್ಬಕ್ಕೆ ಹೊರಟರೆ ರಾಣೆಬೆನ್ನೂರಿನಲ್ಲೋ, ಅಕ್ಕಿ ಆಲೂರಿನಲ್ಲೋ ರಸ್ತೆ ಪಕ್ಕ ತಟಾಕು ಗಾಡಿ ನಿಲ್ಲಿಸಿ, ತಮ್ಮ ಅಂಕಣ ಬರೆದ ನಂತರವೇ ಇವರು ಮುಂದೆ ಸಾಗುವುದು!

ಓದೋಣು ಬಾರಾ! ಕುಡಿಯೋಣು ಬಾರಾ!

• ರಾಜು ಅಡಕಳ್ಳಿ



ಇವರಿಗೆ ವಿಶ್ವೇಶ್ವರ ಭಟ್ಟರು ಎನ್ನುವುದಕ್ಕಿಂತಲೂ ಅಕ್ಷರೇಶ್ವರ ಭಟ್ಟರು ಎಂದರೆ ಅದು ಅಕ್ಷರಶಃ ಅರ್ಥಪೂರ್ಣ. ಕಾರಣ ಬರೆಯುವುದನ್ನು ಬಿಟ್ಟು ಇವರು ಯಾವ ಕಾಲಕ್ಕೂ ಇರಲಾರರು. ಬರಹವಿಲ್ಲದಿದ್ದರೆ ಸೊರಗುವ, ಕೊರಗುವ ವ್ಯಕ್ತಿ ಇವರು. ಬರಹವೇ ಇವರಿಗೆ ಶಕ್ತಿ. ಭಕ್ತಿ. ಅದೇ ಇವರ ಯುಕ್ತಿ.

ಕಾಶಿ ದೇವರ ಹೆಸರಿನ ಈ ಭಟ್ಟರ ಅಕ್ಷರ ಯಾತ್ರೆಯೇ ಅನವರತ. ಇವರ ಕೈ ಕಟ್ಟಿ ಹಾಕಿದರೂ ಕೂಡಾ ಇವರು ಹೇಗಾದರೂ ಮಾಡಿ ಅಕ್ಷರಗಳನ್ನು ಪೋಣಿಸಿ, ಲೇಖನಗಳ ಮಾಲೆ, ಪುಸ್ತಕಗಳ ಸರಪಳಿ ಕಟ್ಟುತ್ತಾ ಓದುಗರನ್ನು ತಮ್ಮ ಚೆಂದದ ಅಕ್ಷರ ಲೋಕದಲ್ಲಿ ಸುತ್ತಿಸಬಲ್ಲರು. ನೀವು ನಾಲ್ಕು ದಿನ ಏನನ್ನೂ ಬರೆಯಬಾರದು ಎಂದು ಹೇಳುವುದೇ ಇವರಿಗೆ ವಿಧಿಸುವ ದೊಡ್ಡ ಶಿಕ್ಷೆ.

ಭಟ್ಟರು ಹುಟ್ಟಿದ್ದು ಘಟ್ಟದ ಕೆಳಗಿನ ಮೂರೂರಿನಲ್ಲಿ. ಶಾಲೆ, ಹೈಸ್ಕೂಲು ಓದಿದ್ದು ಘಟ್ಟದ ಮೇಲಿನ ಭತ್ತಗುತ್ತಿಗೆ, ತುಡುಗುಣಿ, ಗೋಳಿಯಲ್ಲಿ. ಹೀಗಾಗಿ ಉಪ್ಪು ನೀರು ಮತ್ತು ಸಿಹಿ ನೀರು ಸಮ ಪ್ರಮಾಣದಲ್ಲಿ ಭಟ್ಟಿ ಇಳಿಸಿದಂತೆ ಈ ಭಟ್ಟರಲ್ಲಿ ಕಾಕ್ಟೇಲ್ ಆಗಿದೆ. ಇದರಿಂದಾಗಿ ತೆಂಕು-ಬಡಗು ತಿಟ್ಟು ಯಕ್ಷಗಾನಗಳು ಒಟ್ಟಾಗಿ ಮನರಂಜನೆ ನೀಡುವಂತೆ ಈ ಭಟ್ಟರ ಲೇಖನಗಳೂ ವಿಚಾರ ವಿನೋದಗಳ ಹದವಾದ ರಸಪಾಕ.

ಇದರಿಂದಾಗಿ ಭಟ್ಟರು ಒಂದು ವಾರ ಅಕಸ್ಮಾತ್ ಬರೆಯುವುದಿಲ್ಲ ಎಂದು ಕಲ್ಪಿಸಿಕೊಂಡರೆ ಸಾಂಬಾರಿನಲ್ಲಿ ಉಪ್ಪೇ ಇಲ್ಲ ಎಂಬಂತೆ. ಕನ್ನಡ ಪತ್ರಿಕೋದ್ಯಮವೇ ಸಪ್ಪೆಸಪ್ಪೆ. ಹಾಗಂತ ವಿಶ್ವೇಶ್ವರ ಭಟ್ಟರು ಹುಟ್ಟಿದ್ದು ಪತ್ರಿಕೋದ್ಯಮದ ಪಡಸಾಲೆಯಲ್ಲೇನಲ್ಲ. ಇವರು ಓದಿದ್ದು ಬಿ.ಎಸ್ಸಿ. ಮುಂದೆ ಎಂ.ಎಸ್.ಸಿ. ಭೂಗರ್ಭ ಶಾಸ್ತ್ರವನ್ನು. ತದನಂತರ ಪತ್ರಿಕೋದ್ಯಮದ ಗರ್ಭಗುಡಿಗೆ ಹೋಗಬೇಕೆಂದು ಪತ್ರಿಕೋದ್ಯಮದಲ್ಲೂ ಎಂ.ಎ. ಓದುತ್ತಾರೆ. ಅಲ್ಲಿ ಐದಾರು ಬಂಗಾರದ ಪದಕಗಳ ವಿಜೇತರಾಗಿದ್ದರು.

ಲಂಡನ್‌ನಲ್ಲಿ ಓದು

ವಿಶ್ವೇಶ್ವರ ಭಟ್ಟರು ತಮ್ಮ ನುಣುಪಾದ ಗಲ್ಲದ ಮೇಲೆ ಗಡ್ಡ ಚಿಗುರುತ್ತಲೇ ಇನ್ನೂ ಓದಬೇಕೆಂದು ಅಂತರಾಷ್ಟ್ರೀಯ ಸ್ಕಾಲರ್ ಶಿಪ್ ಪಡೆದು ಲಂಡನ್ ಪಕ್ಕದ ಕಾರ್ಡಿಫಿಗೆ ಪತ್ರಿಕೋದ್ಯಮದ ಅಧ್ಯಯನಕ್ಕೆಂದು ಪಾಟಿಚೀಲ, ಪೆನ್ನು ಹಿಡಿದು ಹೊರಟೇಬಿಟ್ಟರು. ಅವರ ಕಾಲೇಜು ದಿನಗಳಲ್ಲಿ ಹೆಚ್ಚಾಗಿ, ಆಗಲೇ ಅವಲೋಕನ ಎಂಬ ಕೈ ಬರಹದ ಪತ್ರಿಕೆಯನ್ನು ಇವರು ಪ್ರಕಟಿಸುತ್ತಿದ್ದರು. ಮುದ್ರಿತ ಅಕ್ಷರಗಳಿಗಿಂತ ಈ ಭಟ್ಟರ ಕೈಬರಹವೇ ಇನ್ನಷ್ಟು ಮುದ್ದಾಗಿದ್ದರಿಂದ, ಈ ಅವಲೋಕನವು ಧಾರವಾಡ ವಿಶ್ವವಿದ್ಯಾಲಯದ ಜನಪ್ರಿಯ ಪತ್ರಿಕೆಯಾಯಿತು!

ಈ ಭಟ್ಟರಿಗೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಏಳೆಂಟು ನೂರು ರೂಪಾಯಿ ಸಂಬಳಕ್ಕೆ ಕೆಲಸ ಮಾಡಿಯೂ ಗೊತ್ತು. ಈಗ ಏಳೆಂಟು ನೂರು ಮಂದಿಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಕೆಲಸ ನೀಡಿದ ವಿಶ್ವವಾಣಿ, ಲೋಕ ಧ್ವನಿ ಪತ್ರಿಕೆಗಳ ಸಾರಥಿಯಾಗಿ ಮುನ್ನಡೆಸುವುದೂ ಗೊತ್ತು. ವಿಶ್ವೇಶ್ವರರು ವಿಜಯ ಕರ್ನಾಟಕದ ಸಂಪಾದಕರಾಗಿ ಅದರ ಪ್ರಸಾರವನ್ನು ನಂಬರ್ ಒನ್ ಸ್ಥಾನಕ್ಕೇರಿಸಿದ್ದರು. ಉಪ ಸಂಪಾದಕರಾಗಿ, ಮುಂದೆ ಮುಖ್ಯ ಸಂಪಾದಕರಾಗಿ ಕನ್ನಡ ಪ್ರಭದ ಕನ್ನಡಿಯಲ್ಲೂ ಇವರು ಪ್ರತಿಫಲಿಸಿದ್ದರು. ಸುವರ್ಣ ಟಿವಿಯ ಮುಖ್ಯಸ್ಥರಾಗಿಯೂ ಇವರ ಕೊಡುಗೆಯಿದೆ.

ಈ ನಡುವೆ ಇಂಡಿಯನ್ ಎಕ್ಸಪ್ರೆಸ್ಸಿನವರು ಹೊಸದಾಗಿ ಪ್ರಾರಂಭಿಸಿದ್ದ ಏಷಿಯನ್ ಸ್ಕೂಲ್ ಆಫ್ ಜರ್ನಲಿಸಂ ಕಾಲೇಜಿಗೆ ಅಸಿಸ್ಟೆಂಟ್ ಪ್ರೊಫೆಸರ್ ಆಗುವ ಮೂಲಕ ತಾವು ಉತ್ತಮ ಬರಹಗಾರರಷ್ಟೇ ಅಲ್ಲ, ಒಳ್ಳೆಯ ಮಾಸ್ತರರೂ ಹೌದೆಂಬ ಛಾಪು ಮೂಡಿಸಿದ್ದರು.

ಬಿಸಿ ಮುಟ್ಟಿಸಿದ್ದೇ ಹೆಚ್ಚು

ಭಟ್ಟರು ಎರಡು ಬಾರಿ ಜೀವನದಲ್ಲಿ ಪೆಟ್ಟು ತಿಂದಿದ್ದು. ಹುಡುಗಾಟಿಕೆಯಲ್ಲಿ ಒಮ್ಮೆ ಇವರು ಅಜ್ಜನಮನೆ ಭತ್ತಗುತ್ತಿಗೆಯಲ್ಲಿ ನಮ್ಮೊಂದಿಗೆ ಬರ್ಕಲಿ ಸಿಗರೇಟ್ ಧಮ್ ಎಳೆದಾಗ... ಇನ್ನೊಮ್ಮೆ ಆಸ್ಸಾಂ ವಿದ್ಯಾರ್ಥಿ ಚಳವಳಿಗೆ ಧುಮುಕಿ ಗೌಹಾಟಿಯಲ್ಲಿ ಪೊಲೀಸರು ಲಾಠಿ ಬೀಸಿದಾಗ. ಇವೆರಡನ್ನು ಬಿಟ್ಟರೆ ಇವರು ತಮ್ಮ ಬಾರುಕೋಲಿನಂಥ ಪೆನ್ನಿನಿಂದ,ಯಾರ್ಯಾರಿಗೆ ಯಾವಾಗ ಹೇಗೆ ಬಿಸಿ ಮುಟ್ಟಿಸಬೇಕೋ ಅದರಂತೆ ಬಿಸಿ ಮುಟ್ಟಿಸಿದ್ದೇ ಹೆಚ್ಚು.

ಸ್ವಂತ ಪತ್ರಿಕೆಯ ಸಾಹಸ

ಬೇರೆಬೇರೆ ಸುದ್ದಿ ಸಂಸ್ಥೆಗಳಲ್ಲಿ ಹೀಗೆ ಕೆಲಸ ಮಾಡಿದ ನಂತರ, 'ವಿಶ್ವವಾಣಿ' ಎಂಬ ವಿನೂತನ ಪತ್ರಿಕೆಯನ್ನೇ ಶುರು ಮಾಡಿದರು. ಅಯ್ಯೋ ಏನು ನಾಲ್ಕು ದಿನ ಪೇಪರ್ ತಂದಾರು... ಆಮೇಲೆ ಈ ಭಟ್ಟರ ಕಥೆ ಗೋವಿಂದ ಗೋವಿಂದಾ ಎಂದು ಆಗ ಯಕಡಪನ್ನಾಸರಂತೆ ಟೀಕಿಸಿದವರೂ ಸಾಕಷ್ಟಿದ್ದರು. ಇವರ ಕೈಗೆ ಕೈಕೊಟ್ಟು ಪ್ರೋತ್ಸಾಹಿಸಿದಂಥ ಮಿತ್ರರಿರುವಂತೆ, ಇವರ ಕಾಲೆಳೆದಂಥ ಪರಮಾತಿಪರಮ ಮಿತ್ರರಿಗೂ ಕೊರತೆಯೇನಿಲ್ಲ. 'ನೀವು ಹೂಗಳನ್ನು ಹೊಸಕಿ ಹಾಕಬಹುದು, ಆದರೆ ವಸಂತ ಕಾಲ ಬರುವುದನ್ನು ತಡೆಯಲಾರಿರಿ' ಎಂದು ಕವಿ ಪಾಬ್ಲೋ ನರೋಡ ಹೇಳಿದಂತೆ ಈ ಭಟ್ಟರು ತಮ್ಮ ಕ್ರಿಯಾಶೀಲ ಬರವಣಿಗೆಯಿಂದಲೇ ದದ್ದೋಡಿಗಳಿಗೆ ತಕ್ಕ ಶಾಸ್ತಿ ಮಾಡುತ್ತಿರುತ್ತಾರೆ. ಈ ಭಟ್ಟರನ್ನು ಇಂಗು ತಿಂದವ, ಮೆಂತೆ ಕದ್ದವ, ಬಲ ಪಂಕ್ತಿಯಲ್ಲಿ ಕುಳಿತವ ಎಂದೆಲ್ಲಾ ಸುಖಾಸುಮ್ಮನೇ ಆರೋಪಿಸಿ ಹಣಿಯಲು ಯತ್ನಿಸಿದವರೂ ಸಾಕಷ್ಟಿದ್ದಾರೆ. ಭಟ್ಟರು ತಮ್ಮ ಪಾಡಿಗೆ ತಾವು 'ವಿಶ್ವಾಸವೇ ವಿಶ್ವ' ಎಂದು ಮುನ್ನಡೆಯುತ್ತಾ, 'ವಿಶ್ವವಾಣಿ'ಯ ಜೊತೆಗೆ ಶಿರಸಿಯ 'ಲೋಕಧ್ವನಿ'ಯನ್ನೂ ಗಟ್ಟಿ ಧ್ವನಿಯಾಗಿಸುತ್ತಾ ಸಾಗುತ್ತಿದ್ದಾರೆ.

ಕುಡಿಯೋಣು ಬಾರಾ..

ಈ ಭಟ್ಟರು ಇತ್ತೀಚೆಗೆ ತಮಗೆ ಲಘು ಹೃದಯಾಘಾತವಾದ ನಂತರ 'ಕುಡಿಯೋಣು ಬಾರಾ' ಎಂಬ ಕೃತಿ ಪ್ರಕಟಿಸಿದ್ದಾರಲ್ಲ ಎಂದು ಭಯ ಪಡಬೇಡಿ. ಕಾರಣ ಪೆಗ್ ಏರಿಸದೇ ಬರೆದು, ಓದುಗರಲ್ಲಿ ಕಿಕ್ ಏರಿಸಲು ತಲೆ ಓಡಿಸುವ ಕಲೆಯಲ್ಲಿ ಈ ಭಟ್ಟರು ಸಿದ್ಧಹಸ್ತರು. ಎಳೆ ವಯಸ್ಸಿನಲ್ಲೇ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾದವರು. ತಮ್ಮ ಆಯಿ ಗಿರಿಜಾ ಭಟ್, ಪತ್ನಿ ಸುಷ್ಮಾ, ಮಗ ವಿಶ್ರಾತ್ಮ ಅವರೊಂದಿಗೆ ಆತ್ಮೀಯವಾಗಿ ಸಮಯ ಹಂಚಿಕೊಳ್ಳುವ ಫ್ಯಾಮಿಲಿ ಮ್ಯಾನ್ ಇವರು. ಹೀಗೆ ಭಟ್ಟರ ಸಾಧನೆ, ಸಾಂಗತ್ಯಗಳ ಬಗ್ಗೆ ಹೇಳುತ್ತಾ ಹೋದರೆ ಅದು ಮುಕ್ತ ಮುಕ್ತದಂತೆ ದೀರ್ಘ ಧಾರಾವಾಹಿಯಾದೀತು. ಹೀಗಾಗಿ ಇವರು ಇನ್ನಷ್ಟು ದೀರ್ಘಕಾಲ, ಸುದೀರ್ಘವಾಗಿ ಬರೆಯಲಿ.. ಬರೆಯುತ್ತಲೇ ಇರಲಿ ಎಂದು ಅವರ ಪಾಡಿಗೆ ಅವರನ್ನು ಬಿಟ್ಟುಬಿಡೋಣ. ಆಗಾಗ ಅವರ ಹೊಸ ಪುಸ್ತಕಗಳನ್ನು ಆಸ್ವಾದಿಸುತ್ತಿರೋಣ.

ಇವರು ತಮ್ಮ ಕೆಂಪು ಜೀಪನ್ನು ಚಲಾಯಿಸಿಕೊಂಡು ವಾನಳ್ಳಿಯ ಆಲೆಮನೆ ಹಬ್ಬಕ್ಕೆ ಹೊರಟರೆ ರಾಣೆಬೆನ್ನೂರಿನಲ್ಲೋ, ಅಕ್ಕಿ ಆಲೂರಿನಲ್ಲೋ ರಸ್ತೆ ಪಕ್ಕ ತಟಾಕು ಗಾಡಿ ನಿಲ್ಲಿಸಿ, ತಮ್ಮ ಅಂಕಣ ಬರೆದ ನಂತರವೇ ಇವರು ಮುಂದೆ ಸಾಗುವುದು. ವಿಮಾನ ಪ್ರಯಾಣದಲ್ಲೂ ಭಟ್ಟರಿಗೆ ಬರೀ ಬರೆಯುವುದೇ ಆಟ, ಕಾಟ. ವಿನಸ್ಟಂಟ್ ಚರ್ಚಿಲ್‌ನಿಂದ ಚರ್ಚ್ ಗೇಟ್‌ವರೆಗೆ, ವಿಸ್ಕಿಯಿಂದ ಹಿಡಿದು ವಿಯೆಟ್ನಾಂ ಕ್ರಾಂತಿಯವರೆಗೆ ಬ್ರಹ್ಮ ರಾಕ್ಷಸನಂತೆ ಯದ್ವಾತದ್ವಾ ಬರೆಯಬಲ್ಲಂತಹ ವಿಶ್ವಕೋಶ ಈ ವಿಶ್ವೇಶ್ವರ ಭಟ್ಟರು. ಹೀಗಾಗಿ ಇವರಿಗೆ ಪುಸ್ತಕ ಹೆರಲು ಒಂಬತ್ತು ತಿಂಗಳು ಬೇಕಾಗಿಲ್ಲ. ಒಂಬತ್ತು ತಿಂಗಳಿಗೆ ಹತ್ತೊಂಬತ್ತು ಪುಸ್ತಕಗಳನ್ನು ಬರೆಯುವಂಥ ಅಕ್ಷರ ಶಿಲ್ಪಿ ಇವರು.

ರಾಜಕಾರಣಿಗಳ ಬಗ್ಗೆ ಬರೆಯುವಾಗ ಇವರ ಲೇಖನಿ ಬ್ಯಾಡಗಿ ಕೆಂಪು ಮೆಣಸಿನಕಾಯಿಯಂತೆ ಖಾರಾ. ಸುಂದರ ಶ್ಯಾಮಲೆ, ಶಾಂತಲೆ, ಶಾಕುಂತಲೆಯರ ಬಗ್ಗೆ ವರ್ಣಿಸುವಾಗ ಇವರು ಆ ಕಾಳಿದಾಸನನ್ನೇ ಕಂಚಿನ ಪದಕಕ್ಕೆ ತಳ್ಳಿ, ತಾವು ಚಿನ್ನದ ಪದಕ ದಕ್ಕಿಸಿಕೊಳ್ಳಬಲ್ಲಂಥವರು. ವಿಸ್ಕಿ ಗಿಸ್ಕಿ ಬಗ್ಗೆ ಇವರ ಲೇಖನಗಳಂತೂ 'ಅರೆ ಇಸ್ಕಿ' ಎನ್ನುತ್ತಾ, ಸೋಡಾ ಇಲ್ಲದೆಯೇ ಗ್ಲಾಸ್ ಖಾಲಿ ಮಾಡುವಂತಹ ಟೇಸ್ಟ್ ಉಕ್ಕಿಸಬಲ್ಲಂಥವು.

ಹೀಗಾಗಿ ಹೂವಿನಹಿಪ್ಪರಗಿಯಿಂದ ಹಿಡಿದು ಹ್ಯಾಂಬರ್ಗಿನವರೆಗೆ, ಊರುತೋಟದಿಂದ ಉಗಾಂಡಾದವರೆಗೆ ಇವರ ಬರಹ ಪ್ರೀತಿಸುವ ಅಪಾರ ಓದುಗ ಬಳಗವಿರುವುದರಿಂದ ಇವರು ಅಕ್ಷರ ಲೋಕದ ಅಭಿನವ ಜಗದ್ಗುರುವಿನಂತಿದ್ದಾರೆ. ವಿದೇಶಗಳಿಗೆ ಇವರು ಹೋದಾಗ ಇವರ ರೂಮಿಗೇ ಉಪ್ಪಿಟ್ಟು, ಶಿರಾ ಮಾಡಿ ತಂದುಕೊಟ್ಟಂತಹ ಅಭಿಮಾನಿಗಳ ಪಡೆ ಇವರಿಗಿದೆ.

ವಿ.ಭಟ್ಟರು ಹಣೆಗೆ ನಾಮ ಹಾಕುವವರಲ್ಲ. ಆದರೂ ಇವರು ನಾಮಧಾರಿಯೇ. ಏಕೆಂದರೆ ಇವರು ವಿವಿಧ ನಾಮಗಳಿಂದ, ಬೇರೆ ಬೇರೆ ಅಂಕಣಗಳನ್ನು, ಲೇಖನಗಳನ್ನು ಬರೆದು ಓದುಗರ ಮೂಗಿಗೆ ಎಮ್ಮೆ ತುಪ್ಪ ಸವರುವಲ್ಲಿ ನಿಷ್ಣಾತರು. ಪ್ರೀತಿಯ ಜನಾರ್ದನ, ಸಹಜಾ, ಸುದ್ದೀಶ, ಬಾಣ ಭಟ್ಟ, ಸ್ವಾಮಿ ಅನಾಮಧೇಯ ಪೂರ್ಣ, ಹಣಮಂತರಾಯ, ಮೂವಿ, ಗುಂಡಾ ಭಟ್ಟ.. ಹೀಗೆ ನಾನಾ ಕಾವ್ಯ ನಾಮಗಳಲ್ಲಿ, ಗದ್ಯ ನಾಮಗಳಲ್ಲಿ ಇವರು ಅವತರಿಸುತ್ತಿರುತ್ತಾ ಓದುಗರನ್ನು ಗೋಳು ಹೊಯ್ಕೊಳ್ಳುತ್ತಾರೆ.

ಕ್ಲಬ್ ಹೌಸ್ ದಾಖಲೆ

ಭಟ್ಟರು ಉತ್ತಮ ಬರಹಗಾರರು ಎಂದಷ್ಟೇ ಹೇಳಿದರೆ, ಮೋದಿಯವರನ್ನು ಕೇವಲ ಗಡ್ಡ ಧಾರಿ ಎಂದು ಪರಿಚಯಿಸಿದಷ್ಟೇ ಅಪೂರ್ಣವಾಗುತ್ತದೆ. ಏಕೆಂದರೆ ಇವರು ಕನ್ನಡ ಪತ್ರಿಕೋದ್ಯಮದಲ್ಲಿ ಇ-ಮೇಲ್ ಹೊಂದಿದ ಮೊದಲ ಪತ್ರಕರ್ತ. ತಾವು ಇಸ್ಪೀಟು ಕ್ಲಬ್ಬಿಗೆ ಹೋಗದಿದ್ದರೂ ಕನ್ನಡಿಗರಲ್ಲಿ 'ಕ್ಲಬ್ ಹೌಸ್' ಹುಚ್ಚು ಹೆಚ್ಚಿಸಿದ ಕಿಲಾಡಿ. ದ್ರೋಣ್ ಕ್ಯಾಮರಾ ಪಳಗಿಸುವ ದ್ರೋಣಾಚಾರ್ಯ. ಅಮೆಜಾನ್ ಕಾಡಾಗಲಿ.. ಇಸ್ರೇಲ್ ಮರುಭೂಮಿಯಾಗಲಿ.. ರೋಡ್ ಟ್ರಿಪ್ ಎಂದು ಹೊರಟುಬಿಡುವ ಅಲೆಮಾರಿ. ಈಗಾಗಲೇ ನೂರ ಇಪ್ಪತ್ತೈದಕ್ಕೂ ಹೆಚ್ಚು ದೇಶ ಸುತ್ತಿದವರು. ಯಾವತ್ತೂ ಅಂಗಿ ಪ್ಯಾಂಟುಗಳಿಗೆ, ಹಾಗೆಯೇ ತನ್ನ ಮುಖಕ್ಕೆ ಕೂಡಾ ಸುಕ್ಕುಗಳಿರದಂತೆ ನೋಡಿಕೊಳ್ಳುವ ಶಿಸ್ತುಗಾರ. ತನ್ನ ಶೂಗೆ ಪಾಲಿಶ್ ಇಲ್ಲದಿದ್ದರೆ ಒಂದು ಹೆಜ್ಜೆಯನ್ನೂ ಮುಂದಿಡಲಾರ.

ಇವರ ಕನ್ನಡಕ್ಕಿಂತ ಇಂಗ್ಲಿಷ್ ಚೆಂದ. ಇಂಗ್ಲಿಷಿಗಿಂತ ಕನ್ನಡ ಚೆಂದ. ಅಂತಹ ಭಾಷಾ ಪಂಡಿತ. ಮಾತಿಗೆ ಕುಳಿತರಂತೂ ತ್ರಾಸ್ ಇಲ್ಲದೇ ಪ್ರಾಸಕ್ಕೆ ಪ್ರಾಸ ಗುಣಿಸುವ ಫನ್‌ಡಿತ. ಪತ್ರಿಕೆಯಲ್ಲೂ ಪ್ರಯೋಗಶೀಲ. ಅಪ್ಪೆ ಮಿಡಿ ಉಪ್ಪಿನಕಾಯಿಗಿಂತಲೂ ರುಚಿಕಟ್ಟಾಗಿ ಶಬ್ದಗಳನ್ನು ಪತ್ರಿಕೆಯಲ್ಲಿ ಬಡಿಸುವ ಭಟ್ಟ. 'ವಿಶ್ವವಾಣಿ ಪುಸ್ತಕ' ಪ್ರಕಾಶನದ ಮೂಲಕ ಹಲವು ಯುವ ಲೇಖಕರನ್ನು ಬೆಳೆಸಿದ ಪ್ರಕಾಶಕ. ಸಿನಿಮಾದಲ್ಲಿ (ತನುಜಾ) ನಟಿಸಿದ ಹೀರೋ. ಉದಯ ಟಿವಿಯ ಸುದ್ದಿ ಕಾಲದಲ್ಲೇ ಸುದ್ದಿ ವಾಚಕರಾಗಿ ಬೆಳಕಿಗೆ ಬಂದ ಪ್ರತಿಭೆ.

ಮನೆಯಲ್ಲೇ ಗ್ರಂಥಾಲಯ

ಸಂಬಂಧಗಳಲ್ಲಿ ಪಾಂಡವರಿಗೂ ಭಾವ ಕೌರವರಿಗೂ ಭಾವ. ಹೀಗಾಗಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳಲ್ಲಿ ಸಮಸಮ ಸ್ನೇಹ ಭಾವ. ಓದು ಅಪಾರ- ಬರಹ ನಿಖರ. ತಾನು ತಿಂದಿದ್ದು ಉಂಡಿದ್ದು ಕರಗಬೇಕೆಂದರೆ ಒಂದಷ್ಟು ಬರೆಯಲೇಬೇಕೆಂದು ತನಗೆ ತಾನೇ ವಿಧಿಸಿಕೊಂಡ ಕಟ್ಟುಪಾಡು. ಮನೆಯಲ್ಲೇ ಗ್ರಂಥಾಲಯ ಕಟ್ಟಿಕೊಂಡ ಉಗ್ರ ಗ್ರಂಥ ಪ್ರೇಮಿ. ಇವರು ಜಗತ್ತಿನ ದುಬಾರಿ ವಾಚುಗಳ ಸಂಗ್ರಾಹಕ. ಮನೆಯ

ವಾಚನಾಲಯವೇ ಇವರ ಅರಿವಿನ ಮಂಟಪ.

ಪತ್ರಿಕೋದ್ಯಮದ ದೂರ್ವಾಸರಂತಿದ್ದ ಸಂಯುಕ್ತ ಕರ್ನಾಟಕದ ಶಾಮರಾಯರ ಶಿಷ್ಯರಾಗಿಯೂ ಇವರು ಸೈ ಎನಿಸಿಕೊಂಡವರು. ಪತ್ರಿಕೋದ್ಯಮದ ಗುಂಡುಗಲಿ ವೈ. ಎನ್ಕೆ. ಅವರ ಪಟ್ಟದ ಶಿಷ್ಯರಾಗಿಯೂ ಇವರು ಫೇಮಸ್ ಆದವರು. ಹೀಗಾಗಿ ಪತ್ರಿಕೋದ್ಯಮದ ಗರಡಿ ಮನೆಯ ಪಟ್ಟೊಂದೇ ಅಲ್ಲ, ಅಲ್ಲಿಯ ಎಲ್ಲಾ ಗರ್ದಿ ಗಮ್ಮತ್ತುಗಳೂ ಇವರಿಗೆ ಚೆನ್ನಾಗಿ ಗೊತ್ತು. ಇದರಿಂದಾಗಿ ಇವರು ಬೆಳ್ಳುಳ್ಳಿ ಗೊಜ್ಜಿನಿಂದ ಹಿಡಿದು ಚಿಕನ್ 65 ವರೆಗೂ, ನೂರೆಂಟು ಮಾತಿನಿಂದ 'ಕುಡಿಯೋಣು ಬಾರಾ' ಪುಸ್ತಕದವರೆಗೂ ವೈವಿಧ್ಯಮಯ ಬರವಣಿಗೆ ಕೆತ್ತುವಲ್ಲಿ ಇವರು ಕರಗಸದಂತೆ. ಕರಗತ, ಅಷ್ಟೇ ಕರತಲಾಮಲಕ.

ಪುಸ್ತಕಗಳ ಸಂಖ್ಯೆ ನೂರರ ಹತ್ತಿರ!

ಮಲೆನಾಡಿನ ಹೆಂಗಸರು ಪ್ರತಿನಿತ್ಯ ಭಕ್ತಿಯಿಂದ ಮಜ್ಜಿಗೆ ಕಡೆದು ಬೆಣ್ಣೆ ತೆಗೆಯುತ್ತಾ ಕುಳಿತುಕೊಳ್ಳುವಂತೆ, ಈ ವಿ.ಭಟ್ಟರು ನಿತ್ಯ ಅಂಕಣ, ಲೇಖನ ಕಡೆಯುತ್ತಾ ಕುಳಿತರೆ ಓದುಗರಿಗೆ ವೈವಿಧ್ಯಮಯ ನವನೀತದ ಮುದ್ದೆ ಉಚಿತ. ಮಲೆನಾಡಿನ ಹಂಚಿನ ಹಳೆ ಮನೆಯಲ್ಲಿ ಕನಿಷ್ಠ ಐದಾರು ಅಂಕಣಗಳಿರುವಂತೆ, ವಿಶ್ವವಾಣಿಯಲ್ಲಿ ಪ್ರತಿನಿತ್ಯ ಇವರ ಐದಾರು ಅಂಕಣಗಳಿವೆ. ವಕ್ರ ತುಂಡೋಕ್ತಿಯಿಂದ ಹಿಡಿದು ಸಂಪಾದಕರ ಸದ್ಯ ಶೋಧನೆಯ ವರೆಗೆ, ಭಟ್ಟರ್ ಸ್ಕಾಚ್‌ನಿಂದ ದಾರಿದೀಪೋಕ್ತಿಯ ತನಕ ಇವರ ಅಂಕಣಗಳು ಓತಪ್ರೋತ. ಇದರ ಫಲಶ್ರುತಿಯಾಗಿ ಈಗ ಇವರು ಬರೆದ ಪುಸ್ತಕಗಳ ಸಂಖ್ಯೆ ನೂರರ ಹೊಸ್ತಿಲಿನಲ್ಲಿದೆ. 21.8.2024ರಂದು ಬಿಡುಗಡೆಯಾದ 'ಸಿಂಗಾಪುರ ಕೆಲವು ಟಿಪ್ಪಣಿಗಳು' ವಿಶ್ವೇಶ್ವರ ಭಟ್ ಅವರ ಹೊಸ ಪುಸ್ತಕ.

ಹೊಸಹೊಸ ಅಂಕಣಕಾರರನ್ನು, ಲೇಖಕರನ್ನು, ಎಳೆ ಲಿಂಬೆಕಾಯಿಗಳನ್ನು ಬೆಳೆಸುವ ಮೂಲಕ ಕನ್ನಡ ಪತ್ರಿಕೋದ್ಯಮದ ನಿಂತ ನೀರಿಗೆ ತಾವೇ ಕಾಲುವೆ ತೋಡಿ ಹೊಸತನದ ಹರಿವು ಅರಿವು ನೀಡಿದ ಹರಿಕಾರ. ಗೊರಿಲ್ಲಾಗಳ ನಾಮಕರಣ ಮತ್ತು ತೊಟ್ಟಿಲೌತಣಕ್ಕಾಗಿ ರುವಾಂಡಾಕ್ಕೆ ಹೋಗಿದ್ದು, ಬಿಯರ್ ಉತ್ಸವಕ್ಕೆಂದು ಜರ್ಮನಿಯ ಮ್ಯೂನಿಕ್ ಗೆ ಹೋಗಿದ್ದು, ಆಮೆ ಮೊಟ್ಟೆ ಇಡುವುದನ್ನು ನೋಡಲು ಒಮಾನಿಗೆ ಹೋಗಿದ್ದು, ಪುಸ್ತಕ ಮೇಳಕ್ಕಾಗಿ ಫ್ರಾಂಕ್ ಫರ್ಟಗೆ ಹೋಗಿದ್ದು, ಈಗ ಕಂದು ಬಣ್ಣದ ಕರಡಿ ನೋಡಲು ರಷ್ಯಾದ ಕಮ್ ಚಟ್ಕಕ್ಕೆ ಹೊರಟು ನಿಂತಿರುವುದು.... ಈ ಭಟ್ಟರಲ್ಲಿಯ ಜ್ಞಾನ ದಾಹಕ್ಕೆ, ವಿಚಾರ ದಾಸೋಹಕ್ಕೆ ಉತ್ತಮ ನಿದರ್ಶನ.

ಪತ್ರಿಕೆಯಲ್ಲಿ ತಪ್ಪಾಯ್ತು ತಿದ್ದುಕೋತಿವಿ ಮಾರಾಯ್ರೆ ಎಂಬಷ್ಟು ವಿವೇಕವಂತ ಸಂಪಾದಕ ಇವರು. ಕನ್ನಡದ ಸಾಧಕರನ್ನು ವಿದೇಶಗಳಿಗೆ ಕರೆದೊಯ್ದು ಪ್ರಶಸ್ತಿ ನೀಡಿ ಪುರಸ್ಕರಿಸಿದ ಹೃದಯವಂತ. ಹಿಂದೆ ರಾಷ್ಟ್ರಪತಿಯವರೊಂದಿಗೇ ಪರದೇಶಗಳಿಗೆ ಹೋಗಿ ಬಂದರೂ, ಈಗಲೂ ಹಾರೂಗಾರ, ಹನುಮಂತಿ, ಕೊಳಗಿಬೀಸ್ ಕ್ರಾಸಿನಲ್ಲಿ ನಿಂತು ಮಿರ್ಚಿ ಮಂಡಕ್ಕಿ ತಿನ್ನುವ ಸೀದಾಸಾದಾ ಮನುಷ್ಯ. ಇವರು ಗಾಡಿಯಲ್ಲಿ ಕುಳಿತು ಮಲ್ಲಿಕಾರ್ಜುನ ಮನ್ಸೂರರ 'ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ' ಎಂಬ ಹಾಡು ಕೇಳುತ್ತಾ ಹೊರಟರೆಂದರೆ ಆ ಗಾಡಿ ಎಲ್ಲಿಗೆ ಹೋಗಿ ನಿಲ್ಲುತ್ತೋ ಆ ದೇವರೇ ಬಲ್ಲ. ಅಷ್ಟೊಂದು ತಿರುಗಾಟ ಪ್ರಿಯ. ಸುಸ್ತು ಎಂಬ ಪದ ಇವರ ಗಂಟಿನಲ್ಲಿಯೂ ಇಲ್ಲ, ನಿಘಂಟಿನಲ್ಲಿಯೂ ಇಲ್ಲ.

ನಾನು ಮತ್ತು ಗಾಳಿಪಟ

ಗಾಳಿಯಲಿ ಮೇಲೇರುವ ಗಾಳಿ ಪಟ; ನಮ್ಮ ಬದುಕಿಗೆ ನೀಡಿದೆ ಒಂದು ಪಾಠ!

• ಸೌಮ್ಯ ಕೋಠಿ ಮೈಸೂರು

ಶ್ರಾವಣ ಬಂತೆಂದರೆ ಹಬ್ಬಗಳ ಸಾಲು. ಅದರದೇ ಆದ ವಿಶೇಷತೆಗಳು. ಹಾಗಾಗಿ ಶ್ರಾವಣ ಮಾಸದ ಹಬ್ಬದಲಿ ಸಾಕಷ್ಟು ನಮ್ಮ ಜಾನಪದ ಕ್ರೀಡೆಗಳು ಸಹ ಒಳಗೊಂಡಿದೆ. ಉದಾಹರಣೆಗೆ ನಾಗರಪಂಚಮಿ ಎಂದರೆ ಜೋಕಾಲಿಯಲ್ಲಿ ಜೀಕುವುದು ಸಹ ಒಂದು ಸಂಪ್ರದಾಯ. ಹಾಗೆ ಗಾಳಿಪಟ ಹಾರಿಸುವುದು. ಮನೆ ಮಂದಿ ಎಲ್ಲಾ ಹೊಲಕ್ಕೆ ಹೋಗಿ ಗಾಳಿಪಟ ಹಾರಿಸುವಾಗ ಅದರ ಸೊಬಗೇ ಚಂದ.

ಗಾಳಿಪಟ ಅಂದರೆ ಕೇವಲ ಗಾಳಿಪಟ ಅಲ್ಲ ಅದು ನಮಗೆ ಬದುಕಿನ ಪಾಠವನ್ನು ಹೇಳಿಕೊಡುತ್ತಾ ಹೋಗುತ್ತದೆ. ಎಲ್ಲರಿಗಿಂತ ಎತ್ತರದಲ್ಲಿ ಹಾರಬೇಕೆಂದರೆ ನಮಗೆ ನಮ್ಮ ಕುಟುಂಬದ ಸಹಕಾರ ಬೇಕಾಗುತ್ತದೆ ಅದು ಈ ಹಬ್ಬದ ವಿಶೇಷತೆ. ಎಲ್ಲರಿಗಿಂತ ನನ್ನ ಗಾಳಿಪಟ ಮೇಲೆ ಹಾರಿದಾಗ ಆ ಸಿಗುವ ಖುಷಿಯೇ ಬೇರೆ.

ಈಗಿನ ಮಕ್ಕಳ ಪ್ರಶ್ನೆ - ನಮಗೆ ಪ್ರತಿಯೊಂದು ವಿಷಯಕ್ಕೂ ತಂದೆ ತಾಯಿ ಏಕೆ ಮೂಗು ತೂರಿಸುತ್ತಾರೆ? ಅವರ ಪ್ರಶ್ನೆ ಅದಕ್ಕೆ ಉತ್ತರ ಈ ಗಾಳಿಪಟ ಕೊಡ್ತಾ ಹೋಗುತ್ತದೆ. ಒಮ್ಮೆ ತಂದೆಯ ಜೊತೆ ಮಗ ಗಾಳಿಪಟವನ್ನು ಹಾರಿಸುತ್ತಾ ಇರ್ತಾನೆ. ಈ ಗಾಳಿಪಟ ಎಲ್ಲರಿಗಿಂತ ಮೇಲೆ ಹೋಗಿ ಹಾರಾಡುತ್ತಿದೆ. ಆದರೆ ಈ ನಮ್ಮ ಕೈಯಲ್ಲಿರುವ ದಾರ ಅದರ ಹಾರುವಿಕೆಗೆ ಅಡ್ಡಿಯಾಗುತ್ತಿದೆ. ನೀವು ಹಾಗೆ ನಾನು ಇನ್ನು ಮೇಲಕ್ಕೆ ಹಾರಬಹುದು. ಆದರೆ ನೀವು ಹಿಡಿದಿರುವುದರಿಂದ ನನಗೂ ಸಹ ಹಾರಲು ಆಗುತ್ತಿಲ್ಲ ಎಂದು ಕೋಪಗೊಳ್ಳುತ್ತಾನೆ. ಆಗ ತಂದೆ ತಕ್ಷಣವೇ ಆ ಗಾಳಿಪಟದ ದಾರವನ್ನು ಕತ್ತರಿಸಿಬಿಡುತ್ತಾನೆ.

ಆಗ ಗಾಳಿಪಟ ಮೇಲಕ್ಕೆ ಹಾರುವ ಬದಲು ನೆಲಕಚ್ಚುತ್ತದೆ. ಹೌದು ನಮ್ಮ ಜೀವನದಲ್ಲಿ ನಾವು ಬೇರೆಯವರು ನಮಗೆ ಬೈಯುತ್ತಿದ್ದಾರೆ ಅಡ್ಡಿ ಮಾಡುತ್ತಿದ್ದಾರೆ ಎಂದು ಬೇಸರಗೊಳ್ಳುತ್ತೇವೆ. ಆದರೆ ನಿಜವಾಗಿ ಅದೇ ನಮ್ಮ ಶಕ್ತಿ! ಹೇಗೆ ಗಾಳಿಪಟಕ್ಕೆ ಆ ದಾರವನ್ನ ನಾವು ಹಿಡಿದಿರುವುದರಿಂದಲೇ ಹಾರುತ್ತದೆಯೋ ಹಾಗೆ ತಂದೆ ತಾಯಿಗಳ ಶಿಸ್ತಿನಲ್ಲಿ ಬೆಳೆದ ಮಕ್ಕಳು, ಬದಕಿನಲ್ಲಿ ಮೇಲೆ ಮೇಲೆ ಏರುತ್ತಾರೆ. ಆ ದಾರ ತುಂಡಾದರೆ ಮಕ್ಕಳು ಸಹ ನೆಲ ಕಚ್ಚುತ್ತಾರೆ ಎಂದು ತಂದೆ ತಾಯಿಗೆ ತಿಳಿದಿರುವುದರಿಂದ ಮಕ್ಕಳ ಕೈ ಸುಲಭವಾಗಿ ಬಿಡುವುದಿಲ್ಲ.

ಅವರ ಹಿಡಿತ ಅಂಕೆ ಶಿಕ್ಷೆಗಳು ಅವರು ಹಿಡಿದಂತಹ ದಾರದ ಹಾಗೆ ಅವರ ಅಂಕೆಯಲ್ಲಿ ಇದ್ದರೆ ನಾವು ಎತ್ತರಕ್ಕೆ ಹಾರಬಹುದು. ಹಾಗೂ ಆ ಬೆಚ್ಚಗಿನ ಸುರಕ್ಷತೆಯನ್ನ ಅನುಭವಿಸಬಹುದು. ಗಾಳಿಪಟ ಹೇಳಿದ ಪಾಠ ಬಹಳ ಸೊಗಸಾಗಿದೆ! ಅಲ್ಲವೆ?

ಸರಳ ನಡಿಗೆ ಲಾಭ ಅಪಾರ

ನಡಿಗೆಯು ಮೇಲ್ನೋಟಕ್ಕೆ ಸರಳ ಎನಿಸಬಹುದು; ಆದರೆ ಇದು ಒಂದು ಸುಲಭವಾದ, ಅನುಕೂಲಕರವಾದ ವ್ಯಾಯಾಮ. ಯಾವುದೇ ಪರಿಕರವಿಲ್ಲದೇ, ಈ ವ್ಯಾಯಾಮ ಮಾಡಬಹುದು. ಇದರಿಂದ ಲಾಭ ಅಪಾರ.



● ತೂಕ ನಿಯಂತ್ರಣಕ್ಕೆ ಸಹಕಾರಿ ● ಮೂಳೆ ಮತ್ತು ಸ್ನಾಯುಗಳು ಬಲಶಾಲಿಯಾಗುತ್ತವೆ ● ಮಧುಮೇಹದಂತಹ ಸಮಸ್ಯೆಗಳನ್ನು ನಿಯಂತ್ರಿಸಬಹುದು. ● ದೇಹದ ಶಕ್ತಿಯನ್ನು ತ್ತಮಪಡಿಸುತ್ತದೆ ● ಮಾನಸಿಕ ನೆಮ್ಮದಿ ಮತ್ತು ಸುಖನಿದ್ರೆಗೆ ಸಹಕಾರಿ● ದೇಹದ ಪ್ರತಿರೋಧ ಶಕ್ತಿ ಅಧಿಕವಾಗುತ್ತದೆ ● ಮನಸ್ಸಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

ಯಕ್ಷಗಾನದಲ್ಲಿ ಪ್ರಯೋಗ

ಬೆಂಗಳೂರಿನಲ್ಲಿ ಕಳೆದ 44 ವರ್ಷದಿಂದ ಬೆಂಗಳೂರಿನ ಯಕ್ಷದೇಗುಲ ತಂಡವು ಸಾಂಪ್ರದಾಯಿಕ ಯಕ್ಷಗಾನ, ನಾಟಕಗಳು ಹಾಗೆಯೇ ನವೀನ ಮತ್ತು ಪ್ರಾಯೋಗಿಕ ನಿರ್ಮಾಣಗಳನ್ನು ಪ್ರದರ್ಶಿಸುತ್ತಾ ಬಂದಿದೆ. ಈವರೆಗೆ 5000ಕ್ಕೂ ಹೆಚ್ಚು ಪ್ರದರ್ಶನವನ್ನು ದೇಶ, ವಿದೇಶದಲ್ಲೂ ನೀಡಿ ಪ್ರಖ್ಯಾತಿ ಹೊಂದಿದೆ. 20-08-2024 ರಂದು ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ ಆರಾಧನಾ ಮಹೋತ್ಸವದಲ್ಲಿ 'ಸುದರ್ಶನ ಗರ್ವಭಂಗ' ಯಕ್ಷಗಾನ ಪ್ರದರ್ಶನ ಪ್ರೇಕ್ಷಕರನ್ನು ಬಲುವಾಗಿ ರಂಜಿಸಿತು. ಕಾರ್ಯಕ್ರಮವನ್ನು ಯಕ್ಷಗುರು ಕೋಟ ಸುದರ್ಶನ ಉರಾಳರು ಸಂಯೋಜನೆ ಮಾಡಿದರು

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್

ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 22-08-2024 - 31-08-2024
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್,
ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ,
5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

ರೊಬೋಟಿಕ್ ಮೂಳೆ ಶಸ್ತ್ರಚಿಕಿತ್ಸೆ

ಮಾರತ್ತಹಳ್ಳಿಯ ಕಾವೇರಿ ಆಸ್ಪತ್ರೆಯಲ್ಲಿ ರೊಬೋಟಿಕ್ ಯಂತ್ರದ ಮೂಲಕ ನಿಖರ ಮೂಳೆ ಶಸ್ತ್ರಚಿಕಿತ್ಸೆ. ರೊಬೋಟಿಕ್ ಶಸ್ತ್ರಚಿಕಿತ್ಸೆ: ಕಾವೇರಿ ಆಸ್ಪತ್ರೆಯಲ್ಲಿ ಮೂಳೆ ಶಸ್ತ್ರಚಿಕಿತ್ಸೆಯ ಭವಿಷ್ಯ

ಪ್ರಶ್ನೆ: ರೊಬೋಟಿಕ್ ಯಂತ್ರ ವ್ಯವಸ್ಥೆಯನ್ನು ಬಳಸಿಕೊಂಡು ಮೂಳೆ ಶಸ್ತ್ರಚಿಕಿತ್ಸೆಯಲ್ಲಿ ಕಾವೇರಿ ಆಸ್ಪತ್ರೆ ಹೇಗೆ ಉನ್ನತ ಗುಣಮಟ್ಟವನ್ನು ಸಾಧಿಸಿದೆ?

ಡಾ. ರಘು ನಾಗರಾಜ್: ಮೂಳೆ ಸಂಬಂಧಿಸಿದ ಸಮಸ್ಯೆಗಳ ಚಿಕಿತ್ಸೆಯಲ್ಲಿ ನಮ್ಮ ಆಸ್ಪತ್ರೆ ಮುಂಚೂಣಿಯಲ್ಲಿದೆ. ಶಸ್ತ್ರಚಿಕಿತ್ಸೆಗೆ ಅತ್ಯಾಧುನಿಕ ರೊಬೋಟಿಕ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಬಳಕೆ ಮಾಡುತ್ತಿದ್ದೇವೆ. ಇಂತಹ ಸುಧಾರಿತ ತಂತ್ರಜ್ಞಾನ ವ್ಯವಸ್ಥೆಯನ್ನು ಬಳಕೆ ಮಾಡಿಕೊಳ್ಳುವುದರಿಂದ ಅತ್ಯಂತ ನಿಖರವಾಗಿ ಶಸ್ತ್ರಚಿಕಿತ್ಸೆ ಪ್ರಕ್ರಿಯೆಗಳನ್ನು ನಡೆಸಬಹುದು. ಇದರಿಂದ ನೋವು ಕಡಿಮೆ ಇರುತ್ತದೆ. ರೋಗಿಗಳು ಬೇಗ ಗುಣಮುಖರಾಗುತ್ತಾರೆ. ಅಲ್ಲದೇ, ಶಸ್ತ್ರಚಿಕಿತ್ಸೆ ಯಶಸ್ಸಿನ ಪ್ರಮಾಣವೂ ಹೆಚ್ಚು ಇರುತ್ತದೆ.

ಪ್ರಶ್ನೆ: ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತ ರೊಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆ ಹೇಗೆ ಶ್ರೇಷ್ಠ ಎನಿಸಿಕೊಳ್ಳುತ್ತದೆ?

ಡಾ. ರಘು ನಾಗರಾಜ್: ರೊಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯು ಶಸ್ತ್ರಚಿಕಿತ್ಸಕರ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಅತ್ಯಂತ ನಿಖರತೆಯೊಂದಿಗೆ ಶಸ್ತ್ರ ಚಿಕಿತ್ಸೆ ಮಾಡಲು ನೆರವಾಗುತ್ತವೆ. ರಿಯಲ್ ಟೈಮ್ ತ್ರೀಡಿ ಇಮೇಜಿಂಗ್ ಚಿತ್ರಗಳನ್ನು ರೊಬೋಟ್ ವ್ಯವಸ್ಥೆ ಒದಗಿಸುತ್ತದೆ. ಶಸ್ತ್ರಚಿಕಿತ್ಸೆಗೆ ಬಳಸುವ ಸಲಕರಣೆಗಳ ಮೇಲೆ ಉತ್ತಮ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತದೆ. ಇದರಿಂದ ವೈದ್ಯರಿಂದ ಆಗಬಹುದಾದ ಲೋಪಗಳನ್ನು ಬಹಳಷ್ಟು ಕಡಿಮೆ ಮಾಡುತ್ತದೆ. ಡ್ಯಾಮೇಜ್ ಕಡಿಮೆ ಆಗುವ ಕಾರಣ ರೋಗಿಗಳು ಬೇಗ ಗುಣಮುಖರಾಗಿ ತಮ್ಮ ದೈನಂದಿನ ಕೆಲಸಗಳನ್ನು ಮುಂದುವರೆಸಲು ನೆರವಾಗುತ್ತದೆ.

ಪ್ರಶ್ನೆ: ರೊಬೋಟಿಕ್ ನೆರವಿನ ಮೂಳೆ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳು ಗುಣಮುಖರಾಗುವ ಪ್ರಕ್ರಿಯೆಯನ್ನು ವಿವರಿಸುವಿರಾ?

ಡಾ. ರಘು ನಾಗರಾಜ್: ರೊಬೋಟಿಕ್ ನೆರವಿನ ಮೂಳೆ ಶಸ್ತ್ರಚಿಕಿತ್ಸೆಯ ಮುಖ್ಯವಾದ ಅನುಕೂಲ ಎಂದರೆ ಕಡಿಮೆ ಸಮಯದಲ್ಲಿ ರೋಗಿ ಗುಣಮುಖವಾಗುವುದು. ಏಕೆಂದರೆ, ಈ ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಚರ್ಮ ಮತ್ತಿತರ ಭಾಗಗಳಿಗೆ ಹಾನಿಯಾಗುವ ಪ್ರಮಾಣ ಕಡಿಮೆ ಇರುತ್ತದೆ. ಶಸ್ತ್ರಚಿಕಿತ್ಸೆ ನಂತರ ರೋಗಿಗಳಿಗೆ ನೋವಿನ ಅನುಭವವೂ ಕಡಿಮೆ ಇರುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ರೋಗಿಗಳು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಆರಂಭಿಸುತ್ತಾರೆ. ಇದರಿಂದ ದೈನಂದಿನ ಜೀವನಕ್ಕೆ ಬೇಗ ಮರಳಲು ಸಾಧ್ಯವಾಗುತ್ತದೆ. ಇದುವೇ ರೋಗಿಗಳಿಗೆ ಬಹುದೊಡ್ಡ ಅನುಕೂಲಕರ ಅಂಶವಾಗಿದೆ.

ಪ್ರಶ್ನೆ: ರೊಬೋಟಿಕ್ ಆಧಾರಿತ ಶಸ್ತ್ರಚಿಕಿತ್ಸೆಗಳು ಯಶಸ್ಸು ಸಾಧಿಸುವುದನ್ನು ಖಾತ್ರಿಪಡಿಸಲು ಕಾವೇರಿ ಆಸ್ಪತ್ರೆ ಏನು ಕ್ರಮಗಳನ್ನು ಕೈಗೊಳ್ಳುತ್ತದೆ?

ಡಾ. ರಘು ನಾಗರಾಜ್: ವೈದ್ಯಕೀಯವಾಗಿ ಮತ್ತು ತಾಂತ್ರಿಕವಾಗಿ ಪರಿಣಿತ ವೈದ್ಯರ ತಂಡ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳ ಸಮ್ಮಿಳಿತವೇ ನಮ್ಮ ಆಸ್ಪತ್ರೆಯ ಯಶಸ್ಸಿನ ಗುಟ್ಟು ಆಗಿದೆ. ಕಾವೇರಿ ಆಸ್ಪತ್ರೆಯಲ್ಲಿ ಅತ್ಯಂತ ಅನುಭವಿ ಮೂಳೆ ಶಸ್ತ್ರಚಿಕಿತ್ಸಕರು ಮತ್ತು ತಂತ್ರಜ್ಞರಿದ್ದಾರೆ. ರೊಬೋಟಿಕ್ ಶಸ್ತ್ರಚಿಕಿತ್ಸೆಗಾಗಿಯೇ ವಿಶೇಷವಾಗಿ ತರಬೇತಿ ಪಡೆದುಕೊಂಡಿದ್ದಾರೆ. ಕೌಶಲ್ಯ ಮತ್ತು ತಂತ್ರಜ್ಞಾನ ಒಂದಾಗಿ ನಮ್ಮ ಆಸ್ಪತ್ರೆಯ ರೋಗಿಗಳಿಗೆ ಅತ್ಯಂತ ಶ್ರೇಷ್ಠವಾದ ವೈದ್ಯಕೀಯ ಸೇವೆಯನ್ನು ನೀಡಲು ಸಾಧ್ಯವಾಗುತ್ತದೆ.

ಪ್ರಶ್ನೆ: ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ರೊಬೋಟಿಕ್ ನೆರವಿನಿಂದ ಯಾವ ನಿರ್ದಿಷ್ಟ ಪ್ರಕ್ರಿಯೆ ನಡೆಸಲಾಗುತ್ತದೆ?

ಡಾ. ರಘು ನಾಗರಾಜ್: ಅನೇಕ ಮೂಳೆ ಶಸ್ತ್ರಚಿಕಿತ್ಸೆಗಳಿಗೆ ರೊಬೋಟಿಕ್ ನೆರವನ್ನು ನಾವು ಪಡೆಯುತ್ತವೆ. ಕೀಲು ಮರುಜೋಡಣೆ, ಬೆನ್ನುಹುರಿ ಶಸ್ತ್ರಚಿಕಿತ್ಸೆಗಳು ಹಾಗೂ ಮೂಳೆ ಮುರಿದಿರುವ ಸಂಕೀರ್ಣ ಪ್ರಕರಣಗಳಲ್ಲಿ ರೊಬೋಟಿಕ್ ನೆರವು ಪಡೆಯಲಾಗುತ್ತದೆ. ವಿಶೇಷವಾಗಿ ಕೀಲು ಮರುಜೋಡಣೆ ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ರೊಬೋಟಿಕ್ ವ್ಯವಸ್ಥೆಯು ಹೆಚ್ಚು ಅನುಕೂಲ ಆಗುತ್ತದೆ. ನಿಖರವಾಗಿ ಮರುಜೋಡಣೆ ಮಾಡಲು ನೆರವಾಗುತ್ತದೆ. ಇದರಿಂದ ರೋಗಿಗಳಿಗೆ ಮತ್ತೆ ಮತ್ತೆ ಸಮಸ್ಯೆ ಕಾಣಿಸಿಕೊಳ್ಳದೇ ಧೀರ್ಘಾವಧಿಯಲ್ಲಿ ಆರೋಗ್ಯವಾಗಿರಲು ನೆರವಾಗುತ್ತದೆ.

ಪ್ರಶ್ನೆ: ಮೂಳೆ ಶಸ್ತ್ರಚಿಕಿತ್ಸೆಗೆ ರೋಗಿಗಳು ಕಾವೇರಿ ಆಸ್ಪತ್ರೆಯನ್ನೇಕೆ ಆಯ್ಕೆ ಮಾಡಿಕೊಳ್ಳಬೇಕು?

ಉತ್ತರ: ಕಾವೇರಿ ಆಸ್ಪತ್ರೆಯು ರೋಗಿಗಳ ಆರೈಕೆಯಲ್ಲಿ ಅತ್ಯಂತ ಉನ್ನತ ಗುಣಮಟ್ಟವನ್ನು ಸಾಧಿಸುವ ಬದ್ಧತೆಯನ್ನು ಹೊಂದಿದೆ. ತಂತ್ರಜ್ಞಾನ ಮತ್ತು ಕೌಶಲ್ಯದೊಂದಿಗೆ ರೋಗಿಗಳ ಕೇಂದ್ರಿತವಾದ ಸೇವೆಯನ್ನು ನೀಡಲಾಗುತ್ತದೆ. ಪ್ರತಿಯೊಬ್ಬ ರೋಗಿಗೂ ಅವರ ನಿರೀಕ್ಷೆ ಮತ್ತು ನಿರ್ದಿಷ್ಟ ಬೇಡಿಕೆಗೆ ತಕ್ಕಂತೆ ವೈಯಕ್ತಿಕ ಆರೋಗ್ಯ ಸೇವೆ ಒದಗಿಸುವುದು ನಮ್ಮ ಬದ್ಧತೆ. ರೊಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯಲ್ಲಿ ಪರಿಣಿತರಾಗಿರುವ ನಮ್ಮ ತಂಡವು ಸುಧಾರಿತ ತಂತ್ರಜ್ಞಾನ ವ್ಯವಸ್ಥೆಗಳನ್ನು ಬಳಸಿಕೊಳ್ಳುವ ಕಾರಣ ಮೂಳೆ ಸಂಬಂಧಿಸಿದ ಸಮಸ್ಯೆಗಳನ್ನು ಹೊಂದಿರುವ ರೋಗಿಗಳಿಗೆ ಕಾವೇರಿ ಆಸ್ಪತ್ರೆಯೇ ಮೊದಲ ಆಯ್ಕೆಯ ಆದ್ಯತೆ ಆಗಿರುತ್ತದೆ.

kauvery hospital Bengaluru
ಕಾವೇರಿ ಆಸ್ಪತ್ರೆ
ಎಲೆಕ್ಟ್ರಾನಿಕ್ ಸಿಟಿ ಮತ್ತು ಮಾರತ್ತಹಳ್ಳಿ
ಬೆಂಗಳೂರು
1800 889 0009

ಡಾ. ರಘು ನಾಗರಾಜ್
ನಿರ್ದೇಶಕರು
ಆರ್ಥೋಪೆಡಿಕ್, ಸ್ಪೋರ್ಟ್ಸ್ ಮೆಡಿಸಿನ್ ಮತ್ತು ರೊಬೋಟಿಕ್ ಜಾಯಿಂಟ್ ರಿಪ್ಲೇಸ್‌ಮೆಂಟ್ ವೈದ್ಯರು



ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

22.08.2024 ಗುರುವಾರ

vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಕೃಷ್ಣ ಪಕ್ಷ, ತೃತಿಯಾ ತಿಥಿ, ಉತ್ತರ ಭಾದ್ರಪದ ನಕ್ಷತ್ರ, ಧೃತಿ ಯೋಗ, ವಿಷ್ಠಿ ಕರಣ, 1946 ಕ್ರೋಧಿ ನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಅಗಸೆ ಬೀಜದಲ್ಲಿ ಅತ್ಯಧಿಕ ಪ್ರಮಾಣದ ನಾರಿನಾಂಶ ಮತ್ತು ಒಮೆಗಾ-3 ಕೊಬ್ಬಿನಾಮ್ಲವಿದ್ದು, ಇದು ಜೀರ್ಣಕ್ರಿಯೆಗೆ ಸಹಕಾರಿ ಆಗಿದೆ ಮತ್ತು ಮಲಬದ್ಧತೆ ನಿವಾರಣೆ ಮಾಡುವುದು. ಇದು ನೀರಿನಾಂಶ ಹೀರಿಕೊಳ್ಳುವುದು ಮತ್ತು ಜೀರ್ಣಕ್ರಿಯೆಯನ್ನು ಸರಾಗವಾಗಿಸುವುದು. ಇದರಿಂದ ಮಲವು ಮೃದುವಾಘುವುದು ಮತ್ತು ಕರುಳಿನ ಕ್ರಿಯೆಯು ಸರಿಯಾಗುವುದು.

ಸೌಂದರ್ಯ ಸೂತ್ರ

1 ಟೀಚಮಚ ತಾಜಾ ನಿಂಬೆ ರಸವನ್ನು ತೆಗೆದುಕೊಂಡು ಅದನ್ನು 1 ಟೀಚಮಚ ಕಡಲೆ ಹಿಟ್ಟಿನೊಂದಿಗೆ ಬೆರೆಸಿ ಪೇಸ್ಟ್ ಮಾಡಿ. ಈ ಪೇಸ್ಟ್ ಅನ್ನು ಮುಖಕ್ಕೆ ಹಚ್ಚಿಕೊಳ್ಳಿ. ಅದು ಒಣಗಿದಾಗ, ತಣ್ಣೀರಿನಿಂದ ಮುಖ ತೊಳೆಯಿರಿ. ಇದು ಚರ್ಮವನ್ನು ಎಕ್ಸ್‌ಫೋಲಿಯೇಟ್ ಮಾಡಲು ಮತ್ತು ಮೈಬಣ್ಣವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ದಿನ ಭವಿಷ್ಯ

ಮೇಷ ನಿಮ್ಮ ಬಲವಾದ ದೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಸಹಾಯಕ.

ವೃಷಭ ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ಇಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ.

ಮಿಥುನ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಕುಟುಂಬದ ಸದಸ್ಯರ ಭಾವನೆಗಳನ್ನು ನೋಯಿಸುವುದನ್ನು ತಪ್ಪಿಸುವ ಮೂಲಕ ನಿಮ್ಮ ಕೋಪ ನಿಯಂತ್ರಿಸಿ.

ಕಟಕ ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಇಂದು ಹಿರಿಯರ ಆಶೀರ್ವಾದ ತೆಗೆದುಕೊಳ್ಳಿ.

ಸಿಂಹ ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ಮನರಂಜನೆಗೆ ತುಂಬಾ ಖರ್ಚು ಮಾಡಬೇಡಿ.

ಕನ್ಯಾ ನಿರುದ್ಯೋಗಿಗಳು ಒಳ್ಳೆಯ ಉದ್ಯೋಗವನ್ನು ಪಡೆಯಲು ಇಂದು ಇನ್ನಷ್ಟು ಹೆಚ್ಚಾಗಿ ಪರಿಶ್ರಮವನ್ನು ಮಾಡುವ ಅಗತ್ಯವಿದೆ.

ತುಲಾ ಇಂದು ನೀವು ನಿಮ್ಮ ಸಂಗಾತಿಯ ಜೊತೆಗೆ ಒಂದು ಸಂತೋಷಕರ ಮಾತುಕತೆಯನ್ನು ಹೊಂದುತ್ತೀರಿ, ಮತ್ತು ನೀವು ಪರಸ್ಪರರನ್ನು ಎಷ್ಟು ಪ್ರೀತಿಸುತ್ತೀರಿ ಎಂದು ಅರಿತುಕೊಳ್ಳುತ್ತೀರಿ.

ವೃಶ್ಚಿಕ ಏನಾದರೂ ಆಸಕ್ತಿದಾಯಕವಾದದ್ದನ್ನು ಓದುವ ಮೂಲಕ ಮಾನಸಿಕ ವ್ಯಾಯಾಮ ಮಾಡಿ. ಹಿರಿಯರಿಂದ ಹಣ ಉಳಿಸುವ ಬಗ್ಗೆ ಸಲಹೆ ತೆಗೆದುಕೊಳ್ಳಬಹುದು

ಧನು ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಈ ದಿನ ನಿಮ್ಮ ವೈವಾಹಿಕ ಜೀವನ ವಿಶೇಷವಾಗಿ ರುತ್ತದೆ.

ಮಕರ ಇತರರಿಗೆ ನಿಮ್ಮ ಸಮಯ ನೀಡಲು ಒಳ್ಳೆಯ ದಿನ. ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಮೂಲಕ ಮಾತ್ರ ನೀವು ನಿಮ್ಮ ಪತ್ನಿಗೆ ಭಾವನಾತ್ಮಕ ಬೆಂಬಲ ನೀಡಬಹುದು.

ಕುಂಭ ನಿಮ್ಮ ದಿಟ್ಟ ಮತ್ತು ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಆತ್ಮಗೌರವವನ್ನು ಹಾನಿ ಮಾಡಬಹುದು.

ಮೀನ ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ನಿಮ್ಮ ತಾಯಿಯ ಬದಿಯಿಂದ ಹಣಕಾಸಿನ ಲಾಭ ವನ್ನು ಪಡೆಯುವ ಸಾಧ್ಯತೆ ಇದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- **1894:** ಭಾರತರ ಮೇಲಿನ ತಾರತಮ್ಯದ ವಿರುದ್ಧ ಹೋರಾಡಲು ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮ ಗಾಂಧಿ ನಟಾಲ್ ಇಂಡಿಯನ್ ಕಾಂಗ್ರೆಸ್ ಅನ್ನು ಸ್ಥಾಪಿಸಿದರು.
- **1996:** ಮದ್ರಾಸ್ ಅನ್ನು ಚೆನ್ನೈ ಎಂದು ಮರುನಾಮಕರಣ ವಾಯಿತು.
- **2012:** ಪ್ರಣಬ್ ಮುಖರ್ಜೀ ಅಧ್ಯಕ್ಷೀಯ ಚುನಾವಣೆಯನ್ನು ಗೆದ್ದರು.

ಚಿತ್ರಸ್ಫೂರ್ತಿ

ಸ್ವತಃ ಅಗ್ನಿಗಾಹುತಿಗೊಳ್ಳುತ್ತಿರುವ ಸನ್ಯಾಸಿ, ಈ ಚಿತ್ರ ತೆಗೆದಿದ್ದು 1963 ರಲ್ಲಿ. ಮಾಲ್ಕಮ್ ಬ್ರೌನ್ ಅವರಿಂದ.

ಕರ್ಣನ ಸಾಮರ್ಥ್ಯವನ್ನು ಹೊಗಳಿದ ಶ್ರೀಕೃಷ್ಣ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಮಹಾಭಾರತದ ಕಥೆಯ ಪ್ರಕಾರ, ಶ್ರೀಕೃಷ್ಣನು ಕುರುಕ್ಷೇತ್ರದ ಯುದ್ಧದಲ್ಲಿ ಅರ್ಜುನನ ಸಾರಥಿಯಾದನು. ಅದೇ ಸಮಯದಲ್ಲಿ, ಅರ್ಜುನನ ರಥದ ಮೇಲೆ ಜೋಡಿಸಲಾದ ಧ್ವಜದ ಮೇಲೆ ಹನುಮಂತನು ತನ್ನ ಸೂಕ್ಷ್ಮ ರೂಪದಲ್ಲಿ ಕುಳಿತಿದ್ದನು. ತನ್ನ ಪ್ರಭು ರಾಮನ ಜತೆಯಲ್ಲಿ ಸದಾ ಇರುತ್ತಿದ್ದ ಹನುಮಂತನು ದ್ವಾಪರ ಯುಗದಲ್ಲೂ ಶ್ರೀರಾಮನ ಅವತಾರವಾದ ಶ್ರೀಕೃಷ್ಣನೊಂದಿಗೆ ಯುದ್ಧ ಭೂಮಿಯಲ್ಲಿ ಇದ್ದನು.

ಕರ್ಣ ಮತ್ತು ಅರ್ಜುನ ಇಬ್ಬರೂ ಸಹೋದರರು, ಇಬ್ಬರೂ ಒಂದೇ ತಾಯಿಯ ಮಕ್ಕಳು. ಆದರೆ ಇಬ್ಬರೂ ಬೇರೆ ಬೇರೆ ಕಡೆಯಿಂದ ಗುಂಪುಗಳಿಗಾಗಿ ಹೊಡೆದಾಡುತ್ತಿದ್ದರು. ಮಹಾಭಾರತದ ಯುದ್ಧವು ತನ್ನ ನಿರ್ಣಾಯಕ ತಿರುವಿನತ್ತ ಸಾಗುತ್ತಿತ್ತು. ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಅನೇಕ ಯೋಧರು ಹುತಾತ್ಮರಾಗಿದ್ದರು. ಕರ್ಣನನ್ನು ಅರ್ಜುನನಂತೆ ಮಹಾನ್ ಯೋಧ ಎಂದು ಪರಿಗಣಿಸಲಾಗಿತ್ತು. ಇಬ್ಬರೂ ತಮ್ಮ ಶಕ್ತಿಶಾಲಿ ಆಯುಧಗಳಿಂದ ಪರಸ್ಪರ ಒಬ್ಬರ ಮೇಲೆ ಒಬ್ಬರು ದಾಳಿ ಮಾಡುತ್ತಿದ್ದರು. ಅರ್ಜುನನ ಬಳಿ ಗಾಂಢೀವ ಎಂಬ ಬಿಲ್ಲಿದ್ದರೆ, ಕರ್ಣನ ಬಳಿ ವಿಜಯ ಎಂಬ ಬಿಲ್ಲಿತ್ತು.

ಅರ್ಜುನ ಮತ್ತು ಕರ್ಣ ಪರಸ್ಪರ ಬಾಣಗಳ ಸುರಿಮಳೆಗೈದರು. ಅರ್ಜುನನು ಕರ್ಣನ ಕಡೆಗೆ ಬಾಣಗಳನ್ನು ಹೊಡೆಯುತ್ತಿದ್ದಾಗ ಅವನ ರಥವು 25-30 ಹೆಜ್ಜೆ ಹಿಂದಕ್ಕೆ ಸರಿಯುತ್ತಿತ್ತು. ಅದೇ ಸಮಯದಲ್ಲಿ ಕರ್ಣನ ಬಾಣಗಳ ದಾಳಿಯಿಂದ ಅರ್ಜುನನ ರಥವು ಕೇವಲ 2-3 ಹೆಜ್ಜೆ ಹಿಂದಕ್ಕೆ ಚಲಿಸುತ್ತಿತ್ತು. ಅರ್ಜುನನ ರಥವು ಹಿಂದೆ ಸರಿದಾಗಲೆಲ್ಲಾ ಶ್ರೀಕೃಷ್ಣನ ಮುಖದಲ್ಲಿ ನಗು ಮೂಡುತ್ತಿತ್ತು ಮತ್ತು ದರ್ಪದಿಂದ ಕರ್ಣನನ್ನು ಹೊಗಳುತ್ತಿದ್ದನು. ಇದನ್ನು ನೋಡಿದ ಅರ್ಜುನನಿಗೆ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲಾಗಲಿಲ್ಲ ಮತ್ತು ಕರ್ಣನನ್ನು ಹೊಗಳಲು ಕಾರಣವನ್ನು ಕೇಳಿದನು.

ಅರ್ಜುನ ಶ್ರೀಕೃಷ್ಣನನ್ನು ಪ್ರಶ್ನಿಸಿದಾಗ, ಶ್ರೀಕೃಷ್ಣನು ಮುಗುಳ್ನಕ್ಕು ಹೇಳಿದನು - 'ಓ ಪಾರ್ಥ! ನಾನೇ ನಿನ್ನ ಸಾರಥಿ. ಈ ರಥದ ಧ್ವಜದ ಮೇಲೆ ಹನುಮಂತನು ಕುಳಿತಿದ್ದಾನೆ. ಚಕ್ರಗಳ ಮೇಲೆ ಶೇಷನಾಗ ಅಂದರೆ ನಮ್ಮ ಅಣ್ಣ ಬಲರಾಮನೂ ಇದ್ದಾನೆ. ನೀನು ಎಷ್ಟು ದೊಡ್ಡ ಬಿಲ್ಲುಗಾರ, ನಿನ್ನ ಶೌರ್ಯದೊಂದಿಗೆ ಈ ಎಲ್ಲ ಶಕ್ತಿಗಳ ಒಗ್ಗೂಡುವಿಕೆಯಿದ್ದರೂ, ಕರ್ಣನು ತನ್ನ ಆಕ್ರಮಣದಿಂದ ನಿನ್ನ ರಥವನ್ನು 2-3 ಹೆಜ್ಜೆ ಹಿಂದಕ್ಕೆ ತಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಇದರಿಂದ ನಾವು ಕರ್ಣ ಎಷ್ಟು ಬಲಶಾಲಿಯಾಗಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು'. ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿದ ಅರ್ಜುನನಿಗೆ ಕರ್ಣನಂತಹ ಯೋಧನ ಶಕ್ತಿಯ ಬಗ್ಗೆ ಅರಿವು ಮೂಡಿತು.

ಕರ್ಣನು ಅತ್ಯಂತ ಶಕ್ತಿಶಾಲಿಯಾಗಿದ್ದನು ಆದರೆ ಯುದ್ಧ ನೀತಿಗಳನ್ನು ಮುರಿಯುವ ಹಕ್ಕು ಅವನಿಗೆ ಇರಲಿಲ್ಲ. ಕರ್ಣನು ಅರ್ಜುನನ ಮೇಲೆ ನಿರಂತರವಾಗಿ ಆಕ್ರಮಣ ಮಾಡಿದರೂ ಅರ್ಜುನನಿಗೆ ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ ಎಂದು ಕಡು ಕೋಪದಿಂದ ಒಂದೇ ಬಾರಿ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಬಾಣಗಳ ಸಂಖ್ಯೆ ಎಷ್ಟು ಹೆಚ್ಚಾಗಿತ್ತೆಂದರೆ ಅವುಗಳಲ್ಲಿ ಕೆಲವು ಶ್ರೀಕೃಷ್ಣನನ್ನೂ ಹೊಡೆಯಲಾರಂಭಿಸಿತು. ಕರ್ಣನ ಒಂದು ಬಾಣವು ಶ್ರೀಕೃಷ್ಣನ ಎದೆಗೆ ಮತ್ತು ಅವನ ರಕ್ಷಣಾ ಕವಚಕ್ಕೆ ಬಡಿದಿರುವುದನ್ನು ಕಂಡು ಹನುಮಂತನು ಕರ್ಣನ ಮೇಲೆ ಕೋಪಗೊಳ್ಳುತ್ತಾನೆ. ತಕ್ಷಣವೇ ಹನುಮಂತನು ರಥದ ಮೇಲಿನ ಧ್ವಜದಿಂದ ಕೆಳಗೆ ಜಿಗಿದು ತನ್ನ ರೂಪವನ್ನು ಪ್ರಸ್ತುತಪಡಿಸಿದನು. ಕೋಪಗೊಂಡ ಹನುಮಂತನನ್ನು ನೋಡಿದ ಕರ್ಣನು ಧನುಸ್ಸನ್ನು ರಥದ ಮೇಲೆ ಇಟ್ಟು ಕೈಮುಗಿದು ಕ್ಷಮೆಯಾಚಿಸಿದನು. ಶ್ರೀಕೃಷ್ಣನು ಹನುಮಂತನು ಕೋಪದಲ್ಲಿದ್ದುದ್ದನ್ನು ಕಂಡು ತನ್ನತ್ತ ತಿರುಗಿ ನೋಡುವಂತೆ ಹೇಳುತ್ತಾನೆ. ನಂತರ ಹನುಮಂತನು ಕೋಪದಿಂದಲೇ ಶ್ರೀಕೃಷ್ಣನನ್ನು ನೋಡುತ್ತಾನೆ. ತನ್ನ ಪ್ರಭುವನ್ನು ನೋಡುತ್ತಿದ್ದಂತೆ ಹನುಮಂತನ ಕೋಪ ಕರಗಿ ಮತ್ತೆ ಹಿಂದಿರುಗಿ ಬಂದು ರಥವನ್ನೇರಿ ಕುಳಿತುಕೊಳ್ಳುತ್ತಾನೆ.

ಹೀಗೆ ಕರ್ಣನು ಮಹಾಬಲಶಾಲಿಯಾಗಿದ್ದರೂ ಕೂಡ ಅವನು ಕೌರವರ ಪರ ಇದ್ದುದರಿಂದ ಅವನ ಶೌರ್ಯ ಯಾವ ಪ್ರಯೋಜನಕ್ಕೂ ಬರಲಿಲ್ಲ. ನಮಗಿರುವ ಸಾಮರ್ಥ್ಯಗಳು ನಾವು ಯಾವುದಕ್ಕೆ ಅದನ್ನು ಉಪಯೋಗಿಸುತ್ತೇವೆ ಎನ್ನುವುದರ ಮೇಲೆ ನಿರ್ಧಾರಿತವಾಗುತ್ತದೆ.

ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ಮೇಲೇರುವ ಮೆಟ್ಟಿಲು (3)
4. ಸರದಿ ಅಥವಾ ಪಾಳಿ (3)
6. ಮಂಗಳನಿಗೊಂದು ಪರ್ಯಾಯ ಪದ (2)
8. ದಯೆಗೆ ಮತ್ತೊಂದು ಹೆಸರು (3)
10. ಮರಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ (2)
11. ಬೆಳಗಿನ ಜಾವ (3)
12. ಕೊಳೆಯಾದ ಎಂದರ್ಥ (3)
13. ಹಣ, ಸಂಪತ್ತು (2)
14. ಗಂಡುಕುರಿ (3)
16. ಎರಡಕ್ಷರದ ಮತ್ತೊಂದು ಸಾಲ (2)
20. ರೀತಿಯ ಜೋಡಿಪದ (3)
21. ನೀರಿನಲ್ಲಿ ಉಂಟಾದ ಅಲೆ (3)

ಎಡದಿಂದ ಬಲಕ್ಕೆ

1. ನಟನೆ ಮಾಡುವುದನ್ನು ಹೀಗೆ ಹೇಳಬಹುದು (4)
2. ಬಾನಿನಲ್ಲಿ ಮಿನುಗುವ ತಾರೆ (3)
3. ಒಂದಿಡೀ ಪೀಳಿಗೆ (4)
4. ಮತ್ತೊಬ್ಬರಿಗೆ ಮಾಡುವ ನೆರವು (3)
5. ತಿಮ್ಮಪ್ಪನ ನೆಲೆವೀಡು (4)
7. ಹುಟ್ಟು (3)
8. ತಲೆಯ ಮೇಲಿನ ಕಿರೀಟ (3)
9. ಬಾಡಿ ಹೋಗು (3)
10. ಬೆಲ್ಲ ಅಥವಾ ಸಕ್ಕರೆಯಿಂದ ತಯಾರಿಸಿದ ಪಾನೀಯ (3)
13. ದೇವತೆಗಳ ವೈದ್ಯ (4)
15. ಕೋಲಾಹಲಕ್ಕೆ ಮತ್ತೊಂದು ಹೆಸರು (4)
17. ಶಿವನ ಕೈಯಲ್ಲಿರುವ ಚರ್ಮದ ವಾದ್ಯ (4)
18. ಊಹೆಗೆ ಮತ್ತೊಂದು ಹೆಸರು (3)
19. ವಸ್ತುಗಳನ್ನು ಹೊರದೇಶಕ್ಕೆ ರವಾನಿಸುವುದು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಪ್ರಖರ 4. ಭಾವಜ 6. ಸತ್ಕಾರ 7. ಸಮರ 9.ತಪನ 11. ಜಗಳ 13. ಯಕತುವಾ 15. ನವಾಬ 17. ಹಸುರು 19. ಆಕರ 21. ಮಾಧವಿ 22. ಕವಲು 23. ಕಸೂತಿ

ಮೇಲಿನಿಂದ ಕೆಳಕ್ಕೆ: 1. ಆಯಾಸ 2. ಪ್ರಹರ 3. ರಸಭಂಗ 4. ಭಾರತ 5. ಜತನ 8. ಮರುಕಳಿಸು 10. ಪರಿಚಾರಕ 11. ಜವಾನ 12. ಳಸಬ 16. ವಾಸ್ತವಿಕ 17. ಹವ್ಯಕ 18. ರುಮಾಲು 19. ಆರತಿ 20. ರಣಿತ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಭೂಮಿ ಗುಂಡಕ್ಕಿಲ್ಲ

ಮೊದಲೆಲ್ಲ, ಭೂಮಿ ಚಪ್ಪಟೆಯಾಗಿದೆ ಎಂದು ನಂಬಿದ್ದರು, ಆಮೇಲೆ ಭೂಮಿ ವೃತ್ತಾಕಾರದಲ್ಲಿದೆ ಎಂದರು. ಮತ್ತೇ ಭೂಮಿ ಮೊಸಂಬಿ ಹಣ್ಣಿನ ಆಕಾರದಲ್ಲಿದೆ ಎಂದೂ ಹೇಳಿದರು. ಆದರೆ, ಅದೆಲ್ಲ ಶುದ್ಧ ಸುಳ್ಳು

ಏಕೆಂದರೆ, ಭೂಮಿ ಇರೋದು ಓರೆಯಾದ ಗೋಳಾಕಾರದಲ್ಲಿದೆ. ಏಕೆಂದರೆ, ಭೂಮಿ ಸುತ್ತುತ್ತಿದ್ದಾಗ ಡಿಡಿಸಮಭಾಜಕ ವೃತ್ತದಲ್ಲಿ ಊದಿಕೊಂಡರೆ, ಧ್ರುವಗಳಲ್ಲಿ ಚಪ್ಪಟೆಯಾಗಿರುತ್ತದೆ. ಭೂಮಿಯ ಮೇಲೆ ದ್ರವ್ಯ ರಾಶಿಯ ವಿತರಣೆ ಸಮವಾಗಿಲ್ಲ, ಮತ್ತು ಗುರುತ್ವಾಕರ್ಷಣೆಯಿಂದಾಗಿಯೂ ಭೂಮಿಯ ಸುತ್ತಳತೆಯಲ್ಲಿ ಬದಲಾಗುತ್ತಾ ಹೋಗುತ್ತದೆ. ಅಂತರಿಕ್ಷದಲ್ಲಿ ಮನುಷ್ಯನ ಕಣ್ಣಿಗೆ ಅದು ವೃತ್ತಾಕಾರದಲ್ಲಿ ಕಂಡರೂ, ಕೆಲವು ವೈಜ್ಞಾನಿಕ ಸಂಶೋಧನೆಯಿಂದ ಗೊತ್ತಾಗಿದೆ.

ಪುಸ್ತಕ ಲೋಕ

ಅಪ್ಪನ ಆಟೋಗ್ರಾಫ್

ಅನಂತ ಕುಣಿಗಲ್ ಅವರ 'ಅಪ್ಪನ ಆಟೋಗ್ರಾಫ್' ಕುರಿತು ವೀರಕಪುತ್ರ, ಶ್ರೀನಿವಾಸ ಅವರು ಬೆನ್ನುಡಿಯಲ್ಲಿ: ಈ ವಿಷಯಗಳು ನನ್ನಲ್ಲೂ ಇದ್ದವಲ್ಲಾ? ನಾನೂ ಬರೆಯಬಹುದಿತ್ತಲ್ಲಾ? ಅಂತ ಯಾರಿಗಾದರೂ ಅನಿಸುವಂತಹ ಬರಹಗಳನ್ನೊಳಗೊಂಡ ಪುಸ್ತಕ ಈ ಅಪ್ಪನ ಆಟೋಗ್ರಾಫ್. ಆದರೆ ಎಲ್ಲರೂ ಬರೆಯಲಾಗುವುದಿಲ್ಲವಲ್ಲ! ಆದ್ದರಿಂದ ಈ ಬರಹಗಳು ಬರೆಯಲಾಗದವರ



ಧ್ವನಿಯಾಗುತ್ತವೆ ಮತ್ತು ಓದುವವರ ಬದುಕಾಗುತ್ತವೆ. ಈ ಕೃತಿಯ ಹೆಚ್ಚುಗಾರಿಕೆಯೇ ಅದು. ಅಲ್ಲಲ್ಲಿ ಮೊಟಿವೇಶನಲ್ ಪುಸ್ತಕಗಳನ್ನು ನೆನಪಿಸುತ್ತವೆಯಾ ದರೂ ಅವುಗಳಂತೆ ಅಸಾಮಾನ್ಯ ಸಂಗತಿಗಳನ್ನು ಹೇಳುವುದಿಲ್ಲ. ಹೆಬ್ಬೆಟ್ಟಿನ ಅಮ್ಮ ಸಹಿ ಮಾಡಲು ಕಲಿತದ್ದು, ಮೊಬೈಲ್ ಹಿಡಿದು ಫೋನ್ ಮಾಡಲು ಕಲಿತದ್ದು ತರಹದ ಪುಟ್ಟಪುಟ್ಟ ಪ್ರಸಂಗಗಳ ಮೂಲಕ ಈ ಕೃತಿ ಉಂಟು ಮಾಡುವ ಸ್ಫೂರ್ತಿ ತುಂಬಾ ದೊಡ್ಡದು. ಭಾವುಕ ಬರಹಗಳ ಜೊತೆಗೊಂದಷ್ಟು ಪ್ರಚೋದನಾಕಾರಿ ಮತ್ತು ಮಾಹಿತಿಯುಕ್ತ ಲೇಖನಗಳೂ ಇಲ್ಲಿವೆ. ಈ ಪುಸ್ತಕದ ಬಿಡಿಬಿಡಿ ಬರಹಗಳು, ಬೇರೆ ಬೇರೆ ವಿಷಯಗಳನ್ನು ಓದುವಾಗಲೇ ಲೇಖಕನ ವಯಸ್ಸು ಅಂದಾಜಿಗೆ ಸಿಕ್ಕಿಬಿಡುತ್ತದೆ. ನನ್ನಂತಹ ಅರ್ಧ ಆಯಸ್ಸು ಕಂಡವರಿಗೆ ಈ ಬರಹಗಳು ಅಚ್ಚರಿಯಾಗಿಯೂ, ಸುಲಭವಾಗಿಯೂ ಒಳಗಿದರೆ ಈಗಷ್ಟೇ ಪ್ರಪಂಚ ನೋಡಲಾರಂಭಿಸಿದವರಿಗೆ ಮಾರ್ಗಸೂಚಿಯಂತೆ ಕೈ ಹಿಡಿಯಬಹುದು ಎಂದಿದ್ದಾರೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಭಾರತೀಯ ಬೌದ್ಧ ಸಂಸ್ಕೃತಿ ಮತ್ತು ಪರಂಪರಾ ಕೇಂದ್ರವನ್ನು ಯಾವ ದೇಶದಲ್ಲಿ ನಿರ್ಮಿಸಲಾಗುತ್ತಿದೆ?

- ಎ. ಮಾಲ್ಡೀವ್ಸ್.
- ಬಿ. ನೇಪಾಳ.
- ಸಿ. ಚೀನಾ.
- ಡಿ. ಶ್ರೀಲಂಕಾ.

ಉತ್ತರ: ಬಿ. ನೇಪಾಳ.

ಮಾಹಿತಿ

ನೇಪಾಳದಲ್ಲಿ, ಬೌದ್ಧ ಸನ್ಯಾಸಿಗಳ ವಿಶೇಷ ಪಠಣದೊಂದಿಗೆ ಭೂಮಿ ಪೂಜೆ ಸಮಾರಂಭದ ನಂತರ ಲುಂಬಿನಿಯಲ್ಲಿ ಭಾರತೀಯ ಬೌದ್ಧ ಸಂಸ್ಕೃತಿ ಮತ್ತು ಪರಂಪರಾ ಕೇಂದ್ರದ ನಿರ್ಮಾಣ ಕಾರ್ಯವು ಪ್ರಾರಂಭವಾಗಿದೆ. 1.60 ಶತಕೋಟಿ ರುಪಾಯಿ ವೆಚ್ಚದ ಹೆರಿಟೇಜ್ ಸೆಂಟರ್ ಅನ್ನು ಶೂನ್ಯ ನಿವ್ವಳ ತಂತ್ರಜ್ಞಾನದಲ್ಲಿ ನಿರ್ಮಿಸುವ ನಿರೀಕ್ಷೆಯಿದೆ. ಈ ಕೇಂದ್ರ ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳ್ಳಬಹುದು ಎಂದು ಅಂದಾಜಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ನೇಪಾಳದ ಅಂದಿನ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು 2022 ರಲ್ಲಿ ಮೋದಿಯವರ ಲುಂಬಿನಿ ಭೇಟಿಯ ಸಂದರ್ಭದಲ್ಲಿ ಈ ಕೇಂದ್ರದ ಸ್ಥಾಪನೆಗೆ ಜಂಟಿಯಾಗಿ ಅಡಿಪಾಯ ಹಾಕಿದರು.

ಊಟಕ್ಕಿರಲಿ ಥರಥರದ ಉಪ್ಪಿನಕಾಯಿ

● ಮಂಗಲಾ ರಾಗ್ ಹೆಗಡೆ

ಉಪ್ಪಿನಕಾಯಿ ಇರದ ಊಟ ಊಟವಾಗಲು ಸಾಧ್ಯವೇ ಇಲ್ಲ. ಎಷ್ಟೋ ಜನಕ್ಕೆ ಊಟದಲ್ಲಿ ಉಪ್ಪಿನಕಾಯಿ ಇರದಿದ್ದರೆ, ಸರಿಯಾಗಿ ಊಟವನ್ನೂ ಮಾಡಲ್ಲ. ಮನೆಯಲ್ಲಿ ಜಾಸ್ತಿ ಏನು ಅಡುಗೆ ಮಾಡಲಾಗದಿದ್ದರೂ ಒಂದು ಉಪ್ಪಿನಕಾಯಿ ಇದ್ದರೆ ಮೊಸರಿನ ಜೊತೆಗೆ ಊಟ ಮುಗಿಸಬಹುದು. ಅದರಲ್ಲೂ ಬೇರೆ ಬೇರೆ ಹಣ್ಣು, ತರಕಾರಿಗಳ ವಿಶೇಷವಾದ ಉಪ್ಪಿನಕಾಯಿ ಇದ್ದರಂತೂ ಸ್ವರ್ಗವೇ ಮನೆಯಲ್ಲಿ. ಊಟ ಸರಾಗವಾಗಿ ಹೊಟ್ಟೆಯನ್ನು ತಲುಪಬೇಕಂದ್ರೆ, ಅದರ ಮಧ್ಯಸ್ಥಿಕೆ ವಹಿಸುವುದೇ ಉಪ್ಪಿನಕಾಯಿ. ಅಂತಹ ಹಲವು ಬಗೆಯ ಉಪ್ಪಿನಕಾಯಿ ಮಾಡುವ ರೀತಿ ನಿಮ್ಮ ಮುಂದಿವೆ.

ಸವತೆಕಾಯಿ ಉಪ್ಪಿನಕಾಯಿ

ಸವತೆಕಾಯಿಯನ್ನು ಹೆಚ್ಚಿ ಒಂದು ಡಬ್ಬಕ್ಕೆ ಹಾಕಿ, ಅದಕ್ಕೆ ಉಪ್ಪು, ಇಂಗು, ಲಿಂಬುರಸ ಹಾಕಿ ಎರಡು ದಿನ ಬಿಡಬೇಕು. ನಂತರ ಅದಕ್ಕೆ ಮೆಣಸಿನಪುಡಿ ಮತ್ತು ಮೊದಲೇ ಹುರಿದು ಹಿಟ್ಟು ಮಾಡಿದ, ಉಪ್ಪಿನಕಾಯಿಗೆ ಹಾಕುವ ಮಸಾಲಾ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ನಂತರ ಸಾಸಿವೆಯ ಒಗ್ಗರಣೆ ಮಾಡಿದರೆ ರುಚಿಕರವಾದ ಸವತೆಕಾಯಿ ಉಪ್ಪಿನಕಾಯಿ ರೆಡಿ.

ಸೇಬು ಹಣ್ಣಿನ ಉಪ್ಪಿನಕಾಯಿ

ಸೇಬು ಹಣ್ಣನ್ನು ಸಣ್ಣದಾಗಿ ಹೆಚ್ಚಿ ಒಂದು ಡಬ್ಬಕ್ಕೆ ಹಾಕಿ, ಅದಕ್ಕೆ ಉಪ್ಪು, ಇಂಗು, ಲಿಂಬುರಸ ಹಾಕಿ ಎರಡು ಘಂಟೆ ಹಾಗೆಯೇ ಬಿಡಬೇಕು. ನಂತರ ಅದಕ್ಕೆ ಮೊದಲೇ ಹುರಿದು ಹಿಟ್ಟು ಮಾಡಿದ, ಉಪ್ಪಿನಕಾಯಿಗೆ ಹಾಕುವ ಮಸಾಲಾ ಪುಡಿಯನ್ನು ಮತ್ತು ಅಚ್ಚಖಾರದಪುಡಿ ಯನ್ನು ಸೇರಿಸಿ, ಚೆನ್ನಾಗಿ ಮಿಕ್ಸ್ ಮಾಡಿ ನಂತರ ಸಾಸಿವೆಯ ಒಗ್ಗರಣೆ ಮಾಡಿದರೆ ಸೇಬು ಹಣ್ಣಿನ ಉಪ್ಪಿನಕಾಯಿ ಸಿದ್ಧ.

ಬೆಳ್ಳುಳ್ಳಿ ಉಪ್ಪಿನಕಾಯಿ



ಒಂದು ಹಿಡಿ ಬಿಡಿಸಿದ ಬೆಳ್ಳುಳ್ಳಿ ಗಳನ್ನು ಒಂದು ಡಬ್ಬಕ್ಕೆ ಹಾಕಿ, ಅದಕ್ಕೆ ಉಪ್ಪು, ಲಿಂಬುರಸ ಹಾಕಿ ನಾಲ್ಕು ದಿನ ಉಪ್ಪು ಹೀರಲು ಬಿಡಬೇಕು. ನಂತರ ಅದಕ್ಕೆ ಮೊದಲೇ ಹುರಿದು ಹಿಟ್ಟು ಮಾಡಿದ, ಉಪ್ಪಿನಕಾಯಿಗೆ ಹಾಕುವ ಮಸಾಲಾ ಪುಡಿಯನ್ನು ಮತ್ತು ಅಚ್ಚಖಾರದಪುಡಿಯನ್ನು ಸೇರಿಸಿ, ಚೆನ್ನಾಗಿ ಮಿಕ್ಸ್ ಮಾಡಿ ನಂತರ ಸಾಸಿವೆ ಮತ್ತು ಇಂಗಿನ ಒಗ್ಗರಣೆ ಮಾಡಿದರೆ ಉಪ್ಪಿನಕಾಯಿ ಸವಿಯಲು ಸಿದ್ಧ.

ಕ್ಯಾರೆಟ್ ಉಪ್ಪಿನಕಾಯಿ

ಕ್ಯಾರೆಟನ್ನು ನಿಮಗೆ ಬೇಕಾದ ಆಕಾರದಲ್ಲಿ ಹೋಳುಗಳನ್ನಾಗಿ ಮಾಡಿ ಒಂದು ಡಬ್ಬದಲ್ಲಿ ಹಾಕಿ. ಅದಕ್ಕೆ ಉಪ್ಪು, ಲಿಂಬುರಸ ಹಾಕಿ ಗಟ್ಟಿಯಾಗಿ ಮುಚ್ಚಳವನ್ನು ಹಾಕಿ. ನಾಲ್ಕು ದಿನಗಳ ನಂತರ ಕ್ಯಾರೆಟ್ ಉಪ್ಪು ಮತ್ತು ಹುಳಿಯನ್ನು ಹೀರಿಕೊಂಡು ಸ್ವಲ್ಪ ಮೆತ್ತಗೆ ಆಗಿರುತ್ತದೆ. ಆಗ ಅದಕ್ಕೆ ಉಪ್ಪಿನಕಾಯಿಗೆ ಹಾಕುವ ಮಸಾಲಾ ಪುಡಿ ಮತ್ತು ಅಚ್ಚಖಾರದ ಪುಡಿಯನ್ನು ಸೇರಿಸಿ ಅದಕ್ಕೆ ಸಾಸಿವೆ ಎಣ್ಣೆಯ ಒಗ್ಗರಣೆ ಮಾಡಿದರೆ ರುಚಿಯಾದ ಕ್ಯಾರೆಟ್ ಉಪ್ಪಿನಕಾಯಿ ಮೆಲ್ಲಲು ಸಿದ್ಧ.

ರಾಜ ನೆಲ್ಲಿಕಾಯಿಯ ಉಪ್ಪಿನಕಾಯಿ

ರಾಜನೆಲ್ಲಿಕಾಯಿಯನ್ನು ತಂದು ಒರೆಸಿ,ಒಂದು ಡಬ್ಬದಲ್ಲಿ ಹಾಕಿ, ಅದಕ್ಕೆ ಉಪ್ಪು, ಹಸಿಮೆಣಸಿನಕಾಯಿ ಹೆಚ್ಚಿ ಹಾಕಿ ಇಡಬೇಕು, ಎರಡು ದಿನದ ನಂತರ ಅದು ಉಪ್ಪು ಹೀರಿಕೊಂಡಿರುತ್ತದೆ. ಆಗ ಅದಕ್ಕೆ ಸಾಂಬಾರ್ ಪುಡಿ ಮತ್ತು ಅಚ್ಚಖಾರದ ಪುಡಿಯನ್ನು ಸೇರಿಸಿ. ನಂತರ ಅದಕ್ಕೆ ಸ್ವಲ್ಪ ಸಾಸಿವೆ, ಇಂಗಿನ ಒಗ್ಗರಣೆ ಹಾಕಿದರೆ ರುಚಿಯಾದ ರಾಜ ನೆಲ್ಲಿಕಾಯಿ ಉಪ್ಪಿನಕಾಯಿ ಸೀದಾ ತಟ್ಟೆಗೇ ಹಾಕಿಕೊಂಡು ಸವಿಯಿರಿ.

ಮಾವಿನಕಾಯಿ ಉಪ್ಪಿನಕಾಯಿ

ಮಾವಿನಕಾಯಿಯನ್ನು ಚೆನ್ನಾಗಿ ತೊಳೆದು ಒರೆಸಿ ಹೋಳು ಹೆಚ್ಚಿ, ಒಂದು ಡಬ್ಬಿಯಲ್ಲಿ ಹಾಕಿ. ಅದಕ್ಕೆ ಉಪ್ಪು, ಚಿಟಿಕೆ ಇಂಗು ಹಾಕಿ 2 ದಿನ ಬಿಡಿ. ನಂತರ ಅದು ಚೆನ್ನಾಗಿ ಉಪ್ಪು ಹೀರಿಕೊಂಡಿರುತ್ತದೆ. ಈಗ ಒಂದು ಬಾಣಲೆಗೆ ಎಣ್ಣೆ ಹಾಕಿಕೊಳ್ಳಿ. ಅದಕ್ಕೆ ಉಪ್ಪಿನಕಾಯಿಗೆ ಬಳಸುವ ಸಾಂಬಾರ್ ಪೌಡರ್ ಮತ್ತು ಸ್ವಲ್ಪ ಅಚ್ಚಖಾರದ ಪುಡಿಯನ್ನು ಹಾಕಿ. ಅದಕ್ಕೆ ಈಗ ಮಾವಿನಕಾಯಿಯ ಹೋಳುಗಳನ್ನು ಸೇರಿಸಿ. ಚೆನ್ನಾಗಿ ಕೈಯಾಡಿಸಿ. ಹೀಗೆ ಮಾಡಿದರೆ ಉಪ್ಪಿನಕಾಯಿಯ ರಾಜನೆಂದೇ ಖ್ಯಾತಿಯಾದ ಮಾವಿನಕಾಯಿಯ ಉಪ್ಪಿನಕಾಯಿ ನಿಮ್ಮ ಮುಂದೆಯೇ ರೆಡಿ!

ಕಳಲೆ ಉಪ್ಪಿನಕಾಯಿ

ನಾಲ್ಕು ದಿನ ನೀರು ತೆಗೆದ ಕಳಲೆಯನ್ನು ಒಣ ಬಟ್ಟೆಯಲ್ಲಿ ನೀರು ಹೋಗುವಂತೆ ಒರೆಸಿ ಒಂದು ಡಬ್ಬದಲ್ಲಿ ಹಾಕಿ, ಅದಕ್ಕೆ ಉಪ್ಪು ಹಾಕಿ ನಾಲ್ಕು ದಿನ ಇಡಬೇಕು. ಉಪ್ಪು ಹೀರಿದ ನಂತರ ಮಸಾಲಾಪುಡಿಯನ್ನು ಮತ್ತು ಅಚ್ಚಖಾರದ ಪುಡಿಯನ್ನು ಸೇರಿಸಿ ಚೆನ್ನಾಗಿ ಕಲಸಿ ನಂತರ ಸಾಸಿವೆ, ಇಂಗಿನ ಒಗ್ಗರಣೆ ಮಾಡಬೇಕು. ಆಗ ರುಚಿಯಾದ ಕಳಲೆಯ ಉಪ್ಪಿನಕಾಯಿ ನಿಮಗೆ ಬೇಕಾದವರ ಹೊಟ್ಟೆಗೆ ಸೇರಲು ಸಿದ್ಧ.

ಉಪ್ಪಿನಕಾಯಿ ಮಾಡಲು ಬಳಸುವ ಮಸಾಲಾ ಪುಡಿಗಳು - ಮೆಂತ್ಯ, ಜೀರಿಗೆ, ಸಾಸಿವೆ ಮೂರನ್ನೂ ಬೇರೆ ಬೇರೆಯಾಗಿ ಸಣ್ಣ ಉರಿಯಲ್ಲಿ ಹುರಿದು, ನಂತರ ಮಿಕ್ಸಿಯಲ್ಲಿ ಪುಡಿಮಾಡಬೇಕು. ಎಲ್ಲಾ ಉಪ್ಪಿನಕಾಯಿಗೂ ಇದೇ ಮಸಾಲಾವನ್ನು ಬಳಸಬಹುದು.

ಹೀಗೇ ಇನ್ನೂ ಹಸಿಮೆಣಸಿನಕಾಯಿಯ ಉಪ್ಪಿನಕಾಯಿ, ಮಾವಿನಶುಂಠಿಯ ಉಪ್ಪಿನಕಾಯಿ, ನೆಲ್ಲಿಕಾಯಿ, ಎಲೆ ಸವತೆಕಾಯಿ, ಲಿಂಬು, ದೊಡ್ಲಿ, ಅರಮಾದ್ಲು, ಅಮಟೆ, ದ್ರಾಕ್ಷಿ ಹಣ್ಣು ಇನ್ನೂ ಹಲವು ಬಗೆಯ ಉಪ್ಪಿನಕಾಯಿಗಳನ್ನು ಮಾಡಬಹುದು.



ಸಮಾಚಾರ ಸಣ್ಣದಲ್ಲ

ಅಮೆರಿಕದ 6 ಪಿಚ್ ತೃಪ್ತಿದಾಯಕ

ದುಬೈ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ನ್ಯೂಯಾರ್ಕ್ ಲೆಗ್‌ನಲ್ಲಿ ಬಳಸಲಾದ ಎಂಟು ಪಿಚ್‌ಗಳ ಪೈಕಿ ಆರು ಪಿಚ್‌ಗಳಿಗೆ ಐಸಿಸಿ ತೃಪ್ತಿದಾಯಕ ರೇಟಿಂಗ್ ನೀಡಿದೆ.

ಐಸಿಸಿ ಟಿ20 ವಿಶ್ವಕಪ್ ಟೂರ್ನಿಯು ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಅತಿಥ್ಯದಲ್ಲಿ ನಡೆದಿತ್ತು. ಟೂರ್ನಿಯಲ್ಲಿ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಚಾಂಪಿಯನ್ ಆಗಿತ್ತು. ಟೂರ್ನಿಯ ಡ್ರಾಪ್ ಇನ್ ಪಿಚ್‌ಗಳ ಕಳಪೆ ಗುಣಮಟ್ಟದ ಬಗ್ಗೆ ಟೀಕೆ ವ್ಯಕ್ತವಾಗಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿ ಐಸಿಸಿಯು ಪಿಚ್‌ಗಳ ವರದಿಯನ್ನು ಬಿಡುಗಡೆ ಮಾಡಿದೆ. ಐರ್ಲೆಂಡ್ ವಿರುದ್ಧದ ಭಾರತದ ಆರಂಭಿಕ ಪಂದ್ಯವನ್ನು ಒಳಗೊಂಡಂತೆ ನ್ಯೂಯಾರ್ಕ್‌ನ ನಾಸೌ ಕೌಂಟಿ ಕ್ರೀಡಾಂಗಣದಲ್ಲಿ ನಡೆದ ಎರಡು ಪಂದ್ಯಗಳ ಪಿಚ್‌ಗಳಿಗೆ ಅತೃಪ್ತಿಕರ ರೇಟಿಂಗ್ ನೀಡಲಾಗಿದೆ. ಮತ್ತೊಂದು ಪಂದ್ಯ ಶ್ರೀಲಂಕಾ – ದಕ್ಷಿಣ ಆಫ್ರಿಕಾ ನಡುವೆ ನಡೆದಿತ್ತು. ಎಲ್ಲ 52 ಪೂರ್ಣಗೊಂಡ ಪಂದ್ಯಗಳನ್ನು ಒಳಗೊಂಡಿರುವ ವರದಿಯಲ್ಲಿ ಮೂರು ಪಿಚ್‌ಗಳಲ್ಲಿ ಅಮೆರಿಕದ ಎರಡು ಮತ್ತು ವೆಸ್ಟ್ ಇಂಡೀಸ್‌ನ ಒಂದನ್ನು ಅತೃಪ್ತಿಕರ ಎಂದು ಪರಿಗಣಿಸಲಾಗಿದೆ. ಉಳಿದ ಹೆಚ್ಚಿನವು ತೃಪ್ತಿದಾಯಕ ಅಥವಾ ಹೆಚ್ಚಿನ ರೇಟಿಂಗ್‌ಗಳನ್ನು ಪಡೆದಿವೆ.

ಐಸಿಸಿ ಅಧ್ಯಕ್ಷಗಿರಿಗೆ ಜಯ್ ಮುಂಚೂಣಿ

ದುಬೈ: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಅಧ್ಯಕ್ಷ ಗ್ರೆಗ್ ಬಕ್ಲೆರ್ ಅವರ ಅಧಿಕಾರಾವಧಿ ನವೆಂಬರ್ 30ರಂದು ಕೊನೆಗೊಳ್ಳಲಿದೆ. ಆ ಸ್ಥಾನಕ್ಕೆ ಈಗ ಬಿಸಿಸಿಐ

ಕಾರ್ಯದರ್ಶಿ ಜಯ್ ಶಾ ಅವರ ಹೆಸರು ಮುಂಚೂಣಿಯಲ್ಲಿದೆ. ನೂತನ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಸಲ್ಲಿಸಲು ಆಗಸ್ಟ್ 27 ಕೊನೆಯ ದಿನವಾಗಿದೆ. ಆ ಸ್ಥಾನಕ್ಕೆ ಕಣಕ್ಕೆ ಇಳಿಸಲು ಶಾ ಅವರು ಆಸಕ್ತಿ ಹೊಂದಿದ್ದಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಐಸಿಸಿ ಅಧ್ಯಕ್ಷರು ತಲಾ ಎರಡು ವರ್ಷಗಳ ಮೂರು ಅವಧಿಗೆ ಆಯ್ಕೆಯಾಗಬಹುದು. ಆದರೆ, ನ್ಯೂಜಿಲೆಂಡ್ ಮೂಲದ ಗ್ರೆಗ್ ಈಗಾಗಲೇ ನಾಲ್ಕು ವರ್ಷಗಳನ್ನು ಪೂರೈಸಿದ್ದಾರೆ. 2020ರ ನವೆಂಬರ್‌ನಲ್ಲಿ ಗ್ರೆಗ್ ಅವರು ಐಸಿಸಿ ಸಾರಥ್ಯ ಪಡೆದಿದ್ದರು. 2022ರಲ್ಲಿ ಮರು ಆಯ್ಕೆಯಾಗಿದ್ದರು. ಆದರೆ, ಮೂರನೇ ಅವಧಿಗೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಐಸಿಸಿ ಮಂಡಳಿಗೆ ತಿಳಿಸಿದ್ದಾರೆ ಎಂದು ಐಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಆ. 30 ರಿಂದ ಸೆ.8 ವರೆಗೂ ನಡೆಯುವ ಪ್ಯಾರಾಲಿಂಪಿಕ್ಸ್ ಕ್ರೀಡೆಗಳು | 16 ಆಟಗಾರರ ತಂಡದಿಂದ ವಾಸ್ತವ್ಯ

ಪ್ಯಾರಿಸ್ ತಲುಪಿದ ಭಾರತೀಯ ಪ್ಯಾರಾಲಿಂಪಿಕ್ಸ್ ಕ್ರೀಡಾಳುಗಳು

ದೆಹಲಿ: ಪ್ಯಾರಿಸ್ ಹವಾಮಾನಕ್ಕೆ ಒಗ್ಗಿಕೊಳ್ಳುವ ಉದ್ದೇಶದಿಂದ ಜಾವೆಲಿನ್ ತಾರೆ ಸುಮಿತ್ ಅಂಟಿಲ್ ಅವರನ್ನು ಒಳಗೊಂಡ ಭಾರತದ ಅಥ್ಲೀಟುಗಳ ಮೊದಲ ತಂಡ ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಭಾಗಿಯಾಗಲು ಒಂದು ವಾರ ಮೊದಲೇ ಫ್ರಾನ್ಸ್ ರಾಜಧಾನಿಗೆ ತೆರಳಿತು. ಅಥ್ಲೀಟುಗಳ ತಂಡ ಐದು ಚಿನ್ನ ಸೇರಿ ಡಜನ್ ಪದಕಗಳ ಮೇಲೆ ಕಣ್ಣಿಟ್ಟಿದೆ.

16 ಅಥ್ಲೀಟುಗಳ ತಂಡ ಪ್ಯಾರಿಸ್‌ನ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಲಿದ್ದು, ಕ್ರೀಡೆಗಳ ಉದ್ಘಾಟನಾ ಸಮಾರಂಭಕ್ಕೆ ಮೂರು ದಿವಸ ಮೊದಲು ಕ್ರೀಡಾ ಗ್ರಾಮಕ್ಕೆ ತೆರಳಲಿದೆ.

ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಚಿನ್ನ ಉಳಿಸಿಕೊಂಡ ಭಾರತದ ಮೊದಲ ಕ್ರೀಡಾಪಟು ಎಂಬ ಹಿರಿಮೆಗೆ ಯತ್ನಿಸುತ್ತಿರುವ ಸುಮಿತ್ ಫ್ರಾನ್ಸ್ ರಾಜಧಾನಿಗೆ ಹತ್ತಿರದ ತಾಣದಲ್ಲಿ ಅಭ್ಯಾಸದಲ್ಲಿ ತೊಡಗಲಿದ್ದಾರೆ.

ಸುಮಿತ್ ಅಂಟಿಲ್ ಮತ್ತು ಕೆಲವು ಪ್ಯಾರಾ ಅಥ್ಲೀಟುಗಳು ನೆಲ್ಸನ್ ಮಂಡೇಲಾ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ತರಬೇತಿ ಪಡೆದುಕೊಳ್ಳಲಿದ್ದಾರೆ. ನಂತರ ಕ್ರೀಡಾ ಗ್ರಾಮಕ್ಕೆ ವಾಸ್ತವ್ಯ ಬದಲಾಯಿಸುವರು ಎಂದು ಪ್ಯಾರಾ ಅಥ್ಲೆಟಿಕ್ಸ್ ಹೆಡ್ ಕೋಚ್ ಸತ್ಯನಾರಾಯಣ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಿಂದ 5 ಕಿ.ಮೀ. ದೂರದಲ್ಲಿರುವ ನೆಲ್ಸನ್ ಮಂಡೇಲಾ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಅಥ್ಲೆಟಿಕ್ಸ್, ರಗ್ಬಿ, ಟೆನಿಸ್, ವೀಲ್ಚೇರ್ ಟೆನಿಸ್ ಮತ್ತು ಈಜುಕೊಳದ ವ್ಯವಸ್ಥೆಯಿದೆ.

ಪ್ಯಾರಾಲಿಂಪಿಕ್ಸ್ ಆಗಸ್ಟ್ 30 ರಿಂದ ಸೆಪ್ಟೆಂಬರ್ 8ರವರೆಗೆ ನಡೆಯಲಿದೆ. ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ 8ರಂದು ಸಮಾರೋಪ ನಡೆಯಲಿದೆ.

ಪ್ಯಾರಾ ಅಥ್ಲೆಟಿಕ್ಸ್ ತಂಡದಿಂದ ನಾವು ಐದು ಚಿನ್ನದ ಪದಕ ಮತ್ತು ಒಟ್ಟು 12 ಪದಕಗಳನ್ನು ಗೆಲ್ಲುವ ಗುರಿ ಹೊಂದಿದ್ದೇವೆ. ಇದು ಪ್ಯಾರಾಲಿಂಪಿಕ್ಸ್‌ನಲ್ಲಿ ನಮ್ಮ ಅತ್ಯುತ್ತಮ ಸಾಧನೆಯಾಗಲಿದೆ ಎಂದು ಅವರು ಹೇಳಿದರು.

ಜಪಾನ್‌ನ ಕೋಬೆಯಲ್ಲಿ ಈ ವರ್ಷದ ಮೇ ತಿಂಗಳಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾರತದ ಅಥ್ಲೀಟುಗಳು ಆರು ಚಿನ್ನ, ಐದು ಬೆಳ್ಳಿ ಮತ್ತು ಆರು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದರು. ಪದಕ ಪಟ್ಟಿಯಲ್ಲಿ ಆರನೇ ಸ್ಥಾನ ಪಡೆದಿದ್ದು ಇದುವರೆಗಿನ ಭಾರತದ ಸರ್ವಶ್ರೇಷ್ಠ ಸಾಧನೆಯಾಗಿತ್ತು. ಹೀಗಾಗಿ ಸತ್ಯನಾರಾಯಣ ಅವರು ತಂಡದಿಂದ ಉತ್ತಮ ಸಾಧನೆ ನಿರೀಕ್ಷಿಸಿದ್ದಾರೆ.

ಸುಮಿತ್ ಅಂಟಿಲ್ (ಪುರುಷರ ಜಾವೆಲಿನ್ ಎಫ್64), ದೀಪ್ತಿ ಜೀವಾಂಜಿ (ಮಹಿಳೆಯರ 400 ಮೀ. ಟಿ20), ಸಚಿನ್ ಖಿಲಾರಿ (ಪುರುಷರ ಶಾಟ್ಪುಟ್ ಎಫ್46), ಏಕ್ತಾ ಭುವನ್ (ಮಹಿಳೆಯರ ಕ್ಲಬ್ ಥ್ರೊ ಎಫ್51)(, ಸಿಮ್ರಾನ್ ಶರ್ಮಾ (ಮಹಿಳೆಯರ 200 ಮೀ. ಟಿ12) ಮತ್ತು ಮರಿಯಪ್ಪನ್ ತಂಗವೇಲು (ಪುರುಷರ ಹೈಜಂಪ್ ಟಿ42) ಚಿನ್ನ ಗೆದಿದ್ದರು.

2021ರ ಟೋಕಿಯೊ ಪ್ಯಾರಾ ಕ್ರೀಡೆಗಳಲ್ಲಿ ಭಾರತದ ಸ್ಪರ್ಧಿಗಳು ದಾಖಲೆಯ 19 ಪದಕಗಳನ್ನು (5 ಚಿನ್ನ, 8 ಬೆಳ್ಳಿ ಮತ್ತು 6 ಕಂಚು) ಗೆದ್ದುಕೊಂಡು ಗಮನ ಸೆಳೆದಿದ್ದರು. ಈ ಬಾರಿ ಭಾರತ 12 ವಿವಿಧ ಕ್ರೀಡೆಗಳಲ್ಲಿ ಭಾಗವಹಿಸುವ 84 ಅಥ್ಲೀಟುಗಳ ದಂಡನ್ನು ಕಳುಹಿಸುತ್ತಿದೆ. ಇದು ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಭಾರತ ಕಳುಹಿಸುತ್ತಿರುವ ಅತಿ ದೊಡ್ಡ ತಂಡವೆನಿಸಿದೆ.

ಗ್ರ್ಯಾಂಡ್ ಚೆಸ್ ಟೂರ್ನಿ ಡ್ರಾ ಬಿಟ್ಟು ಮತ್ತೇನಿಲ್ಲ

ಸೇಂಟ್ ಲೂಯಿ: ವಿಶ್ವ ಚಾಂಪಿಯನ್‌ಶಿಪ್ ಪಟ್ಟಕ್ಕೆ ಚಾಲೆಂಜರ್ ಆಗಿರುವ ಭಾರತದ ಡಿ.ಗುಕೇಶ್, ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ರಷ್ಯಾದ ಇಯಾನ್ ನಿಪೊಮ್ನಿಷಿ ಜತೆ ಡ್ರಾ ಮಾಡಿಕೊಂಡರು. ಎರಡನೇ ಸುತ್ತಿನ ಎಲ್ಲ ಐದೂ ಪಂದ್ಯಗಳು ಮಂಗಳವಾರ ಡ್ರಾ ಆದವು.

ಮೊದಲ ಸುತ್ತಿನಲ್ಲಿ ಹಾಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಜೊತೆ ಸುಲಭವಾಗಿ ಡ್ರಾ ಮಾಡಿಕೊಂಡಿದ್ದ ಗುಕೇಶ್ ಅವರಿಗೆ ಎರಡನೇ ಸುತ್ತಿನ ಪಂದ್ಯ ಭಿನ್ನರೀತಿಯದಾಗಿತ್ತು.

ಪಂದ್ಯದ ಬಹುತೇಕ ಭಾಗ ಅವರು, ರಷ್ಯಾದ ಎದುರಾಳಿ ವಿರುದ್ಧ ಕೊಂಚಮಟ್ಟಿಗೆ ಮೇಲುಗೈ ಸಾಧಿಸಿದ್ದರು. ಆದರೆ ಎರಡು ಬಾರಿ ಕ್ಯಾಂಡಿಡೇಟ್ಸ್ ಚಾಂಪಿಯನ್ ಆಗಿರುವ ನಿಪೊಮ್‌ನಿಷಿ ಸುಲಭವಾಗಿ ಬಿಟ್ಟುಕೊಡಲಿಲ್ಲ. ಕರಾರುವಾಕ್ ರಕ್ಷಣೆ ಮತ್ತು ಪ್ರತಿದಾಳಿಗಳ ಮೂಲಕ ಸೋಲುತಪ್ಪಿಸಿಕೊಂಡರು. ಪಾನ್ (ಕಾಲಾಳು), ನೈಟ್ (ಕುದುರೆ) ಎಂಡ್ಗೇಮ್ ಕಂಡ ಪಂದ್ಯ 60 ನಡೆಗಳಲ್ಲಿ ಡ್ರಾ ಆಯಿತು.

ಭಾರತದ ಇನ್ನೊಬ್ಬ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ಡ್ರಾ ಮಾಡಿಕೊಂಡರು.

ಮೊದಲ ಸುತ್ತಿನಲ್ಲಿ ಜಯಗಳಿಸಿದ್ದ ಫ್ರಾನ್ಸ್ ಅಲಿರೇಜಾ ಫಿರೋಜ್ (1.5) ಉಳಿದವರಿಗಿಂತ ಅರ್ಧ ಪಾಯಿಂಟ್ ಮುನ್ನಡೆ ಸಾಧಿಸಿದ್ದಾರೆ. ಎಂಟು ಆಟಗಾರರು ತಲಾ ಒಂದು ಪಾಯಿಂಟ್ಸ್ ಹೊಂದಿದ್ದಾರೆ. ಮೊದಲ ಸುತ್ತಿನಲ್ಲಿ ಅಲಿರೇಜಾ ಅವರಿಗೆ ಸೋತಿದ್ದ ಕರುವಾನ ಅರ್ಧ ಪಾಯಿಂಟ್ಸ್ ಹೊಂದಿದ್ದು ಕೊನೆಯ ಸ್ಥಾನದಲ್ಲಿದ್ದಾರೆ. ಟೂರ್ನಿಯು 9 ಸುತ್ತುಗಳನ್ನು ಹೊಂದಿದೆ.

ಇರಾನ್ ಮೂಲದ ಅಲಿರೇಜಾ ಎರಡನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡರು. ಡಚ್ ಆಟಗಾರ ಅನೀಶ್ ಗಿರಿ ಕೂಡ ಚೀನಾದ ಡಿಂಗ್ ಲಿರೆನ್ ಜೊತೆ ಡ್ರಾ ಒಪ್ಪಂದಕ್ಕೆ ಸಹಿಹಾಕಿದರು.

ಅಮೆರಿಕದ ಆಟಗಾರರ ವ್ಯವಹಾರವಾಗಿದ್ದ ದಿನದ ಇನ್ನೊಂದು ಪಂದ್ಯದಲ್ಲೂ ನಿರ್ಣಾಯಕ ಫಲಿತಾಂಶ ಬರಲಿಲ್ಲ. ವೆಸ್ಲಿ ಸೊ ಅವರು ಕರುವಾನ ಜೊತೆ ಕದನ ವಿರಾಮಕ್ಕೆ ಸಹಿ ಮಾಡಿದರು. 2.93 ಕೋಟಿ ರು. ಬಹುಮಾನ ಮೊತ್ತದ ಈ ಟೂರ್ನಿ ಗ್ರ್ಯಾಂಡ್ ಚೆಸ್ ಸರಣಿಯ ಅಂತಿಮ ಟೂರ್ನಿಯಾಗಿದೆ.

ಹಾಕಿ ದಿಗ್ಗಜ ಶ್ರೀಜೇಶ್‌ಗೆ 2 ಕೋಟಿ ರು. ಬಹುಮಾನ

ತಿರುವನಂತಪುರ: ಇತ್ತೀಚೆಗೆ ಅಂತಾರಾಷ್ಟ್ರೀಯ ಹಾಕಿಗೆ ವಿದಾಯ ಹೇಳಿದ್ದ ದಿಗ್ಗಜ ಗೋಲ್ಕೀಪರ್ ಪಿ.ಆರ್.ಶ್ರೀಜೇಶ್ ಅವರಿಗೆ ಕೇರಳ ಸರಕಾರ 2 ಕೋಟಿ ರು. ನಗದು ಬಹುಮಾನ ಪ್ರಕಟಿಸಿದೆ.



ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಯಿತು ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ. ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತ ಹಾಕಿ ತಂಡ ಕಂಚಿನ ಪದಕ ಗೆದ್ದುಕೊಂಡಿದ್ದು, ತಂಡದ ಪ್ರಮುಖ ಆಟಗಾರ ಶ್ರೀಜೇಶ್ ಅವರಿಗೆ 2 ಕೋಟಿ ರು. ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಲಾಗಿದೆ. ಕೇರಳದ ಎರ್ನಾಕುಲಂ ಜಿಲ್ಲೆಯವರಾದ ಶ್ರೀಜೇಶ್ ಭಾರತ ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲೂ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿ ಅವರು ಆಡಿದ್ದರು. ಒಟ್ಟು ನಾಲ್ಕು ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ.

ಸಿನ್ಸಿನಾಟಿ ಓಪನ್ ಪಂದ್ಯಾವಳಿಯಲ್ಲಿ ಸಿನ್ನರ್ ಚಾಂಪಿಯನ್ | ಮಹಿಳಾ ವಿಭಾಗದಲ್ಲಿ ಸಬಲೆಂಕಾ ಗೆಲುವು

ವಿಶ್ವದ ನಂಬರ್ 1 ಸ್ಥಾನವನ್ನು ಬಿಟ್ಟುಕೊಡದ ಜಾನಿಕ್ ಸಿನ್ನರ್

ಸಿನ್ಸಿನಾಟಿ: ಸಿನ್ಸಿನಾಟಿ ಓಪನ್ ಟೆನಿಸ್ ಪಂದ್ಯಾವಳಿಯ ಪುರುಷರ ಫೈನಲ್‌ನಲ್ಲಿ ವಿಶ್ವದ ನಂ.1 ಆಟಗಾರ, ಇಟಲಿಯ ಜಾನಿಕ್ ಸಿನ್ನರ್ ಅಮೆರಿಕದ ಫ್ರಾನ್ಸೆಸ್ ಥಿಯಾಫೊ ವಿರುದ್ಧ 7–6 (7/4), 6–2ರ ನೇರ ಸೆಟ್‌ಗಳಿಂದ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಬಲ್ಗೇರಿಯಾದ ಅರಿನಾ ಸಬಲೆಂಕಾ ಅಮೆರಿಕದ ಜೆಸ್ಸಿಕಾ ಪೆಗುಲಾ ಅವರನ್ನು ಹಿಮ್ಮೆಟ್ಟಿಸಿ ಚೊಚ್ಚಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಅತ್ಯಂತ ಜಿದ್ದಾಜಿದ್ದಿನಿಂದ ನಡೆದ ಪುರುಷರ ಫೈನಲ್‌ನ ಮೊದಲ ಸೆಟ್ ಟೈ ಬ್ರೇಕರ್ ತನಕ ಸಾಗಿ ಫಲಿತಾಂಸ ಕಂಡಿತು. ದ್ವಿತೀಯ ಸೆಟ್ ಕೂಡ ಒಂದು ಹಂತದ ತನಕ ತೀವ್ರ ಪೈಪೋಟಿಯಿಂದ ಸಾಗಿದರೂ ಕೂಡ ಜಾನಿಕ್ ಸಿನ್ನರ್ ಅವರ ಬಲಿಷ್ಠ ಹೊಡೆತಗಳಿಗೆ ತಡೆಯೊಡ್ಡುವಲ್ಲಿ ವಿಫಲವಾದ ಅಮೆರಿಕದ 26 ವರ್ಷ ವಯಸ್ಸಿನ ಫ್ರಾನ್ಸೆಸ್ ಥಿಯಾಫೊ ಸೋಲು ಕಂಡರು. ಉಭಯ ಆಟಗಾರರಿಗೂ ಇದು ಟೂರ್ನಿಯ ಚೊಚ್ಚಲ ಫೈನಲ್ ಪಂದ್ಯವಾಗಿತ್ತು. ಸೆಮಿಫೈನಲ್‌ನಲ್ಲಿ ಜಾನಿಕ್ ಸಿನ್ನರ್ 7–6 (9), 5–7, 7–6 (4) ಅಂತ ರದಿಂದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ ಅವರನ್ನು ಮಣಿಸಿದಾಗಲೇ ಈ ಬಾರಿ ಚಾಂಪಿ ಯನ್ ಆಗುತ್ತಾರೆ ಎಂದು ನಿರೀಕ್ಷೆ ಮಾಡಲಾಗಿತ್ತು. ನಿರೀಕ್ಷೆಯಂತೆ ಅವರು ಟ್ರೋಫಿಯನ್ನು ಗೆದ್ದಿದ್ದಾರೆ.

ಪ್ರಶಸ್ತಿ ಗೆದ್ದ ಅತಿ ಕಿರಿಯ ಆಟಗಾರ

ಚಾಂಪಿಯನ್ ಪಟ್ಟ ಅಲಂಕರಿಸುವ ಮೂಲಕ 2008ರ ಬಳಿಕ ಸಿನ್ಸಿನಾಟಿ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಹೆಗ್ಗಳಿಕೆಗೆ ಸಿನ್ನರ್ ಪಾತ್ರವಾದರು. 16 ವರ್ಷಗಳ ಹಿಂದೆ 21 ವರ್ಷ ವಯಸ್ಸಿನಲ್ಲಿ ಇಂಗ್ಲೆಂಡ್‌ನ ಆ್ಯಂಡಿ ಮರ್ರೆ ಚಾಂಪಿಯನ್ ಆಗಿ ದಾಖಲೆ ಬರೆದಿದ್ದಾರೆ. ಸಿನ್ನರ್ ಪ್ರಸ್ತುತ ಟೆನಿಸ್ ಋತುವಿನಲ್ಲಿ ಗೆದ್ದ ಐದನೇ ಟ್ರೋಫಿ ಇದಾಗಿದೆ. ಮೆಲ್ಬರ್ನ್‌ನಲ್ಲಿ ಆಸ್ಟ್ರೇಲಿಯಾ ಓಪನ್ ಕಿರೀಟದೊಂದಿಗೆ ಅವರು ತಮ್ಮ ಋತುವನ್ನು ಪ್ರಾರಂಭಿಸಿದ್ದರು. ಒಟ್ಟಾರೆಯಾಗಿ ಅವರ ಟೆನಿಸ್ ವೃತ್ತಿಜೀವನದಲ್ಲಿ ಗೆದ್ದ 15ನೇ ಪ್ರಶಸ್ತಿಯಾಗಿದೆ.

ಚೊಚ್ಚಲ ಪ್ರಶಸ್ತಿ ಗೆದ್ದ ಸಬಲೆಂಕಾ: ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಸಬಲೆಂಕಾ 6–3, 7–5 ನೇರ ಸೆಟ್‌ಗಳ ಅಂತರದಿಂದ ಅಮೆರಿಕದ ಜೆಸ್ಸಿಕಾ ಪೆಗುಲಾ ಅವರನ್ನು ಹಿಮ್ಮೆಟ್ಟಿಸಿ ಚೊಚ್ಚಲ ಟ್ರೋಫಿಗೆ ಮುತ್ತಿಕ್ಕಿದರು. 26 ವರ್ಷದ ಸಬಲೆಂಕಾ ಸಿನ್ಸಿನಾಟಿ ಓಪನ್‌ನಲ್ಲಿ ಇದೇ ಮೊದಲ ಬಾರಿ ಫೈನಲ್ ತಲುಪಿದ್ದರು. ಈ ಹಿಂದೆ ಆಡಿದ್ದ ಮೂರು ಬಾರಿ ಸೆಮಿಫೈನಲ್ ಪ್ರವೇಶಿಸುವ ಹಾದಿಯಲ್ಲಿ ಸೋಲು ಕಂಡಿದ್ದರು. ಈ ಬಾರಿ ಟೂರ್ನಿಯಲ್ಲಿ ಒಂದೇ ಒಂದು ಸೆಟ್ ಕಳೆದುಕೊಳ್ಳದೆ ಪ್ರಶಸ್ತಿಯನ್ನು ಗೆದ್ದುಕೊಂಡ ಹಿರಿಮೆಗೆ ಪಾತ್ರರಾದರು.

ಟೇಕ್ವಾಂಡೋ ಗರ್ಲ್ ಆಗಮನಕ್ಕೆ ಡೇಟ್ ಫಿಕ್ಸ್

ಇಂದಿಗೂ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ಇದಕ್ಕೆಲ್ಲ ಕಡಿವಾಣ ಅಗತ್ಯವಾಗಿದ್ದು, ಹೆಣ್ಣು ಮಕ್ಕಳು ಕರಾಟೆ, ಟೇಕ್ವಾಂಡೋ ಸಮರ ಕಲೆಯನ್ನು ಕಲಿಯಬೇಕಾಗಿದೆ. ಇದರಿಂದ ಹೆಣ್ಣು ಮಕ್ಕಳು ತಮ್ಮನ ತಾವು ರಕ್ಷಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಇಂತಹದ್ದೇ ಕಥೆಯನ್ನು ಹೊತ್ತ ಟೇಕ್ವಾಂಡೋ ಗರ್ಲ್ ಚಿತ್ರ ತೆರೆಗೆ ಸಿದ್ಧವಾಗಿದೆ. ಇದೇ 30 ರಂದು ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಈ ಚಿತ್ರದ ಟೀಸರ್ ಅನ್ನು ನಿರ್ದೇಶಕ ಇಂದ್ರಜಿತ್ ಲಂಕೇಶ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಒಂದು ಬಡ ಕುಟುಂಬದ ಹೆಣ್ಣು ಮಗಳು ಶಿಕ್ಷಣಕ್ಕಾಗಿ ಎಷ್ಟು ಕಷ್ಟ ಪಡುತ್ತಾಳೆ, ಓದುವುದೇ ಕಷ್ಟ ಇರುವಂತ ಸಮಯದಲ್ಲಿ ಇದರ ಮದ್ಯೆ ಟೇಕ್ವಾಂಡೋ ಸಮರ ಕಲೆ ಹೇಗೆ ಕಲಿಯುತ್ತಾಳೆ, ಈ ವಿದ್ಯೆಯ ಮುಖಾಂತರ ಸಮಾಜಕ್ಕೆ ಹೇಗೆ ಮಾದರಿಯಾಗುತ್ತಾಳೆ ಎನ್ನುವುದೇ ಈ ಚಿತ್ರದ ಕಥೆ. ರವೀಂದ್ರ ವಂಶಿ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದು, ಈ ಚಿತ್ರಕ್ಕಾಗಿ ನಿರ್ದೇಶಕರೂ ಕೂಡ ಟೇಕ್ವಾಂಡೋ ಕಲಿತ್ತಿದ್ದಾರೆ. ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಋತು ಸ್ಪರ್ಶ ಮೂರನೇ ವಯಸ್ಸಿನಿಂದ ಈ ಕಲೆಯನ್ನು ಅಭ್ಯಾಸ ಮಾಡಿದ್ದಾಳೆ. ಒಟ್ಟು ಎಂಟು ಪರೀಕ್ಷೆಗಳನ್ನು ಎದುರಿಸಿ ಈಗ ಬ್ಲಾಕ್ ಬೆಲ್ಟ್ ಪಡೆದು ನಾಲ್ಕು ಅಂತಾರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿಯೂ ಭಾಗವಹಿಸಿದ್ದಾಳೆ.

ಋತುಸ್ಪರ್ಶ ತಾಯಿ ಡಾ.ಸುಮೀತಾ ಪ್ರವೀಣ್, ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಸಮರ ಕಲೆಯ ಜತೆಗೆ ಹಣುಮಕ್ಕಳ ರಕ್ಷಣೆಯ ಬಗ್ಗೆ ತಿಳಿಸಲು ಟೇಕ್ವಾಂಡೋ ಗರ್ಲ್ ಚಿತ್ರ ನಿರ್ಮಾಣ ಮಾಡಿದ್ದಾಗಿ ಡಾ.ಸುಮಿತ್ರಾ ಹೇಳುತ್ತಾರೆ. ಈ ಚಿತ್ರದಲ್ಲಿ ಸುಮಾರು ಇನ್ನೂರು ಟೇಕ್ವಾಂಡೋ ವಿಧ್ಯಾರ್ಥಿಗಳು ಅಭಿನಯಿಸಿದ್ದಾರೆ. ತ್ಯಾಗರಾಜ್ ಚಿತ್ರಕ್ಕೆ ಹಿನ್ನೆಲೆ ಸಂಗೀತ ನೀಡುವ ಜತೆಗೆ ಹಾಡುಗಳಿಗೂ ಸಂಗೀತ ಸಂಯೋಜಿಸಿದ್ದಾರೆ.

ಅಂತಿಮ ಹಂತದಲ್ಲಿ ಕಾಂತಾರ 1

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ ಕಾಂತಾರ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರೆತಿದ್ದು, ಇಡೀ ಕರುನಾಡಿಗೆ ಹೆಮ್ಮೆ ತಂದಿದೆ. ಈ ನಡುವೆ ಕಾಂತಾರ ಚಾಪ್ಟರ್ 1 ಚಿತ್ರದ ಚಿತ್ರೀಕರಣ ಕೂಡ ಭರದಿಂದ ಸಾಗುತ್ತಿದೆ. ಇದೇ ತಿಂಗಳ ಅಂತ್ಯದಲ್ಲಿ ನಾಲ್ಕನೇ ಹಂತದ ಚಿತ್ರೀಕರಣ ಆರಂಭವಾಗಲಿದೆ. ಕಾಂತಾರ ಚಾಪ್ಟರ್ 1, ಕಾಂತಾರದ ಪ್ರೀಕ್ವೆಲ್ ಆಗಿದ್ದು ರಿಷಬ್ ಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಚಿತ್ರಕ್ಕಾಗಿ ಕುಂದಾಪುರದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ. ಈ ಚಿತ್ರವನ್ನು ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ವಿಜಯ್ ಕಿರಗಂದೂರು ನಿರ್ಮಾಣ ಮಾಡುತ್ತಿದ್ದು, ಕಾಂತಾರ ಚಾಪ್ಟರ್ 1 ರೋಚಕವಾಗಿ ಮೂಡಿಬರಲಿದೆ. ಕಾಡು ಬೆಟ್ಟದ ಶಿವನ ಪೂರ್ವಪರ ಕಥೆಯನ್ನು ಇಲ್ಲಿ ಹೇಳಲಾಗುತ್ತಿದೆ. ಐತಿಹಾಸಿಕ ಅಂಶಗಳ ಜತೆಗೆ ಒಂದಷ್ಟು ಪೌರಾಣಿಕ ಸ್ಪರ್ಶವೂ ಇದ್ದು, ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸುತ್ತಿದ್ದಾರೆ. ಈ ಹಿಂದೆ ಬಿಡುಗಡೆಯಾದ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಅದ್ಭುತವಾಗಿದ್ದು ಸಿನಿಪ್ರಿಯರ ಮನಸೂರೆಗೊಂಡಿದೆ. ಚಿತ್ರದ ಬಿಡುಗಡೆಗೆ ಎಲ್ಲರೂ ಕಾತರರಾಗಿದ್ದಾರೆ.

ಲಂಗೋಟಿ ಮ್ಯಾನ್‌ಗೆ ಶರಣ್ ಸಾಥ್



ಸಂಜೋತಾ ಭಂಡಾರಿ ಕಥೆ ಬರೆದು ನಿರ್ದೇಶಿಸಿರುವ ಲಂಗೋಟಿ ಮ್ಯಾನ್ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ವಿಭಿನ್ನ ಟೈಟಲ್ ಜತೆಗೆ ಸ್ಟೋರಿಯನ್ನು ಒಳಗೊಂಡಿರುವ ಈ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ನಟ ಶರಣ್ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಇಲ್ಲಿ ಮನರಂಜನೆಯ ಮುಖ್ಯವಾಗಿದ್ದು, ಉತ್ತಮ ಕಟೆಂಟ್ ಇದೆ ಎಂಬುದು ಟೀಸರ್‌ನಲ್ಲಿ ತಿಳಿಯುತ್ತದೆ. ಇದೊಂದು ಹೊಸ ಪ್ರಯತ್ನ ಎಂದು ಶರಣ್ ಮೆಚ್ಚುಗೆ ವ್ಯಕ್ತಪಡಿಸಿದರು.

ಲಂಗೋಟಿ ಮ್ಯಾನ್ ಟೀಸರ್ ಕೂಡ ವಿಭಿನ್ನವಾಗಿದೆ, ಇಲ್ಲಿ ಪಾತ್ರಕ್ಕಿಂತ ಪಾತ್ರ ಪರಿಚಯವೇ ಮುಖ್ಯವಾಗಿದ್ದು, ಶೀರ್ಷಿಕೆಯೇ ಹೇಳು ವಂತೆ ಇದು ವಸ್ತ್ರದ ಸುತ್ತ ಸಾಗುವ ಕಥೆಯಾಗಿದೆ. ಮಾಡದ ತಪ್ಪಿಗೆ ಪೇಚಿಗೆ ಸಿಲುಕುವ ನಾಯಕ ಹೇಗೆಲ್ಲ ಕಷ್ಟಪಡುತ್ತಾನೆ ಎಂಬುದನ್ನು ಕಾಮಿಡಿ ಬೆರೆಸಿ ಕಟ್ಟಿಕೊಡಲಾಗಿದೆ. ಆಕಾಶ್ ರಾಂಬೊ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಸಂಹಿತಾ ವಿನ್ಯಾ, ಸ್ನೇಹಾ ಋಷಿ ನಾಯಕಿ ಯರಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಧೀರೇಂದ್ರ, ಮಹಾಲಕ್ಷ್ಮಿ, ಹುಲಿ ಕಾರ್ತಿಕ್, ಪವನ್, ಆಟೋ ನಾಗರಾಜ್ ಮುಂತಾದ ವರು ತಾರಾಬಳಗದಲ್ಲಿದ್ದಾರೆ. ತನು ಟಾಕೀಸ್ ಲಾಂಛನದಲ್ಲಿ ಚಿತ್ರ ನಿರ್ಮಾಣವಾಗಿದೆ.

ನಾನು ಬೇರೆ ಒಂದು ಚಿತ್ರದ ಕಥೆ ಮಾಡುತ್ತಿದ್ದಾಗ ಈ ಕಾನ್ಸೆಪ್ಟ್ ಬಂತು. ಇದನ್ನು ಬದಿಗೊತ್ತಿ ಬೇರೆ ಸ್ಟೋರಿ ಬರೆಯುತ್ತಿದ್ದರೂ ಇದೇ ಕಥೆ ನನ್ನನ್ನು ಆವರಿಸಿತ್ತು. ಕೊನೆಗೆ ಲಂಗೋಟಿ ಮ್ಯಾನ್ ಸಿನಿಮಾ ಸ್ವರೂಪ ಪಡೆದುಕೊಂಡಿತು. ಈ ಚಿತ್ರದಲ್ಲಿ ಲಂಗೋಟಿಯೇ ನಿಜವಾದ ಹೀರೊ.

-ಸಂಜೋತಾ ಭಂಡಾರಿ ನಿರ್ದೇಶಕಿ

ಬಘೀರನ ನೆನೆದ ದೇವ

ಕನ್ನಡ ಚಿತ್ರರಂಗದಲ್ಲಿ ಹೊಸ ಪ್ರತಿಭೆಗಳ ದಂಡೇ ಇದೆ. ಹೊಸಬರು ಹೊಸ ಪ್ರಯತ್ನದ ಮೂಲಕ ಗಮನಸೆಳೆಯುತ್ತಿದ್ದಾರೆ. ಅದರಲ್ಲಿ ನಟ ದೇವನ್ ಕೂಡ ಭರವಸೆ ಮೂಡಿಸಿದ್ದಾರೆ. ಕಿರುತೆರೆಯಲ್ಲಿ ಖ್ಯಾತಿಗಳಿಸಿರುವ ದೇವನ್ ಚಂದನವನಕ್ಕೂ ಕಾಲಿಟ್ಟಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ನಿರೀಕ್ಷೆ ಹೆಚ್ಚಿಸಿರುವ ಬಘೀರ ಚಿತ್ರದಲ್ಲಿ ದೇವ್ ನಟಿಸಿದ್ದು ಚಿತ್ರದ ಬಿಡುಗಡೆಗೆ ಎದಿರು ನೋಡುತ್ತಿದ್ದಾರೆ.

ಕಾಫಿನಾಡಿನ ದೇವ್, ನಟನಾಗಬೇಕು ಎಂದು ಹಂಬಲ ಹೊತ್ತು ಬೆಂಗಳೂರಿಗೆ ಬಂದವರು. ಅದಕ್ಕಾಗಿ ಅಭಿನಯ ತರಂಗ ಸೇರಿ ನಟನೆಯ ಬಗ್ಗೆ ಕಲಿತರು. ಮಾಡೆಲಿಂಗ್ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡು ಮಿ.ಕರ್ನಾಟಕ ಬಿರುದು ಪಡೆದ ದೇವ್, ರಾಧಿಕಾ ಧಾರಾವಾಹಿಯ ಮೂಲಕ ನಟನೆಗೆ ಎಂಟ್ರಿಕೊಟ್ಟರು. ಅಮೃತಘಳಿಗೆ ದೇವ್‌ಗೆ ಪ್ರಸಿದ್ಧಿ ತಂದುಕೊಟ್ಟಿತು. ಈ ಧಾರಾವಾಹಿಯಲ್ಲಿ ಅರುಣ್ ಪಾತ್ರದಲ್ಲಿ ನಟಿಸಿದ ದೇವ್ ಪ್ರೇಕ್ಷಕರ ಮನಸೂರೆಗೊಂಡರು. ಸದ್ಯ ಪ್ರಸಾರವಾಗುತ್ತಿರುವ ಜಾನಕಿ ಸಂಸಾರ ಧಾರಾವಾಹಿಯಲ್ಲಿ ನಾಯಕನ ತಮ್ಮ ಗೌರವ್ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಕ್ರಿಕೆಟರ್ ಆಗಬೇಕೆಂದ್ದ ನಾನು ನಟನಾದೆ. ಈಗ ನಟನೆಯೇ ನನ್ನ ಉಸಿರು. ಇದುವರೆಗೂ ನಾನು ನಟಿಸಿದ ಧಾರಾವಾಹಿಗಳಲ್ಲಿ ಒಳ್ಳೆಯ ಪಾತ್ರಗಳೇ ಸಿಕ್ಕಿವೆ. ಬಘೀರ ಚಿತ್ರದಲ್ಲಿ ನನಗೆ ಅಭಿನಯಿಸಲು ಅವಕಾಶ ಕೊಟ್ಟಿದ್ದು ಖುಷಿ ಕೊಟ್ಟಿದೆ. ಅಂತಹ ದೊಡ್ಡ ಚಿತ್ರದಲ್ಲಿ ನಟಿಸಿದ್ದು ನನಗೆ ಹೆಮ್ಮೆ ಎನಿಸಿದೆ. ಪರಭಾಷಾ ಚಿತ್ರಗಳಲ್ಲಿ ನಟಿಸಲು ಅವಕಾಶ ಅರಸಿ ಬರುತ್ತಿವೆ. ಆದರೆ ಕನ್ನಡ ಚಿತ್ರರಂಗದಲ್ಲಿಯೇ ಮುಂದುವರಿಯಬೇಕು ಎಂಬ ಬಯಕೆ ನನ್ನದು. ಆ ಬಳಿಕ ಪರಭಾಷೆ ಚಿತ್ರಗಳತ್ತ ಗಮನಹರಿಸುತ್ತೇನೆ ಎನ್ನುತ್ತಾರೆ ದೇವನ್. ಸದ್ಯ ದೇವ್ ಕಿರುತೆರೆ ಪ್ರಿಯರ ಗೌರವ್ ಆಗಿ ಗುರುತಿಸಿಕೊಂಡಿದ್ದಾರೆ.

ಮುಂದಿನ ವಾರ ಮೈಹೀರೊ

ಅವಿನಾಶ್ ವಿಜಯಕುಮಾರ್ ನಿರ್ಮಿಸಿ, ನಿರ್ದೇಶಿಸಿರುವ ಮೈ ಹೀರೋ ಈ ತಿಂಗಳಾಂತ್ಯಕ್ಕೆ ತೆರೆಗೆ ಬರಲಿದೆ. ಸದ್ಯ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕತೂಹಲ ಮೂಡಿಸಿದೆ. ಭಾರತದಲ್ಲಿ ಇಂದಿಗೂ ಮನೆ ಮಾಡಿರುವ ಜಾತಿ ವ್ಯವಸ್ಥೆ ಅದರಿಂದಾಗಿ ಎದಿರಾಗುತ್ತಿರುವ ಸಮಸ್ಯೆಯ ಕುರಿತಂತೆ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ನೈಜ ಘಟನೆಗಳನ್ನು ಆಧರಿಸಿ ಈ ಚಿತ್ರ ಸಿದ್ಧವಾಗಿದೆ. ಹಾಲಿವುಡ್ ಕಲಾವಿದರಾದ ಜಿಲಾಲಿ ರಜ್ ಕಲ್ಲಹ್, ಎರಿಕ್ ರಾಬರ್ಟ್ ಹಾಗೂ ಬಾಲನಟ ವೇದಿಕ್ ಕೌಶಿಕ್ ಮೈ ಹೀರೋ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ಬೆಳವಾಡಿ ಜಿಲ್ಲಾಧಿಕಾರಿಯಾಗಿ, ಹಿರಿಯನಟ ದತ್ತಣ್ಣ ಪುರೋಹಿತರ ಪಾತ್ರದಲ್ಲಿ ಅಭಿನಯಿಸಿದ್ದಾರೆ. ನಟಿ ಅಂಕಿತಾ ಅಮರ್ ವಿಶೇಷ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ನಾನು ಮಧ್ಯಪ್ರದೇಶದ ಯುವತಿಯ ಪಾತ್ರದಲ್ಲಿ ನಟಿಸಿದ್ದೇನೆ. ಮಧ್ಯಪ್ರದೇಶದ ಮಹೇಶ್ವರ ಎಂಬ ಸ್ಥಳದಲ್ಲಿ ವಾರಣಾಸಿಯಲ್ಲಿರುವಂತೆ ಅನೇಕ ಘಾಟ್‌ಗಳಿವೆ. ಅಹಲ್ಯಾ ಬಾಯಿ ಎಂಬ ಮಹಾರಾಣಿ ಈ ಘಾಟ್‌ಗಳನ್ನು ನಿರ್ಮಿಸಿದ್ದರು. ಅಲ್ಲಿ ಅವರ ಪ್ರತಿಮೆ ಕೂಡ ಇದೆ. ಈ ಚಿತ್ರದಲ್ಲಿ ನಟಿಸುವುದಕ್ಕೆ ಮುಂಚೆ ನಾನು ಅಲ್ಲಿನ ವಿಷಯಗಳನ್ನು ತಿಳಿದುಕೊಂಡೆ ಹಾಗಾಗಿ ನನ್ನ ಪಾತವನ್ನು ನಿರ್ವಹಿಸಲು ಸುಲಭವಾಯಿತು ಎಂದು ಅಂಕಿತಾ ಅಮರ್ ಹೇಳಿ ದರು. ಚಿತ್ರದ ಹಾಡುಗಳಿಗೆ ಗಗನ್ ಬಡೇರಿಯಾ ಸಂಗೀತ ಸಂಯೋಜಿಸಿದ್ದಾರೆ.

ಇತ್ತೀಚೆಗೆ ಉತ್ತರ ಕರ್ನಾಟಕದಲ್ಲಿ ಒಂದು ಘಟನೆ ನಡೆದಿತ್ತು. ಅದನ್ನು ಆಧಾರವಾಗಿಟ್ಟುಕೊಂಡು ಈ ಚಿತ್ರಕಥೆ ರಚಿಸಿದ್ದೇನೆ. ಹಳ್ಳಿಗಳಲ್ಲಿ ಈಗಲೂ ಜಾತಿ ಪದ್ಧತಿ ಇದೆ. ಅದರಿಂದ ತುಳಿತಕ್ಕೊಳಗಾ ದವರು ಯಾವೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಮೈ ಹೀರೊ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ನಿರ್ಮಾಣವಾಗಿದೆ. ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಸಂಭಾಷಣೆ ಇರಲಿದೆ.

-ಅವಿನಾಶ್ ವಿಜಯಕುಮಾರ್ ನಿರ್ದೇಶಕ

ಮಾರಿಯ ದಾರಿಯಲಿ ರುದ್ರ

ಫಸ್ಟ್ ಲುಕ್ ಟೀಸರ್ ಮೂಲಕ ಪ್ರೇಕ್ಷಕರ ಮನಗೆದ್ದಿರುವ ಮಾರಿಗೆ ದಾರಿ ತೆರೆಗೆ ರೆಡಿಯಾಗಿದೆ. ಅಗಸ್ತ್ಯ ನಿರ್ದೇಶನ ಮಾಡುವ ಜತೆಗೆ, ನಾಯಕನಾಗಿಯೂ ನಟಿಸಿದ್ದಾರೆ. ಎ.ಅನಂತ್ ಕುಮಾರ್, ರುದ್ರನಾಗಿ ಅವತಾರ ತಾಳಿದ್ದು, ಖಡಕ್ ವಿಲನ್ ಆಗಿ ಕಾಣಿಸಿಕೊಂಡಿದ್ದಾರೆ. ಇದು ಆ್ಯಕ್ಷನ್ ಥ್ರಿಲ್ಲರ್ ಬೆರೆತ ಸಿನಿಮಾವಾಗಿದ್ದು ನಿರ್ದೇಶಕ ಅಗಸ್ತ್ಯ ನಾಯಕನ ಅಬ್ಬರಕ್ಕೆ ಹೆಚ್ಚಿನ ಒತ್ತು ನೀಡದೆ, ಪಾತ್ರಗಳು ಒಂದಕ್ಕೊಂದು ಮೀರಿ ಮಿಂಚುವಂತೆ ಅವಕಾಶ ಮಾಡಿ ಕೊಟ್ಟಿದ್ದಾರಂತೆ. ಒಂದರ್ಥದಲ್ಲಿ ವಿಲನ್ ಪಾತ್ರವೇ ಇಲ್ಲಿ ಪ್ರಮುಖವಾಗಿದೆಯಂತೆ. ಮಾಸ್ ದೃಶ್ಯಗಳಲ್ಲಿ ಮಿಂದೆದ್ದ ರುದ್ರ ಈ ಚಿತ್ರದ ಪ್ರಧಾನ ಆಕರ್ಷಣೆ ಎನ್ನುತ್ತಾರೆ ನಿರ್ದೇಶಕರು. ರಾಧಾ ಫಿಲಂಸ್ ಬ್ಯಾನರಿನಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಮಹಾಲಕ್ಷ್ಮಿ, ಕಾಕ್ರೋಚ್ ಸುಧಿ, ವರ್ಧನ್, ಪ್ರದೀಪ್ ಪೂಜಾರಿ, ಬೆನಕ ನಂಜಪ್ಪ, ಬಾಲ ರಾಜವಾಡಿ ಮುಂತಾದವರು ತಾರಾಗಣದಲ್ಲಿದ್ದಾರೆ. ಜಗದೀಶ್ ಗೌಡ ಛಾಯಾಗ್ರಹಣ, ರಿಯೋ ಆಂಟನಿ ಸಂಗೀತ ನಿರ್ದೇಶನ, ಜಗದೀಶ್ ಗೌಡ ಸಂಕಲನ ಈ ಚಿತ್ರಕ್ಕಿದೆ. ಸೆಪ್ಟೆಂಬರ್‌ನಲ್ಲಿ ಮಾರಿಗೆ ದಾರಿ ತೆರೆಗೆ ಬರಲಿದೆ.